
ಮಂಗಳವಾರ, ಏಪ್ರಿಲ್ 6, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 96 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**
ಚರಕಾಚಾರ್ಯರ ಪ್ರಕಾರ, ನಿದ್ರೆ ಮನುಷ್ಯನ ಸಂತೋಷ, ನೆಮ್ಮದಿ, ದುಃಖ, ದೇಹದ ಪೌಷ್ಟಿಕತೆ, ಕೃಶತೆ, ಬಲ, ದೃಢತೆ, ಜ್ಞಾನ, ಮೂಢತ್ವ, ಜೀವ, ಮರಣಗಳಿಗೆ ಕಾರಣ.



ಅನುಭವ ಮಂಟಪ: 'ನದಿ ಜೋಡಣೆ ವಿರುದ್ಧ ಸೊಲ್ಲೆತ್ತದ ಮೂರ್ಖ ಸಂಸದರು'
ಷೇರುಪೇಟೆಗೆ ಕೋವಿಡ್ ಆತಂಕ 10
ಸಿಬಿಐ ತನಿಖೆ: ದೇಶಮುಖ್ ರಾಜೀನಾಮೆ 6

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 49,159 | 14,638 | 73.30 |

ಮಾದಪ್ಪನಹಳ್ಳಿಯ ₹ 200 ಕೋಟಿ ಮೌಲ್ಯದ 32 ಎಕರೆ ಜಮೀನು

# ಆಸ್ತಿ ಕೊಳ್ಳೆಗೆ ಅಪ್ಪನೇ ಬದಲು!

• ಮಂಜುನಾಥ ಹೆಬ್ಬಾರ್

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ₹200 ಕೋಟಿ ಮೌಲ್ಯದ ಜಮೀನು ಕಬಳಿಸಲು ಅರ್ಜಿದಾರರ ಸಂಬಂಧವೇ ಅದಲು ಬದಲು ಆಗುತ್ತದೆ. ಸರ್ಕಾರಿ ಜಮೀನಿನ ಮೇಲೆ ಕಣ್ಣಿಟ್ಟ ಮೂರನೇ ವ್ಯಕ್ತಿಯೊಬ್ಬ ಮೂಲ ಅರ್ಜಿದಾರರಿಗೆ ಅಪ್ಪನಾಗುತ್ತಾನೆ. ಈ ಮೂರನೇ ವ್ಯಕ್ತಿಯ ಸಾವಿನ ಬಗ್ಗೆ ಅವರ ಪುತ್ರನೇ ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸುತ್ತಾನೆ!

ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಮಾದಪ್ಪನಹಳ್ಳಿಯ ಸರ್ವೆ ನಂಬರ್ 62ರಲ್ಲಿ 32 ಎಕರೆ 4 ಗುಂಟೆ ಜಮೀನು ಕಬಳಿಸಲು 'ಪ್ರಭಾವಿ'ಗಳು ಮಾಡಿರುವ ಕರಾಮತ್ತುಗಳಿವು.

ಇದನ್ನು ಪತ್ತೆ ಹಚ್ಚಿರುವ ಬೆಂಗಳೂರು ಉತ್ತರ ವಿಶೇಷ ಜಿಲ್ಲಾಧಿಕಾರಿ ಎಂ.ಕೆ. ಜಗದೀಶ್ ಅವರು, ಈ ಜಾಗವನ್ನು 'ಸರ್ಕಾರಿ ಜಾಗ' ಎಂದು ನಮೂದಿಸಿ ಕಂದಾಯ ಇಲಾಖೆಯ ಸ್ವಾಧೀನಕ್ಕೆ ಪಡೆಯುವಂತೆ ಯಲಹಂಕ ತಹಶೀಲ್ದಾರ್ ಅವರಿಗೆ ನಿರ್ದೇಶನ ನೀಡಿದ್ದಾರೆ. ಮಾದಪ್ಪನಹಳ್ಳಿಯಲ್ಲಿ ಎಕರೆಗೆ ₹6 ಕೋಟಿ ಮಾರುಕಟ್ಟೆ ಮೌಲ್ಯ ಇದೆ.

ಈ ಪ್ರಕರಣದ ಒಂಬತ್ತು ಪ್ರತಿವಾದಿಗಳ ಪೈಕಿ ನರಸಿಂಹಯ್ಯ ಎಂಬುವರು ಮೃತಪಟ್ಟಿದ್ದು, ಒಂಬತ್ತನೇ ಪ್ರತಿವಾದಿಯಾದ ಚರಣ್ ರೆಡ್ಡಿ ಎಂಬುವರು ಆಂಧ್ರ ಪ್ರದೇಶದ ಶಾಸಕರೊಬ್ಬರ ಹತ್ತಿರದ ಸಂಬಂಧಿ ಎಂದು ಗೊತ್ತಾಗಿದೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿ ಈ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಿದ ಆರೋಪದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಎಂ.ಕೆ.ಅಯ್ಯಪ್ಪ ಹಾಗೂ ಇತರ ಮೂವರು ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು 2013ರ ಮಾರ್ಚ್‌ನಲ್ಲಿ ಬಂಧಿಸಿದ್ದರು. ಈ ಪ್ರಕರಣದಲ್ಲಿ ನಗರದ ಶಾಸಕರೊಬ್ಬರು ಭಾಗಿಯಾಗಿದ್ದಾರೆ ಎಂದು ದೂರುದಾರರು ಹೇಳಿದ್ದರು.

ಪ್ರಜಾವಾಣಿ ವಿಶೇಷ

**ಏನಿದು ಪ್ರಕರಣ:** ಮಾದಪ್ಪನಹಳ್ಳಿಯ 32 ಎಕರೆ 4 ಗುಂಟೆ ಜಾಗವು 'ದಾಳಬೈಲಪ್ಪ ಬಿನ್ ನರಸಿಂಹಯ್ಯ' ಎಂಬುವವರಿಗೆ ಮಂಜೂರಾದ ಬಗ್ಗೆ ಕಂದಾಯ ರಿಜಿಸ್ಟರ್‌ಗಳಲ್ಲಿ ಉಲ್ಲೇಖ ಇತ್ತು. ಈ ಜಾಗ ತಮಗೆ ಸೇರಿದ್ದು ಎಂದು 'ನರಸಿಂಹಯ್ಯ ಬಿನ್ ದಾಳಬೈಲಪ್ಪ' ಎಂಬ ಹೆಸರಿನವರು 2009–10ರಲ್ಲಿ ಸಲ್ಲಿಸಿದ ಅರ್ಜಿ ಆಧರಿಸಿ ಅಂದಿನ ನಗರ ಜಿಲ್ಲಾಧಿಕಾರಿ ಎಂ.ಕೆ. ಅಯ್ಯಪ್ಪ, ಈ ಜಾಗ ನರಸಿಂಹಯ್ಯ ಅವರಿಗೆ ಸೇರಿದ್ದು ಎಂದು ಆದೇಶ ಹೊರಡಿಸಿದರು. ಈ ಮಧ್ಯೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಪರಭಾರೆ ಮಾಡಲಾಗಿದೆ ಎಂದು ಆರೋಪಿಸಿ ಅದೇ ಗ್ರಾಮದ ಅನಿಲ್ ಕುಮಾರ್, ಹರೀಶ್ ಹಾಗೂ ಮುನಿವೀರಪ್ಪ ಎಂಬುವರು ಲೋಕಾಯುಕ್ತ ನ್ಯಾಯಾಲಯದಲ್ಲಿ ದೂರು ದಾಖಲಿಸಿದರು.

ಇದು ಸರ್ಕಾರಿ ಜಮೀನು ಎಂದು ಎಂ.ಕೆ.ಅಯ್ಯಪ್ಪ ಮತ್ತೆ ಆದೇಶಿಸಿದರು. ಇದನ್ನು ಪ್ರಶ್ನಿಸಿ ಪ್ರತಿವಾದಿಗಳು ಹೈಕೋರ್ಟ್ ಮೆಟ್ಟಿಲೇರಿದರು. ಜಿಲ್ಲಾಧಿಕಾರಿಯವರ ಮೊದಲ ಆದೇಶವೇ ಸರಿಯಾಗಿದ್ದು, ಪ್ರತಿವಾದಿಗಳಿಗೆ ಖಾತೆ ಮಾಡಿಕೊಡಬೇಕು ಎಂದು ಹೈಕೋರ್ಟ್ ಆದೇಶಿಸಿತು. ಜಿಲ್ಲಾಡಳಿತ ದ್ವಿಸದಸ್ಯ ಪೀಠದ ಮೆಟ್ಟಿಲೇರಿತು. ಅಲ್ಲಿಯೂ ಪ್ರತಿವಾದಿಗಳ ಪರ ಆದೇಶ ಬಂತು.

6ನೇ ಪುಟ ನೋಡಿ

## 'ಉಲ್ಟಾ ಪಲ್ಟಾ' ಪತ್ತೆಯಾಗಿದ್ದು ಹೇಗೆ?

ಉಪವಿಭಾಗಾಧಿಕಾರಿ ಹುದ್ದೆಯಿಂದ ವಿಶೇಷ ಜಿಲ್ಲಾಧಿಕಾರಿ ಹುದ್ದೆಗೆ 2020ರಲ್ಲಿ ನಿಯುಕ್ತಿಗೊಂಡ ಎಂ.ಕೆ. ಜಗದೀಶ್ ಸ್ವಯಂಪ್ರೇರಿತವಾಗಿ ಪ್ರಕರಣ ಕೈಗೆತ್ತಿಕೊಂಡು 'ಉಲ್ಟಾ ಪಲ್ಟಾ' ಪ್ರಕರಣವನ್ನು ಪತ್ತೆ ಹಚ್ಚಿದ್ದಾರೆ.

ಅವರು ಪ್ರತಿವಾದಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿದರು. ಈ ಬಗ್ಗೆ ವರದಿ ಹಾಗೂ ಪ್ರಕರಣದ ವಿವರಗಳನ್ನು ಸಲ್ಲಿಸುವಂತೆ ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿ ಹಾಗೂ ಯಲಹಂಕ ತಹಶೀಲ್ದಾರ್‌ಗೆ ಸೂಚಿಸಿದರು. ಆದರೆ, ಅಧಿಕಾರಿಗಳಿಬ್ಬರು ಅಗತ್ಯ ದಾಖಲೆಗಳನ್ನು ಒದಗಿಸಲಿಲ್ಲ.

ವಿಶೇಷ ಜಿಲ್ಲಾಧಿಕಾರಿ ಅವರು ಈ ಹಿಂದಿನ ಆದೇಶಗಳು, ದಾಖಲೆಗಳನ್ನು ಪರಿಶೀಲಿಸಿದಾಗ ನರಸಿಂಹಯ್ಯ ಹೆಸರಿನಲ್ಲಿ ಅನಾಮಧೇಯ ವ್ಯಕ್ತಿಯೊಬ್ಬರ ಪ್ರವೇಶವಾಗಿರುವುದು ಗಮನಕ್ಕೆ ಬಂದಿದೆ. ಒಂದು ಕಡೆ 'ದಾಳಬೈಲಪ್ಪ ಬಿನ್ ನರಸಿಂಹಯ್ಯ' ಇದ್ದರೆ, ಮತ್ತೊಂದು ಕಡೆ 'ನರಸಿಂಹಯ್ಯ ಬಿನ್ ದಾಳಬೈಲಪ್ಪ' ಎಂಬ ಹೆಸರು ಉಲ್ಲೇಖವಾಗಿತ್ತು. ಭೂಗಳ್ಳರು ನರಸಿಂಹಯ್ಯ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು ಖಚಿತವಾಯಿತು. ನರಸಿಂಹಯ್ಯ ಮೃತಪಟ್ಟ ವೇಳೆ ಅವರ ಪುತ್ರ ಸಲ್ಲಿಸಿದ ಮರಣ ಪ್ರಮಾಣಪತ್ರವೂ ನಕಲಿ ಎಂಬುದೂ ದಾಖಲೆಗಳಿಂದ ಮನದಟ್ಟಾಗಿದೆ. ಇಷ್ಟೆಲ್ಲ ಆದರೂ ದಾಳಬೈಲಪ್ಪ ಬಿನ್ ನರಸಿಂಹಯ್ಯ ವಾರಸುದಾರರು ಜಿಲ್ಲಾಡಳಿತ ಅಥವಾ ಕೋರ್ಟ್ ಮೆಟ್ಟಿಲೇರಿಲ್ಲ. ನರಸಿಂಹಯ್ಯ ಮೂಲ ಹಕ್ಕುದಾರರಲ್ಲ ಎಂಬುದನ್ನು ಗಮನಿಸಿ ಎಂ.ಕೆ. ಜಗದೀಶ್ ಈ ಆದೇಶ ಹೊರಡಿಸಿದ್ದಾರೆ.

> **ಇದು ಬಂಜರು ಭೂಮಿ. ಮೂಲ ಅರ್ಜಿದಾರರಿಗೆ ಸಂಬಂಧಪಡದ ವ್ಯಕ್ತಿಯೊಬ್ಬರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಕಬಳಿಸಲು ಪ್ರಯತ್ನಿಸಿರುವುದನ್ನು ಪತ್ತೆ ಹಚ್ಚಲಾಗಿದೆ**
> **ಎಂ.ಕೆ.ಜಗದೀಶ್,** ವಿಶೇಷ ಜಿಲ್ಲಾಧಿಕಾರಿ

# ಸಿ.ಡಿ: ಎಸ್ಐಟಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣದ ತನಿಖೆ ಸಂಬಂಧ ರಾಜ್ಯ ಸರ್ಕಾರ ಮತ್ತು ವಿಶೇಷ ತನಿಖಾ ತಂಡಕ್ಕೆ(ಎಸ್ಐಟಿ) ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ತನಿಖೆಯ ಪ್ರಗತಿ ಕುರಿತ ವರದಿಯನ್ನು ಇದೇ 17ರೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಎಸ್ಐಟಿಗೆ ನಿರ್ದೇಶನ ನೀಡಿದೆ. ಸ್ವತಂತ್ರವಾಗಿ ತನಿಖೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಇಬ್ಬರು ವಕೀಲರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಸಿಬಿಐ ತನಿಖೆ ಅಥವಾ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಕೇಂದ್ರ ತನಿಖಾ ತಂಡದಿಂದ ತನಿಖೆ ನಡೆಸಬೇಕು ಎಂದು ಎಸ್. ಉಮೇಶ್ ಕೋರಿದ್ದಾರೆ. 'ಸೂಕ್ಷ್ಮ ವಿಷಯಗಳಲ್ಲಿ ಮಾಧ್ಯಮಗಳಲ್ಲಿ ಪ್ರಸಾರಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್ ರೂಪಿಸಿರುವ ಮಾರ್ಗಸೂಚಿಗಳು ಈ ಸಿ.ಡಿ ಪ್ರಕರಣಕ್ಕೆ ಅನ್ವಯವಾಗುತ್ತವೆ' ಎಂದು ಅವರು ತಿಳಿಸಿದ್ದಾರೆ.

ಈ ಪ್ರಕರಣದ ತನಿಖೆ ನಡೆಸಲು ಎಸ್ಐಟಿ ರಚಿಸಿ ನಗರ ಪೊಲೀಸ್ ಆಯುಕ್ತರು ಹೊರಡಿಸಿರುವ ಆದೇಶ ರದ್ದುಗೊಳಿಸುವಂತೆ ವಕೀಲರಾದ ಗೀತಾ ಮಿಶ್ರಾ ಕೋರಿದ್ದಾರೆ. 'ರಮೇಶ ಜಾರಕಿಹೊಳಿ ಅವರ ಪತ್ರ ಆಧರಿಸಿ ಎಸ್ಐಟಿ ರಚನೆ ಮಾಡಲಾಗಿದೆ. ಎಫ್ಐಆರ್, ಸರ್ಕಾರ ಅಧಿಸೂಚನೆ ಮತ್ತು ಎಸ್ಐಟಿ ರಚನೆ ಮಾಡಲು ಇರುವ ಕಾನೂನು ಯಾವುದು ಎಂಬುದನ್ನು ಉಲ್ಲೇಖಿಸದೆ ಆದೇಶ ಹೊರಡಿಸಲಾಗಿದೆ. ಮಾಧ್ಯಮ ಪ್ರತಿನಿಧಿಗಳಿಗೆ ತನಿಖೆಯ ಕುರಿತು ಮಾಹಿತಿ ನೀಡುತ್ತಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಬೇಕು. ತನಿಖೆಯ ಮಾಹಿತಿ ಬಹಿರಂಗಪಡಿಸುವುದು ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾದ ನಡೆ' ಎಂದು ಅವರು ದೂರಿದ್ದಾರೆ.

### ರಮೇಶ ಜಾರಕಿಹೊಳಿಗೆ ಕೋವಿಡ್

ಬೆಂಗಳೂರು: ಎಸ್ಐಟಿ ಅಧಿಕಾರಿಗಳ ಎದುರು ಸೋಮವಾರ ಬೆಳಿಗ್ಗೆ ಹಾಜರಾಗಬೇಕಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ, 'ನನಗೆ ಕೊರೊನಾ ಸೋಂಕು ತಗುಲಿದೆ' ಎಂಬ ಕಾರಣ ನೀಡಿ ವಿಚಾರಣೆಗೆ ಗೈರಾದರು.



ಎಸ್ಐಟಿ ಅಧಿಕಾರಿಗಳಿಗೆ ಪತ್ರ ಕಳುಹಿಸಿರುವ ರಮೇಶ, 'ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದೇನೆ. ನನ್ನ ಕಾರು ಚಾಲಕನಿಗೂ ಕೋವಿಡ್ ತಗುಲಿದೆ' ಎಂದಿದ್ದಾರೆ.

'ಆರೋಗ್ಯದಲ್ಲಿ ಚೇತರಿಸಿಕೊಂಡ ಬಳಿಕ, ವಿಚಾರಣೆಗಾಗಿ ನಿಮ್ಮ (ತನಿಖಾಧಿಕಾರಿ) ಎದುರು ಹಾಜರಾಗುತ್ತೇನೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

### ಸಂತ್ರಸ್ತೆ ತಂದೆ ಅರ್ಜಿ: ನೋಟಿಸ್

ಇದೇ ವೇಳೆ ಸಂತ್ರಸ್ತೆಯ ತಂದೆ ಸಲ್ಲಿಸಿರುವ ಅರ್ಜಿ ಆಧರಿಸಿ ಎಸ್ಐಟಿ ಮತ್ತು ಗೃಹ ಇಲಾಖೆಗೆ ಹೈಕೋರ್ಟ್ ಏಕ ಸದಸ್ಯ ಪೀಠ ನೋಟಿಸ್ ನೀಡಿದೆ.

'ನ್ಯಾಯಾಧೀಶರ ಮುಂದೆ ಮಾ.30ರಂದು ಮಗಳು ಹೇಳಿಕೆ ನೀಡುವಾಗ ಕಾಂಗ್ರೆಸ್ ಕಾನೂನು ಕೋಶ ಪ್ರಧಾನ ಕಾರ್ಯದರ್ಶಿ ಸೂರ್ಯಮುಕುಂದ್ ರಾಜ್ ಎಂಬ ವಕೀಲರು ಹಾಜರಿದ್ದರು. ಹೀಗಾಗಿ, ಈ ಹೇಳಿಕೆ ಕಾನೂನು ಬಾಹಿರವಾಗಿದೆ' ಎಂದು ಹೇಳಿದ್ದಾರೆ. 'ಸಂತ್ರಸ್ತೆ ಹೇಳಿಕೆಯ ಪ್ರತಿ ಸಲ್ಲಿಸಿಲ್ಲ' ಎಂಬ ಹೈಕೋರ್ಟ್ ರಿಜಿಸ್ಟ್ರಾರ್ ಕಚೇರಿ ಎತ್ತಿದ್ದ ಆಕ್ಷೇಪವನ್ನು ಪೀಠ ತಾತ್ಕಾಲಿಕವಾಗಿ ತೆಗೆದು ಹಾಕಿತು. 'ಸಂತ್ರಸ್ತೆ ಹೇಳಿಕೆಯ ಪ್ರತಿ ನ್ಯಾಯಾಲಯದಲ್ಲಿದ್ದು, ಅಂತಿಮ ವರದಿ ಸಲ್ಲಿಕೆ ವೇಳೆಯಲ್ಲಿ ಅದು ಲಭ್ಯವಾಗಲಿದೆ' ಎಂದು ಅರ್ಜಿದಾರರ ಪರ ವಕೀಲರು ಹೇಳಿದರು.

ಇನ್ನಷ್ಟು ಸುದ್ದಿಗಳು 3A, 4

**ಎಸ್ಸೆಸ್ಸೆಲ್ಸಿ- ಪಿಯುಸಿ**
**ಪರೀಕ್ಷೆ ದಿಕ್ಸೂಚಿ**

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-7



## ಸಿಕ್ಕಿಂ ಸಹಿತ ಹಲವೆಡೆ ಭೂಕಂಪ

ಗ್ಯಾಂಗ್ಟಕ್/ಕೋಲ್ಕತ್ತ/ಪಟ್ನಾ (ಪಿಟಿಐ): ಸಿಕ್ಕಿಂನಲ್ಲಿ ಸೋಮವಾರ ರಾತ್ರಿ ರಿಕ್ಟರ್ ಮಾಪಕದಲ್ಲಿ 5.4ರಷ್ಟಿದ್ದ ಭೂಕಂಪ ಸಂಭವಿಸಿದೆ. ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಬಿಹಾರಗಳಲ್ಲೂ ಕಂಪನದ ಅನುಭವವಾಗಿದೆ.

ರಾತ್ರಿ 8.49ಕ್ಕೆ ಸಂಭವಿಸಿದ ಈ ಕಂಪನದ ಕೇಂದ್ರಬಿಂದು ಭಾರತ-ಭೂತಾನ್ ಗಡಿ ಭಾಗದಲ್ಲಿ 10 ಕಿ.ಮೀ. ಆಳದಲ್ಲಿತ್ತು. ಜನ ಗಾಬರಿಗೊಂಡರು. ಆದರೆ ಯಾವುದೇ ಸಾವು, ನೋವಿನ ವರದಿಯಾಗಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ಪರಿಸ್ಥಿತಿಯ ಅವಲೋಕನ ನಡೆಸಿದರು.

ಇನ್ನೊಂದು ಸುದ್ದಿ 3B

ಮುಷ್ಕರ ಕೈಬಿಡಲು ಸಾರಿಗೆ ಸಂಸ್ಥೆ ಸಿಬ್ಬಂದಿಗೆ ಮನವಿ

# 'ಮೇ 4 ರ ಬಳಿಕ ವೇತನ ಪರಿಷ್ಕರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ಸಂಸ್ಥೆ ನೌಕರರ ವೇತನ ಪರಿಷ್ಕರಣೆಗೆ ಸರ್ಕಾರ ಸಿದ್ಧವಿದ್ದು, ಉಪಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಪ್ರಕಟಿಸಲು ಸಾಧ್ಯವಿಲ್ಲ. ಆದರೆ, ಮೇ 4 ರ ಬಳಿಕ ವೇತನ ಹೆಚ್ಚಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹೇಳಿದರು.



ಮುಷ್ಕರದಿಂದ ಜನ ಸಾಮಾನ್ಯರಿಗೆ ತೊಂದರೆ ಆಗುತ್ತದೆ. ಆರ್ಥಿಕ ಪರಿಸ್ಥಿತಿ ಮತ್ತು ಸಾರಿಗೆ ಸಂಸ್ಥೆಯ ಇಂದಿನ ಸ್ಥಿತಿಗತಿ ಗಮನದಲ್ಲಿ ಇಟ್ಟುಕೊಂಡು, ಇದೇ 7 ರಿಂದ ನಡೆಸಲು ಉದ್ದೇಶಿಸಿರುವ ಮುಷ್ಕರ ಕೈಬಿಡಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

'ವೇತನ ಪರಿಷ್ಕರಣೆಗೆ ಸರ್ಕಾರ ತೀರ್ಮಾನಿಸಿದೆ. ಹಣಕಾಸು ಇಲಾಖೆಯೂ ಒಪ್ಪಿಕೊಂಡಿದೆ. ಚುನಾವಣಾ ಆಯೋಗದ ಒಪ್ಪಿಗೆ ಇಲ್ಲದೇ ವೇತನ ಪರಿಷ್ಕರಣೆ ವಿಷಯ ಪ್ರಕಟಿಸುವಂತಿಲ್ಲ. ಆಯೋಗ ಒಪ್ಪಿಗೆ ನೀಡಿದರಷ್ಟೇ ನಾವು ಪ್ರಕಟ ಮಾಡಬಹುದು. ಮೇ 4 ರಂದು ಚುನಾವಣಾ ನೀತಿ ಸಂಹಿತೆ ಮುಗಿಯಲಿದ್ದು, ಆ ಬಳಿಕ ಪ್ರಕಟಿಸಲಾಗುವುದು' ಎಂದರು.

'ಸಾರಿಗೆ ನೌಕರರು ಆರನೇ ವೇತನ ಆಯೋಗದ ವರದಿ ಜಾರಿ ಮಾಡುವಂತೆ ಬೇಡಿಕೆ ಇಟ್ಟಿದ್ದಾರೆ. ಈಗಾಗಲೇ ಹೆಚ್ಚುವರಿ ಸವಲತ್ತು ಕೊಡುತ್ತಿದ್ದೇವೆ. ಓವರ್ ಟೈಂ ಜತೆಗೆ, ಕಂಡಕ್ಟರ್‌ಗಳಿಗೆ ಶೇ 2 ರಷ್ಟು ಪ್ರೋತ್ಸಾಹ ಧನ ನೀಡುತ್ತಿದ್ದೇವೆ. 6 ನೇ ವೇತನ ಆಯೋಗಕ್ಕೆ ಸಮಾನ ವೇತನ ನೀಡಿದರೆ, ಹೆಚ್ಚುವರಿ ಸವಲತ್ತುಗಳನ್ನು ನಿಲ್ಲಿಸಬೇಕಾಗುತ್ತದೆ. ಹೀಗೆ ಮಾಡಿದರೆ ಒಂದು ಕೈಯಿಂದ ಕೊಟ್ಟು, ಇನ್ನೊಂದು ಕೈಯಿಂದ ಕಿತ್ತುಕೊಂಡಂತಾಗುತ್ತದೆ' ಎಂದು ಸವದಿ ತಿಳಿಸಿದರು.

'ಕೋವಿಡ್‌ಗೆ ಮೊದಲು ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ದಿನವೂ 1 ಕೋಟಿ ಜನ ಪ್ರಯಾಣ ಮಾಡುತ್ತಿದ್ದರು. ಈಗ ಅದು 60 ಲಕ್ಷಕ್ಕೆ ಇಳಿದಿದೆ. ಸಂಸ್ಥೆಗೆ ಬರುತ್ತಿದ್ದ ಆದಾಯವೂ ಕಡಿಮೆ ಆಗಿದೆ. ನಾಲ್ಕು ನಿಗಮಗಳಿಂದ ಪ್ರತಿವರ್ಷ ₹3,200 ಕೋಟಿ ನಷ್ಟವಾಗುತ್ತಿದೆ. ಸಿಬ್ಬಂದಿಯ ವೇತನ ಹೆಚ್ಚಳ ಮಾಡಿದರೆ ಸಂಸ್ಥೆಯ ಮೇಲೆ ಹೊರೆ ಇನ್ನಷ್ಟು ಹೆಚ್ಚಾಗಲಿದೆ. ಆದರೂ ವೇತನ ಪರಿಷ್ಕರಣೆ ಸೇರಿದಂತೆ ಬೇಡಿಕೆಗಳನ್ನು ಈಡೇರಿಸಲು ತೀರ್ಮಾನಿಸಲಾಗಿದೆ' ಎಂದರು.

'ನೌಕರರು ಕೇಳುತ್ತಿರುವುದರಲ್ಲಿ ನ್ಯಾಯವಿದೆ. ಆದರೆ, ಕೇಳುತ್ತಿರುವ ಸಂದರ್ಭ ಸರಿ ಇಲ್ಲ. ಇದನ್ನು ಅವರು ಗಮನದಲ್ಲಿ ಇಟ್ಟುಕೊಳ್ಳಬೇಕು. ನಮ್ಮಲ್ಲಿ ಹಣವಿದ್ದೂ ಕೊಡದೇ ಇದ್ದರೆ ಅವರ ಆರೋಪ ಒಪ್ಪಬಹುದಿತ್ತು. ಇತ್ತೀಚಿನ ವಿದ್ಯಮಾನಗಳ ಬಗ್ಗೆ ಅವರಿಗೆ ತಿಳಿವಳಿಕೆ ಇದೆ ಎಂದು ನಂಬಿದ್ದೇನೆ' ಎಂದರು.

ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಸಾರಿಗೆ ಸಿಬ್ಬಂದಿಗೆ ₹30 ಲಕ್ಷ ಪರಿಹಾರ, ಅಂತರ್ ನಿಗಮ ವರ್ಗಾವಣೆ ಸೇರಿ 9 ಬೇಡಿಕೆಗಳಲ್ಲಿ 8 ಬೇಡಿಕೆಗಳನ್ನು ಈಡೇರಿಸಲಾಗಿದೆ ಎಂದು ಸಚಿವರು ಹೇಳಿದರು.

# ಬಿಎಸ್‌ವೈ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಡಿನೋಟಿಫಿಕೇಶನ್ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತಿತರರ ವಿರುದ್ಧ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.



10 ವರ್ಷಗಳ ಹಿಂದೆ ಬೆಂಗಳೂರು ಉತ್ತರ ವಿಭಾಗದಲ್ಲಿ ನಡೆದಿತ್ತು ಎನ್ನಲಾದ 20 ಎಕರೆ ಭೂಮಿಯ ಡಿನೋಟಿಫಿಕೇಶನ್‌ನಲ್ಲಿ ಅಕ್ರಮ ನಡೆದಿದೆ ಎಂದು ಎಂ.ಆಲಂ ಪಾಷಾ ಅವರು ದೂರು ನೀಡಿದ್ದರು.

ಈ ದೂರಿನ ಮೇರೆಗೆ ದಾಖಲಾದ ಪ್ರಕರಣದಲ್ಲಿ, ಯಡಿಯೂರಪ್ಪ ಅವರ ವಿರುದ್ಧದ ವಿಚಾರಣೆಯನ್ನು ವಿಶೇಷ ನ್ಯಾಯಾಲಯ ಕೈಬಿಟ್ಟಿತ್ತು. ಆದರೆ, ವಿಚಾರಣೆಯನ್ನು ಕೈಬಿಟ್ಟ ನ್ಯಾಯಾಲಯದ ಆದೇಶವನ್ನು ರಾಜ್ಯ ಹೈಕೋರ್ಟ್ ಕಳೆದ ಮಾರ್ಚ್ 17ರಂದು ವಜಾಗೊಳಿಸಿತ್ತು. ಕೂಡಲೇ ವಿಚಾರಣೆ ಕೈಗೆತ್ತಿಕೊಳ್ಳುವಂತೆಯೂ ಆದೇಶಿಸಿತ್ತು.

ಅಲ್ಲದೆ, ಯಡಿಯೂರಪ್ಪ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ 2012ರಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ದೋಷಾರೋಪ ಪಟ್ಟಿಯನ್ನು ಆಧರಿಸಿ ವಿಚಾರಣೆ ಮುಂದುವರಿಸಬೇಕು ಎಂದೂ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ.ರಾಮಸುಬ್ರಮಣಿಯನ್ ಅವರಿದ್ದ ಪೀಠವು, ಹೈಕೋರ್ಟ್ ಆದೇಶವನ್ನು ಅಮಾನತಿನಲ್ಲಿರಿಸಿತು.

ಖಾಸಗಿ ದೂರಿನಲ್ಲಿ ಯಡಿಯೂರಪ್ಪ ಅವರ ಹೆಸರು ಇದೆ. ಆದರೆ, ಅವರ ವಿರುದ್ಧ ಯಾವುದೇ ಆರೋಪಗಳನ್ನು ಉಲ್ಲೇಖಿಸಲಾಗಿಲ್ಲ. ಇದನ್ನು ಹೈಕೋರ್ಟ್ ಗಮನಿಸಬೇಕಿತ್ತು ಎಂದು ಯಡಿಯೂರಪ್ಪ ಪರ ವಕೀಲ ಖುಷ್ ಚತುರ್ವೇದಿ ನ್ಯಾಯಪೀಠಕ್ಕೆ ತಿಳಿಸಿದರು.



## ಸೇತುವೆ ಕಮಾನು

ಜಮ್ಮು ಮತ್ತು ಕಾಶ್ಮೀರದ ಚೆನಾಬ್ ನದಿ ಮೇಲೆ ನಿರ್ಮಿಸಲಾಗುತ್ತಿರುವ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯ ಕಮಾನು ಕಾಮಗಾರಿ ಸೋಮವಾರ ಪೂರ್ಣಗೊಂಡಿದೆ –ಪಿಟಿಐ ಚಿತ್ರ

ಸುದ್ದಿ 11



ಅಸ್ಸಾಂ ಮತಗಟ್ಟೆಯಲ್ಲಿ ಅಕ್ರಮ ಸಾಧ್ಯತೆ, ಅಧಿಕಾರಿಗಳ ಅಮಾನತು

# ಇದ್ದದ್ದು 90 ಮತ, ಚಲಾವಣೆ 181

ಹಫ್ಲಾಂಗ್ (ಅಸ್ಸಾಂ) (ಪಿಟಿಐ): ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯ ಮತಗಟ್ಟೆ ಒಂದರಲ್ಲಿ 90 ಅರ್ಹ ಮತದಾರರು ಇದ್ದಾರೆ. ಆದರೆ ಅಲ್ಲಿ 181 ಮಂದಿ ಮತ ಚಲಾಯಿಸಿದ್ದಾರೆ. ಆ ಮತಗಟ್ಟೆಯ 6 ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಎಂದು ಚುನಾವಣಾ ಆಯೋಗವು ಹೇಳಿದೆ.

ಜಿಲ್ಲೆಯ ಹಫ್ಲಾಂಗ್ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 107 (ಎ)ಯಲ್ಲಿ ಏಪ್ರಿಲ್ 1ರಂದು ಮತದಾನ ನಡೆದಿತ್ತು. ಕ್ಷೇತ್ರದಲ್ಲಿ ಅಂದು ಶೇ 74ರಷ್ಟು ಮತದಾನ ದಾಖಲಾಗಿತ್ತು. ಈಗ ಹೆಚ್ಚುವರಿ ಮತಗಳು ಚಲಾವಣೆ ಆಗಿರುವ ಕಾರಣ, ಕ್ಷೇತ್ರದಲ್ಲಿ ಭಾರಿ ಅಕ್ರಮ ನಡೆದಿರುವ ಸಾಧ್ಯತೆ ಇದೆ ಎಂದು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ.

'ಮತಗಟ್ಟೆಯ ಅಧಿಕಾರಿಗೆ ನೀಡಿದ್ದ ಮತದಾರರ ಪಟ್ಟಿಯಲ್ಲಿ 90 ಜನರ ಹೆಸರಷ್ಟೇ ಇತ್ತು. ಆ ಊರಿನ ಮುಖಂಡ ಬಂದು, 181 ಜನರ ಹೆಸರು ಇರುವ ಮತದಾರರ ಪಟ್ಟಿಯನ್ನು ತೋರಿಸಿದ್ದಾರೆ. ಅವರೆಲ್ಲರಿಗೂ ಮತದಾನ ಮಾಡಲು ಅವಕಾಶ ನೀಡುವಂತೆ ಒತ್ತಾಯಿಸಿದ್ದಾರೆ. ಅವರ ಒತ್ತಾಯಕ್ಕೆ ಅಧಿಕಾರಿಗಳು ಏಕೆ ಮಣಿದರು ಎಂಬುದು ಗೊತ್ತಿಲ್ಲ. ಮತಗಟ್ಟೆಯಲ್ಲಿದ್ದ ಭದ್ರತಾ ಸಿಬ್ಬಂದಿ ಏನು ಮಾಡುತ್ತಿದ್ದರು ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಆಗಿರುವ ಲೋಪದ ಬಗ್ಗೆ ತನಿಖೆ ನಡೆಸಲಾಗುತ್ತಿದೆ' ಎಂದು ಚುನಾವಣಾ ಆಯೋಗವು ಹೇಳಿದೆ.

ಅಧಿಕಾರಿಗಳನ್ನು ಏಪ್ರಿಲ್ 2ರಂದೇ ಅಮಾನತು ಮಾಡಲಾಗಿದೆ. ಆದರೆ, ಈ ವಿಚಾರ ಈಗಷ್ಟೇ ಬೆಳಕಿಗೆ ಬಂದಿದೆ. ಅಲ್ಲದೆ, ಈ ಮತಗಟ್ಟೆಯಲ್ಲಿ ಮರುಮತದಾನ ನಡೆಸಲಾಗುತ್ತದೆ ಎಂದು ಮೂಲಗಳು ಹೇಳಿವೆ. ಆದರೆ, ಈ ಬಗ್ಗೆ ಅಧಿಕೃತ ಆದೇಶ ಬಂದಿಲ್ಲ.

### ಇಂದು ಮತದಾನ

ನವದೆಹಲಿ (ಪಿಟಿಐ): ಕೇರಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭೆ ಚುನಾವಣೆಯ ಮತದಾನ ಮಂಗಳವಾರ ಒಂದೇ ಹಂತದಲ್ಲಿ ನಡೆಯಲಿದೆ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಮಂಗಳವಾರ ಮೂರನೇ ಹಂತದ ಮತದಾನ ನಡೆಯಲಿದೆ.

ಕೇರಳ, ತಮಿಳುನಾಡು ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶದಲ್ಲಿ ಒಂದೇ ಹಂತದಲ್ಲಿ ಎಲ್ಲಾ ಕ್ಷೇತ್ರಗಳಿಗೆ ಮತದಾನ ನಡೆದರೂ, ಫಲಿತಾಂಶಕ್ಕಾಗಿ ಮೇ 2ರವರೆಗೆ ಕಾಯಬೇಕಿದೆ. ಅಸ್ಸಾಂನಲ್ಲಿ ಮಂಗಳವಾರವೇ ಮತದಾನ ಪೂರ್ಣಗೊಳ್ಳಬೇಕಿತ್ತು. ಆದರೆ ಒಂದು ಕ್ಷೇತ್ರದಲ್ಲಿ ನಾಲ್ಕನೇ ಹಂತದಲ್ಲಿ ಮರುಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದಲ್ಲಿ ಇನ್ನೂ ಐದು ಹಂತದ ಮತದಾನ ನಡೆಯಬೇಕಿದೆ.

ಇನ್ನಷ್ಟು ಸುದ್ದಿಗಳು 11

**ಒಳ ಪುಟ**



ಯಾದಗಿರಿ: ಗುಡುಗು ಸಹಿತ ಮಳೆ 5

**ಚಿನಕುರಳಿ**
ಪ್ರಕಾಶ್ ಶೆಟ್ಟಿ





**ಮಾಸ್ಕ್ ಅಭಿಯಾನ**
ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ಇಂದಿರಾನಗರದಲ್ಲಿ ಸೋಮವಾರ ಸಾರ್ವಜನಿಕರಿಗೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅಮರೇಶ್ ಜೇಗರಕಲ್ ಮಾಸ್ಕ್ ಧರಿಸಿ ಎಂದು ತಿಳಿವಳಿಕೆ ನೀಡಿ ಸ್ವತಃ ಮಾಸ್ಕ್ ಹಾಕಿದರು -ಪ್ರಜಾವಾಣಿ ಚಿತ್ರ/ ರಂಜು ಪಿ

## ವಿದ್ಯುತ್ ವ್ಯತ್ಯಯ ಇಂದಿನಿಂದ


ಬೆಂಗಳೂರು: ನಗರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ವಿವಿಧ ಪ್ರದೇಶಗಳಲ್ಲಿ ಇದೇ 6ರಿಂದ 9 ಮತ್ತು 12ರಂದು ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬನಗಿರಿ ನಗರ, ಚನ್ನಮ್ಮನ ಕೆರೆ ಅಚ್ಚುಕಟ್ಟು, ಸಿಟಿ ಬೆಡ್, ಕಿಮ್ಸ್ ಕಾಲೇಜು, ಲಕ್ಷ್ಮಪ್ಪ ಗಾರ್ಡನ್, ಪಾಪಯ್ಯ ಗಾರ್ಡನ್, ಅರೇಹಳ್ಳಿ ಮುಖ್ಯರಸ್ತೆ, ಚೈತನ್ಯ ಶಾಲೆ, ಎಜಿಎಸ್ ಬಡಾವಣೆ, ಸೃಷ್ಟಿ ನಗರ, ವಡ್ಡರಪಾಳ್ಯ ಮತ್ತು ಸುತ್ತ-ಮುತ್ತಲಿನ ಪ್ರದೇಶಗಳು.

ಸೋಂಕು ಹರಡದಂತೆ ತಡೆಯಲು ಕಟ್ಟೆಚ್ಚರ • ಉತ್ಸವ ಸಮಿತಿ ರಚಿಸಲು ನಿರ್ಧಾರ

# ಈ ಬಾರಿಯೂ ನಿರ್ಬಂಧಿತ ಕರಗ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿರುವುದರಿಂದ, ಐತಿಹಾಸಿಕ ಕರಗ ಮಹೋತ್ಸವವನ್ನು ಈ ಬಾರಿಯೂ ನಿರ್ಬಂಧಿತ ವಾತಾವರಣದಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಕರಗ ಉತ್ಸವ ಆಚರಣೆ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಧ್ಯಕ್ಷತೆಯಲ್ಲಿ ಸಮಾಲೋಚನಾ ಸಭೆ ಸೋಮವಾರ ನಡೆಯಿತು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಗೌರವ್ ಗುಪ್ತ, 'ಕೋವಿಡ್ ಹರಡದಂತೆ ತಡೆಯಲು ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲನೆ ಮಾಡಿಕೊಂಡು ದೇವಸ್ಥಾನದ ಒಳಗೆ ಮಾತ್ರ ಕರಗ ಆಚರಣೆಗಳಿಗೆ ಅವಕಾಶ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದು ತಿಳಿಸಿದರು.

'ಪ್ರತಿಷ್ಠಿತ ಕರಗ ಉತ್ಸವವನ್ನು ಹಿಂದಿನಿಂದಲೂ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಈ ಉತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಧಿವತ್ತಾದ ಪೂಜಾ ಕಾರ್ಯಗಳು ಹಾಗೂ ರಾತ್ರಿ ವೈಭವೋಪೇತ ಮೆರವಣಿಗೆ ನಡೆಸುವ ಪ್ರತೀತಿ ಇದೆ. ಕಳೆದ ವರ್ಷ ಕೋವಿಡ್ ಸೋಂಕು ವ್ಯಾಪಿಸಿದ್ದರಿಂದ ದೇವಸ್ಥಾನದಲ್ಲಿ ಮಾತ್ರ ಕರಗ ಆಚರಿಸಲು ಅನುಮತಿ ನೀಡಲಾಗಿತ್ತು. ಕಳೆದ ವರ್ಷ ವ್ಯವಸ್ಥಾಪನಾ ಸಮಿತಿ ಅಸ್ತಿತ್ವದಲ್ಲಿತ್ತು. ಆ ಸಮಿತಿಯವರೇ ಹಬ್ಬದ ಉಸ್ತುವಾರಿ ನೋಡಿಕೊಂಡಿದ್ದರು. ಈ ಬಾರಿ ವ್ಯವಸ್ಥಾಪನಾ ಸಮಿತಿ ಇಲ್ಲ. ಹಾಗಾಗಿ ಮುಜರಾಯಿ ಇಲಾಖೆಯ ಸಹಾಯಕ ಆಯುಕ್ತರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ. ಉತ್ಸವ ಸಮಿತಿ ರಚಿಸಲು ನಗರ ಜಿಲ್ಲಾಧಿಕಾರಿ ಕ್ರಮಕೈಗೊಳ್ಳಲಿದ್ದಾರೆ' ಎಂದರು.

'ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಕೆಲ ನಿಯಮ ಮತ್ತು ನಿರ್ಬಂಧಗಳನ್ನು ವಿಧಿಸಿದ್ದು, ಅದು ಏ. 20 ರವರೆಗೆ ಜಾರಿಯಲ್ಲಿರಲಿದೆ. ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ನಿಬಂಧನೆಗಳನ್ನು ಪಾಲಿಸಬೇಕಿರುವುದು ಅಗತ್ಯವಿದೆ. ಕೋವಿಡ್ ಹರಡುವಿಕೆಯ ಪರಿಸ್ಥಿತಿಯನ್ನು ನೋಡಿಕೊಂಡು, ಉತ್ಸವವನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ಜಿಲ್ಲಾಧಿಕಾರಿಯವರು ಉತ್ಸವ ಸಮಿತಿ ಜೊತೆ ಸಮಾಲೋಚನೆ ನಡೆಸಲಿದ್ದಾರೆ. ಈ ಬಗ್ಗೆ ಮತ್ತೊಂದು ಸುತ್ತಿನ ಸಭೆ ನಡೆಸಿ ಈ ಉತ್ಸವದ ಆಚರಣೆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಚಿಕ್ಕಪೇಟೆ ಕ್ಷೇತ್ರದ ಶಾಸಕ ಉದಯ್ ಬಿ.ಗರುಡಾಚಾರ್, ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್, ಬಿಬಿಎಂಪಿಯ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಡಿ.ರಂದೀಪ್, ಮನೋಜ್ ಜೈನ್, ಜಂಟಿ ಆಯುಕ್ತರಾದ ವೀರಭದ್ರಸ್ವಾಮಿ, ಶಿವಸ್ವಾಮಿ, ಪಲ್ಲವಿ, ಪೊಲೀಸ್ ಅಧಿಕಾರಿಗಳು, ದೇವಸ್ಥಾನದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದರು.

### 'ಏ. 19ರಿಂದ 27ರವರೆಗೆ ಕರಗ'


'ಕರಗ ಉತ್ಸವ ನಡೆಯುವ ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆ ಬಿ ವರ್ಗದ ದೇವಾಲಯಗಳ ಪಟ್ಟಿಯಲ್ಲಿ ಬರಲಿದೆ. ಈ ಬಾರಿ ಇಲ್ಲಿನ ಕರಗ ಉತ್ಸವ ಏ. 19 ರಿಂದ 27 ರವರೆಗೆ ನಡೆಯಲಿದೆ. ಕೋವಿಡ್ ಸಂದರ್ಭದಲ್ಲೂ ಕರಗವನ್ನು ಅಚ್ಚುಕಟ್ಟಾಗಿ ನಡೆಸಲು ಉತ್ಸವ ಸಮಿತಿ ರಚಿಸಲಾಗುತ್ತದೆ. ಕೋವಿಡ್ ಹರಡುವಿಕೆಯ ಪರಿಸ್ಥಿತಿ ನೋಡಿಕೊಂಡು ಮುಜರಾಯಿ ಇಲಾಖೆ ಜೊತೆ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳಲಿದ್ದೇವೆ' ಎಂದು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

**ಸುದ್ದಿ 2 ನಿಮಿಷ**

## 'ಕಸಾಪ ಗೌರವ ಪ್ರಶಸ್ತಿ' ಸ್ಥಾಪನೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ ಅವರು 'ಕಸಾಪ ಗೌರವ ಪ್ರಶಸ್ತಿ' ಸ್ಥಾಪಿಸಿದ್ದು, ತಮ್ಮ ಅವಧಿಯ ಸಂಪೂರ್ಣ ಗೌರವ ಧನದ ಬಡ್ಡಿ ಹಣದಲ್ಲಿ ನಗದು ಬಹುಮಾನ ನೀಡಲು ನಿರ್ಧರಿಸಿದ್ದಾರೆ.

ಗೌರವ ಧನ ರೂಪದಲ್ಲಿ ಬಂದ ₹12.20 ಲಕ್ಷವನ್ನು ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯಾಗಿರಿಸಿ, ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿ ವರ್ಷ ಇಬ್ಬರು ಸಾಹಿತಿಗಳಿಗೆ ಈ ಪ್ರಶಸ್ತಿ ನೀಡಲು ಅವರು ನಿರ್ಧರಿಸಿದ್ದಾರೆ. ಸೋಮವಾರ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಅವರು ಈ ನಿರ್ಧಾರ ಪ್ರಕಟಿಸಿದರು.



ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ, 60 ವರ್ಷ ಮೇಲ್ಪಟ್ಟ ಇಬ್ಬರಿಗೆ (ಮಹಿಳೆ ಮತ್ತು ಪುರುಷ) ತಲಾ ₹30 ಸಾವಿರ ನಗದು, ಸ್ಮರಣಿಕೆ ನೀಡಿ ಗೌರವಿಸಲಾಗುವುದು. ಪ್ರತಿ ವರ್ಷ ಮೇ ತಿಂಗಳಲ್ಲಿ ಕಸಾಪ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬಿ.ಟಿ. ಲಲಿತಾ ನಾಯಕ್, ಡಾ. ವಸುಂಧರಾ ಭೂಪತಿ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಪದ್ಮರಾಜ ದಂಡಾವತಿ, ಕೆ. ರಾಜಕುಮಾರ್, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಸಭೆಯಲ್ಲಿ ಇದ್ದರು.

## 'ಆನ್‌ಲೈನ್ ಆಟಗಳನ್ನು ನಿಷೇಧಿಸಿ'

ಬೆಂಗಳೂರು: 'ಆನ್‌ಲೈನ್ ಆಟಗಳು (ಗೇಮ್) ಮಕ್ಕಳಲ್ಲಿ ಹಿಂಸಾ ಪ್ರವೃತ್ತಿ ಬಿತ್ತುತ್ತಿವೆ. ಸರ್ಕಾರವು ಈಗಾಗಲೇ ಅನೇಕ ಆಟಗಳನ್ನು ನಿಷೇಧಿಸಿದೆ. ಹೀಗಿದ್ದರೂ ಅದೇ ಮಾದರಿಯ ಬೇರೆ ಆಟಗಳು ಹುಟ್ಟಿಕೊಂಡಿವೆ. ಇವುಗಳನ್ನು ಕೂಡಲೇ ನಿಷೇಧಿಸಬೇಕು' ಎಂದು ಒತ್ತಾಯಿಸಿ ಚೈಲ್ಡ್ ರೈಟ್ಸ್ ಟ್ರಸ್ಟ್‌ನ ನಿರ್ದೇಶಕ ನಾಗಸಿಂಹ ಜಿ.ರಾವ್ ಅವರು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

'ಆನ್‌ಲೈನ್ ಆಟಗಳು ಯುದ್ಧ, ಹೊಡೆದಾಟ, ಕೊಲೆ, ಆತ್ಮಹತ್ಯೆ ಹೀಗೆ ಅನೇಕ ಅಂಶಗಳ ಆಧಾರದಲ್ಲಿ ರಚಿತವಾಗಿವೆ. ಇಂತಹ ಆಟಗಳತ್ತ ಮಕ್ಕಳು ಹೆಚ್ಚು ಆಕರ್ಷಿತರಾಗುತ್ತಿರುವುದು ಅಪಾಯಕಾರಿ. ಇವು ಹರೆಯದ ಮಕ್ಕಳಲ್ಲಿ ಅಪರಾಧ ಮನೋಭಾವ ಬೆಳೆಸುತ್ತಿವೆ. ಉಳ್ಳಾಲದಲ್ಲಿ ಇತ್ತೀಚೆಗೆ ನಡೆದ ಬಾಲಕನ ಕೊಲೆ ಇದಕ್ಕೊಂದು ನಿದರ್ಶನ' ಎಂದು ಹೇಳಿದ್ದಾರೆ.

'ಕೋವಿಡ್ ಕಾರಣ ಮನೆಯಲ್ಲೇ ಇರುವ ಮಕ್ಕಳು ಮೊಬೈಲ್ ಬಳಕೆಯ ಗೀಳು ಬೆಳೆಸಿಕೊಂಡಿದ್ದಾರೆ. ಮೊಬೈಲ್‌ನಲ್ಲಿ ತಮ್ಮ ಮಕ್ಕಳು ಏನು ಮಾಡುತ್ತಿರುತ್ತಾರೆ ಎಂಬುದನ್ನು ಪೋಷಕರೂ ಗಮನಿಸುವುದಿಲ್ಲ. ಆನ್‌ಲೈನ್ ಆಟಗಳಿಂದ ಮಕ್ಕಳ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆಯೂ ಅವರಿಗೆ ಅರಿವಿರುವುದಿಲ್ಲ' ಎಂದಿದ್ದಾರೆ.

# ಪರೀಕ್ಷೆ: ಎರಡು ದಿನದಲ್ಲಿ ನಿರ್ಧಾರ

ಬೆಂಗಳೂರು: 'ರಾಜ್ಯದಲ್ಲಿ 1ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ವರ್ಷ ಲಿಖಿತ ಪರೀಕ್ಷೆ ನಡೆಸಬೇಕೆ, ಬೇಡವೇ ಎಂಬುದರ ಬಗ್ಗೆ ಎರಡು ದಿನಗಳಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಈ ಕುರಿತು ಇಲಾಖೆಯ ಅಧಿಕಾರಿಗಳು, ಶಿಕ್ಷಣ ತಜ್ಞರು, ಖಾಸಗಿ ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಮತ್ತು ಪೋಷಕರ ಸಂಘಟನೆಗಳ ಮುಖಂಡರೊಂದಿಗೆ ಸೋಮವಾರ ಅವರು ಸಭೆ ನಡೆಸಿದರು.

'ಯಾವುದೇ ಶಾಲೆಯು ವಿದ್ಯಾರ್ಥಿಗಳನ್ನು ಅನುತ್ತೀರ್ಣ ಮಾಡುವುದಕ್ಕೆಂದೇ ಪರೀಕ್ಷೆಗಳನ್ನು ಬಳಸಿಕೊಳ್ಳುವಂತಿಲ್ಲ. ಆದರೆ ಈ ಸಾಲಿನಲ್ಲಿ 1ರಿಂದ 5 ಮತ್ತು 6ರಿಂದ 9ನೇ ತರಗತಿಗಳ ವಿದ್ಯಾರ್ಥಿಗಳ ಕಲಿಕಾನುಭವ ಸಮಾನವಾಗಿಲ್ಲವಾದ್ದರಿಂದ ಸಿಸಿಇ ಅಡಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳ ಕಲಿಕೆಯನ್ನು ಅವಲೋಕಿಸಿ ದಾಖಲಿಸುವ ಜವಾಬ್ದಾರಿ ಹೊಂದಿದ್ದಾರೆ' ಎಂದೂ ತಿಳಿಸಿದರು.

'ಮುಂದಿನ ಶೈಕ್ಷಣಿಕ ಸಾಲಿನ ಪ್ರಾರಂಭದಲ್ಲಿ ಸೇತುಬಂಧ ಕಾರ್ಯಕ್ರಮವನ್ನು ಇನ್ನಷ್ಟು ವೇಗವರ್ಧಕಗೊಳಿಸಲು ಸಹ ಆಲೋಚಿಸಲಾಗುತ್ತಿದೆ' ಎಂದು ಸುರೇಶ್ ಕುಮಾರ್ ವಿವರಿಸಿದರು.

ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, 'ಶಿಕ್ಷಣ ಹಕ್ಕು ಕಾಯ್ದೆ ಹಾಗೂ ನಿಯಮಗಳ ಅಡಿಯಲ್ಲಿ ಕಲಿಕೆಯನ್ನು ಗುರುತಿಸಿ ಸುಧಾರಿಸಲು ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಕ್ಕೆ ಅವಕಾಶವಿದೆ. ಬಹುತೇಕ ಶಾಲೆಗಳು ಈಗಾಗಲೇ ಮೌಲ್ಯಮಾಪನ ಪರೀಕ್ಷೆಗಳನ್ನು ನಡೆಸಿವೆ. ಈಗ ಮತ್ತೊಂದು ಪರೀಕ್ಷೆಯ ಅಗತ್ಯವೇ ಇಲ್ಲ' ಎಂದು ಹೇಳಿದರು.

'ಪರೀಕ್ಷೆ ನಡೆಸಲೇಬೇಕೆಂದಾದರೆ ನಿರಂತರ ಮೌಲ್ಯಮಾಪನದ ಅನ್ವಯ ಸಂಕಲನಾತ್ಮಕ ಪರೀಕ್ಷೆ ಮಾಡಬಹುದು. ಆದರೆ ಯಾವುದೇ ಮಕ್ಕಳನ್ನು ತಡೆಹಿಡಿಯುವುದು ಈ ಸಂಕಷ್ಟದ ಸಮಯದಲ್ಲಿ ಬೇಡ. ಜೊತೆಗೆ, ಪರೀಕ್ಷೆ ಹೆಸರಿನಲ್ಲಿ ಶುಲ್ಕಕ್ಕೆ ಒತ್ತಾಯಪೂರ್ವಕವಾಗಿ ಬೇಡಿಕೆ ಇಡುವುದು, ಫಲಿತಾಂಶ ಕೊಡುವುದಿಲ್ಲ ಎಂದು ಖಾಸಗಿ ಶಾಲೆಗಳು ಭಯ ಹುಟ್ಟಿಸಬಾರದು. ಇದು ಕಾನೂನಿಗೂ ವಿರುದ್ಧವಾಗುತ್ತದೆ' ಎಂದರು.

ಖಾಸಗಿ ಶಾಲೆಗಳ ಆಡಳಿತ ಮಂಡಳಿ ಪರ ಮಾತನಾಡಿದ ಉಳ್ಳಾಲದ ಆಕ್ಸ್‌ಫರ್ಡ್ ಕಾಲೇಜಿನ ಪ್ರಾಚಾರ್ಯ ಡಾ.ಬಿ. ಆರ್. ಸುಪ್ರೀತ್, 'ವಿದ್ಯಾರ್ಥಿಗಳು ಈಗಾಗಲೇ ಭೌತಿಕವಾಗಿ ಇಲ್ಲವೇ ಆನ್ ಲೈನ್ ಮೂಲಕ ಪಾಠಗಳನ್ನು ಆಲಿಸಿದ್ದಾರೆ. ಯಾವುದಾದರೂ ರೀತಿಯಲ್ಲಿ ಕಲಿಕೆಯ ಮೌಲ್ಯಾಂಕನ ನಡೆಸುವುದು ಸೂಕ್ತ' ಎಂದರು.

'1ರಿಂದ 5ನೇ ತರಗತಿ ಸಾಧ್ಯವಾಗದಿದ್ದರೂ, 6ರಿಂದ 9ನೇ ತರಗತಿಯವರಿಗೆ ಆನ್‌ಲೈನ್ ಅಥವಾ ಆಫ್‌ಲೈನ್ ಮಾದರಿಯಲ್ಲಿ ಪರೀಕ್ಷೆ ನಡೆಸಬೇಕು. ಕಳೆದ ಬಾರಿ ಪರೀಕ್ಷೆ ನಡೆದಿಲ್ಲ. ಈ ಬಾರಿಯೂ ಮೌಲ್ಯಮಾಪನ ಆಗದಿದ್ದರೆ ವಿದ್ಯಾರ್ಥಿಗಳು ಕಲಿಕೆಯ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳುವ ಅಪಾಯ ಇದೆ' ಎಂದೂ ಹೇಳಿದರು.

## ಸೌಂದರ್ಯ ಸ್ಪರ್ಧೆಗೆ ಅವಕಾಶ

ಬೆಂಗಳೂರು: ಮಿಸೆಸ್ ಸೌತ್ ಇಂಡಿಯಾ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಲು ವೈಲ್ಡ್ ಕಾರ್ಡ್ ಪ್ರವೇಶ ಹಾಗೂ ಮಿಸ್ ಸೌತ್ ಇಂಡಿಯಾ ಐ ಆಮ್ ಪವರ್ಫುಲ್ ವೇದಿಕೆಯ ಆಡಿಷನ್‌ನಲ್ಲಿ ಭಾಗವಹಿಸಲು ಸಾಧ್ಯವಾಗದ ಸ್ಪರ್ಧಿಗಳಿಗೂ ಮತ್ತೆ ಅವಕಾಶ ಕಲ್ಪಿಸಲಾಗಿದೆ.

'ಮೇ ತಿಂಗಳಿನಲ್ಲಿ ನಡೆಯುವ ಮಿಸ್ ಹಾಗೂ ಮಿಸೆಸ್ ಇಂಡಿಯಾ ಐ ಆಮ್ ಪವರ್ಫುಲ್ ವೇದಿಕೆಯಲ್ಲಿ ಮಿಸ್ಟರ್ ಸೌತ್ ಇಂಡಿಯಾ, ಮಿಸೆಸ್ ಕರ್ವಿ ವಿಭಾಗದಲ್ಲೂ ಸ್ಪರ್ಧೆ ನಡೆಯಲಿದೆ. ವಿಜೇತರು ಸಿಂಗಪುರದಲ್ಲಿ ನಡೆಯುವ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ದೇಶವನ್ನು ಪ್ರತಿನಿಧಿಸಲಿದ್ದಾರೆ' ಎಂದು ಕಾರ್ಯಕ್ರಮದ ಆಯೋಜಕಿ ನಂದಿನಿ ನಾಗರಾಜ್ ತಿಳಿಸಿದ್ದಾರೆ.

ಸಂಪರ್ಕ:9901755163



## ರಾಮನಗರದಲ್ಲಿ ಎಲೆಕ್ಟ್ರಿಕ್ ವಾಹನಗಳ ಕ್ಲಸ್ಟರ್: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರದಲ್ಲಿ 500 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಕ್ಲಸ್ಟರ್ ನಿರ್ಮಿಸಲಾಗುತ್ತಿದೆ ಎಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಅಮೆರಿಕಾದ ಟ್ರೈಟನ್ ಎಲೆಕ್ಟ್ರಿಕ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಹಿಮಾಂಶು ಪಟೇಲ್ ಅವರೊಂದಿಗೆ ರಾಜ್ಯದಲ್ಲಿ ಹೂಡಿಕೆ ಅವಕಾಶಗಳ ಬಗ್ಗೆ ವರ್ಚುವಲ್ ಸಭೆ ನಡೆಸಿದರು.

ಟ್ರೈಟನ್ ಎಲೆಕ್ಟ್ರಿಕ್ ವಾಹನಗಳ ಸಂಸ್ಥೆಯು ರಾಜ್ಯದಲ್ಲಿ ಹೂಡಿಕೆ ಮಾಡಲು ಅಗತ್ಯವಿರುವ ಎಲ್ಲಾ ಸಹಕಾರ ಮತ್ತು ಬೆಂಬಲ ನೀಡಲಾಗುವುದು. ದೇಶದಲ್ಲಿ ಮೊತ್ತ ಮೊದಲ ಎಲೆಕ್ಟ್ರಿಕ್ ವಾಹನಗಳ ನೀತಿಯನ್ನು ಜಾರಿಗೆ ತಂದ ರಾಜ್ಯ ಕರ್ನಾಟಕ. ಪ್ರಸ್ತುತ ನೀತಿಯನ್ನು ಹೆಚ್ಚು ಹೂಡಿಕೆ ಸ್ನೇಹಿಯನ್ನಾಗಿಸಲು ಪರಿಷ್ಕರಿಸಲಾಗುತ್ತಿದೆ ಎಂದು ಹೇಳಿದರು.

## 'ಅದಿರು ವ್ಯಾಪಾರ: ನಿರ್ಬಂಧ ತೆರವುಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇ-ಹರಾಜು ಕಾರ್ಯವಿಧಾನದ ಕಾರಣ ಕರ್ನಾಟಕದಲ್ಲಿ ಕಬ್ಬಿಣದ ಅದಿರಿನ ವ್ಯಾಪಾರದ ಮೇಲೆ ಹಲವು ನಿರ್ಬಂಧಗಳನ್ನು ಹೇರಲಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ವಾರ್ಷಿಕ ಸುಮಾರು ₹8 ಸಾವಿರ ಕೋಟಿ ಆದಾಯ ನಷ್ಟವಾಗುತ್ತಿದೆ. ಈ ನಿಬಂಧನೆಗಳನ್ನು ತೆಗೆದುಹಾಕಬೇಕು. ಈ ವಿಚಾರದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಧ್ಯ ಪ್ರವೇಶಿಸಬೇಕು' ಎಂದು ಭಾರತೀಯ ಗಣಿ ಉದ್ಯಮಗಳ ಒಕ್ಕೂಟದ (ಫಿಮಿ) ದಕ್ಷಿಣ ವಲಯ ಕೇಂದ್ರ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಫಿಮಿ ದಕ್ಷಿಣ ವಲಯದ ಅಧ್ಯಕ್ಷ ಶಾಂತೇಶ್ ಗುರೆಡ್ಡಿ, 'ರಾಜ್ಯದಲ್ಲಿ ಬಳಕೆಯಾಗದೆ ಉಳಿದಿರುವ ಕಬ್ಬಿಣದ ಅದಿರನ್ನು ಉಂಡೆಗಳಾಗಿ (ಪೆಲೆಟ್ಸ್) ಮಾರ್ಪಡಿಸಿ ರಫ್ತು ಮಾಡುವ ಸ್ವಾತಂತ್ರ್ಯವನ್ನು ನಮ್ಮಿಂದ ಕಸಿದುಕೊಳ್ಳಲಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಟನ್ ಅದಿರಿಗೆ ₹11 ಸಾವಿರ ದರ ನಿಗದಿ ಮಾಡಲಾಗಿದೆ. ಆದರೆ, ರಾಜ್ಯದಲ್ಲಿ ಕೇವಲ ₹4 ಸಾವಿರ ದರ ಇದೆ. ರಾಜ್ಯದಲ್ಲಿ ಅದಿರಿನ ಸಮರ್ಪಕ ಪೂರೈಕೆ ಇದ್ದರೂ ಕೂಡ ಪ್ರತಿ ವರ್ಷ ವಿದೇಶ ಹಾಗೂ ಇತರ ರಾಜ್ಯಗಳಿಂದ ನಿಯಮಿತವಾಗಿ ಅದಿರು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಸಮತೋಲನ ತಗ್ಗಿದ್ದು ಅದಿರು ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ' ಎಂದರು.

'ನಿರ್ಬಂಧಗಳಿಂದಾಗಿ ಅದಿರು ಉದ್ಯಮದ ಹೂಡಿಕೆಗೂ ಪೆಟ್ಟು ಬಿದ್ದಿದೆ. ಅನೇಕ ಕಂಪನಿಗಳು ರಾಜ್ಯದಿಂದ ಹೊರಹೋಗುವ ಅಪಾಯವೂ ಇದೆ. ಹಾಗೇನಾದರು ಆದರೆ ದೊಡ್ಡ ಪ್ರಮಾಣದ ನಷ್ಟ ಉಂಟಾಗಲಿದೆ' ಎಂದು ತಿಳಿಸಿದರು.

ಫಿಮಿ ದಕ್ಷಿಣ ವಲಯದ ಸದಸ್ಯರಾದ ಸೌಮಿಕ್ ಮಜುಂದಾರ್, ರಾಹುಲ್ ಹಾಗೂ ಬಸಂತ್ ಪೊದ್ದಾರ್ ಇದ್ದರು.



## ಎಲ್ಲ ತರಗತಿಗಳನ್ನು ಆರಂಭಿಸಿ:ಎಸ್‌ಎಫ್‌ಐ ಆಗ್ರಹ

ಬೆಂಗಳೂರು: '6ರಿಂದ 9ನೇ ತರಗತಿಗಳನ್ನು ಸ್ಥಗಿತಗೊಳಿಸಿರುವುದು ಅವೈಜ್ಞಾನಿಕ ತೀರ್ಮಾನ. ಇದನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು' ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಆಗ್ರಹಿಸಿದೆ.

'ಕೋವಿಡ್‌ನಿಂದ ವಿದ್ಯಾರ್ಥಿಗಳಿಗೆ ಪರಿಣಾಮ ಬೀರುವುದಿಲ್ಲ ಎಂದು ವೈದ್ಯಕೀಯ ವರದಿಗಳು ತಿಳಿಸಿವೆ. ಶಾಲೆ ಮುಚ್ಚಿರುವುದರಿಂದ ಮಕ್ಕಳು ಬಾಲಕಾರ್ಮಿಕ, ಬಾಲ್ಯವಿವಾಹ, ಅಪೌಷ್ಟಿಕತೆಗೆ ಒಳಗಾಗುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವುದು ಬೇಡ. ಮುಂದಿನ ತರಗತಿಗೆ ತೇರ್ಗಡೆ ಮಾಡಬೇಕು. ಎಲ್ಲ ಹಂತದ ತರಗತಿಗಳನ್ನು ಈ ಕೂಡಲೇ ಪ್ರಾರಂಭಿಸಬೇಕು' ಎಂದು ಒತ್ತಾಯಿಸಿದೆ.

'ಕೋವಿಡ್ ತಡೆಗೆ ಶಾಲೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು. ಶಾಲೆ ಬಿಟ್ಟಿರುವ ಮಕ್ಕಳ ರಕ್ಷಣೆಗಾಗಿ ತುರ್ತು ಸಮೀಕ್ಷೆ ಆಗಬೇಕು. ಶಾಲೆ ತೆರೆಯುವ ವಿಚಾರದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಗೊಂದಲ ಹಾಗೂ ಆತಂಕ ಉಂಟು ಮಾಡುವುದನ್ನು ಸರ್ಕಾರ ನಿಲ್ಲಿಸಬೇಕು' ಎಂದೂ ತಿಳಿಸಿದೆ.

### ನಗರದಲ್ಲಿ ಇಂದು

**ಬೆಂಗಳೂರು ನಗರ ಜಿಲ್ಲೆಯ ಎಲ್ಲ ಚುನಾಯಿತ ಪ್ರತಿನಿಧಿಗಳಿಗೆ ಕ್ಷಯರೋಗ (ಟಿಬಿ) ಮತ್ತು ಕೋವಿಡ್ ಅರಿವು ಕಾರ್ಯಕ್ರಮ:** ಆಯೋಜನೆ–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ–ಜಿಲ್ಲಾ ಪಂಚಾಯಿತಿ ಸಭಾಂಗಣ, ಬೆಳಿಗ್ಗೆ 11

ಫೋರ್ಟಿಸ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಉದ್ಘಾಟನೆ– ನಟ ರಮೇಶ್ ಅರವಿಂದ್, ಆಯೋಜನೆ, ಸ್ಥಳ– ಫೋರ್ಟಿಸ್ ಆಸ್ಪತ್ರೆ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಳಿಗ್ಗೆ 11



ರಮೇಶ್ ಅರವಿಂದ್

## ಪ್ರೊಐಐಎಸ್‌ಇ ಸಾಫ್ಟ್‌ವೇರ್ ಬಿಡುಗಡೆ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆ ಅಭಿವೃದ್ಧಿಪಡಿಸಿರುವ 'ಪ್ರೊಐಐಎಸ್‌ಇ' ಎಂಬ ಸಾಫ್ಟ್‌ವೇರ್ ಅನ್ನು ಐಐಎಸ್‌ಸಿ ನಿರ್ದೇಶಕ ಪ್ರೊ. ಗೋವಿಂದರಾಜ್ ಅವರು ಬಿಡುಗಡೆಗೊಳಿಸಿದರು.

ಪೇಟೆಂಟ್ ಮತ್ತು ಬೌದ್ಧಿಕ ಆಸ್ತಿ ರಕ್ಷಣೆ ಹಾಗೂ ಭಾಷಾಂತರದ ಉದ್ದೇಶದಿಂದ ಇದನ್ನು ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ಸಂಸ್ಥೆಯಲ್ಲಿ ಸೃಷ್ಟಿಯಾದ ಎಲ್ಲ ಜ್ಞಾನವೂ ಸಂಸ್ಥೆಯ ಬೌದ್ಧಿಕ ಆಸ್ತಿಯಾಗಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

### ಸಂಕ್ಷಿಪ್ತ ಸುದ್ದಿ

## ಇದೇ 10ರಿಂದ ನಾಟಕ ಪ್ರದರ್ಶನ

ಬೆಂಗಳೂರು: ನಳಂದ ಆರ್ಟ್ ಸ್ಟುಡಿಯೊ ಹಾಗೂ ರಂಗಶಂಕರದ ಸಹಯೋಗದಲ್ಲಿ ಏ.10 ಮತ್ತು 11ರಂದು 'ಡೆಸ್ಡೆಮೋನಾ ರೂಪಕಂ' ನಾಟಕ ಪ್ರದರ್ಶನ ಜೆ.ಪಿ.ನಗರದ ರಂಗಶಂಕರದಲ್ಲಿ ನಡೆಯಲಿದೆ.

ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ನಾಟಕ ಪ್ರದರ್ಶನ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

## ಆಡಿಷನ್ ಪ್ರಾರಂಭ

ಬೆಂಗಳೂರು: ನಗರದ ಟುಲಿಪ್ ಇನ್ ಹೋಟೆಲ್‌ನಲ್ಲಿ ಮಿಸೆಸ್ ಇಂಡಿಯಾ–ಕರ್ನಾಟಕ ಸೌಂದರ್ಯ ಸ್ಪರ್ಧೆಯ ಆಡಿಷನ್ ಸೋಮವಾರದಿಂದ ಪ್ರಾರಂಭಗೊಂಡಿದೆ.

22ರಿಂದ 61ರ ವಯೋಮಾನದ ಮಹಿಳೆಯರು ಮೂರು ವಿಭಾಗಗಳಲ್ಲಿ ಆಡಿಷನ್‌ನಲ್ಲಿ ಭಾಗವಹಿಸಿದರು.

'ನಿಲುವು, ಬಣ್ಣ, ವಯಸ್ಸು ಏನೇ ಆಗಿದ್ದರೂ ಪ್ರತಿ ಮಹಿಳೆ ಸುಂದರವಾಗಿರುತ್ತಾಳೆ. ಕರ್ನಾಟಕದ ಪ್ರತಿಭಾನ್ವಿತ ಮತ್ತು ಸುಂದರ ಮಹಿಳೆಯನ್ನ ಪರಿಚಯಿಸುವುದು ನಮ್ಮ ಉದ್ದೇಶ' ಎಂದು ಸ್ಪರ್ಧೆಯ ಆಯೋಜಕಿ ಪ್ರತಿಭಾ ಸಂಶಿಮಠ ತಿಳಿಸಿದರು.

## ಆಕ್ಯುಪಂಚರ್ ಥೆರಪಿ

ಬೆಂಗಳೂರು: ಬಸವೇಶ್ವರನಗರದ ಬಯೋ ಎನರ್ಜಿ ವೆಲ್‌ನೆಸ್ ಸೆಂಟರ್ ಏ.7ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಉಚಿತವಾಗಿ ಆಕ್ಯುಪಂಚರ್ ಥೆರಪಿ ಮತ್ತು ಪ್ರಾಣಿಕ್ ಹೀಲಿಂಗ್ ಚಿಕಿತ್ಸೆಯ ಬಗ್ಗೆ ಸಲಹಾ ಶಿಬಿರ ಹಮ್ಮಿಕೊಂಡಿದೆ.

ಸಂಪರ್ಕಕ್ಕೆ: 9740435556

ಶಿವರಾಮ ಕಾರಂತ ಬಡಾವಣೆ: ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿ ಸ್ಪಷ್ಟನೆ

# ಭೂಸ್ವಾಧೀನ ಕೈಬಿಡುವ ಪ್ರಮೇಯವೇ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅಭಿವೃದ್ಧಿಪಡಿಸಲಿರುವ ಡಾ.ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲಾಗುತ್ತದೆ ಎಂದು ಕೆಲವರು ವದಂತಿ ಹಬ್ಬಿಸುತ್ತಿದ್ದಾರೆ. ಈ ಬಗ್ಗೆ ಯಾರೂ ಕಿವಿಗೊಡಬಾರದು' ಎಂದು ಈ ಬಡಾವಣೆಯ ವಸ್ತುಸ್ಥಿತಿಯ ವರದಿ ನೀಡಲು ಸುಪ್ರೀಂ ಕೋರ್ಟ್ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ನೇತೃತ್ವದ ಸಮಿತಿ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಇಲ್ಲಿ ಮಾತನಾಡಿದ ನಿವೃತ್ತ ನ್ಯಾ. ಚಂದ್ರಶೇಖರ್, 'ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಈ ಬಡಾವಣೆಗೆ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಿರುವ ಬಿಡಿಎ ಭೂಸ್ವಾಧೀನ ಪ್ರಕ್ರಿಯೆಯನ್ನೂ ಚುರುಕುಗೊಳಿಸಿದೆ. ಆದರೂ ಕೆಲವರು ಸುಳ್ಳು ಮಾಹಿತಿ ನೀಡಿ ಜನರ ದಾರಿ ತಪ್ಪಿಸುವ ಯತ್ನ ಮಾಡುತ್ತಿದ್ದಾರೆ. ಈ ಬಡಾವಣೆ ವ್ಯಾಪ್ತಿಯ ಗ್ರಾಮಗಳಲ್ಲಿ 'ಈ ಯೋಜನೆ ಕೈಬಿಟ್ಟಿದ್ದಕ್ಕೆ ಮುಖ್ಯಮಂತ್ರಿಯವರಿಗೆ ಅಭಿನಂದನೆ' ಎಂದು ಬ್ಯಾನರ್ ಹಾಗೂ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ. ಇದು ಸುಪ್ರೀಂ ಕೋರ್ಟ್ ಆದೇಶವನ್ನು ಧಿಕ್ಕರಿಸಿದಂತೆ' ಎಂದು ಎಚ್ಚರಿಕೆ ನೀಡಿದರು.

'ಈ ಯೋಜನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ರೈತ ಮುಖಂಡರ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಭೆ ನಡೆಸುವಾಗ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಜೊತೆಯಲ್ಲಿದ್ದರು. ಬಡಾವಣೆ ಯೋಜನೆ ಕೈಬಿಡುವ ಯಾವುದೇ ಆಶ್ವಾಸನೆಯನ್ನೂ ಮುಖ್ಯಮಂತ್ರಿಯವರು ನೀಡಿಲ್ಲ ಎಂದು ವಿಶ್ವನಾಥ್ ಸ್ಪಷ್ಟಪಡಿಸಿದ್ದಾರೆ' ಎಂದರು.

'ಈ ಯೋಜನೆಗೆ ಅಧಿಸೂಚನೆ ಹೊರಡಿಸಿದ ಪ್ರದೇಶದಲ್ಲಿ ಬಿಡಿಎ ನಡೆಸಿದ ವೈಮಾನಿಕ ಸಮೀಕ್ಷೆ ಪ್ರಕಾರ 7500ಕ್ಕೂ ಅಧಿಕ ಕಟ್ಟಡಗಳು 2018ಕ್ಕಿಂತ ಮುನ್ನ ನಿರ್ಮಾಣವಾಗಿದ್ದ ಮಾಹಿತಿ ಇದೆ. ಈ ದಾಖಲೆ ಸಂಗ್ರಹಿಸಲು ಮಾರ್ಚ್ 1ರಿಂದ ಸೇವಾಕೇಂದ್ರಗಳನ್ನು ಆರಂಭಿಸಿದ್ದೇವೆ. ಇದುವರೆಗೆ 4,500 ಮಂದಿಯಾದರೂ ದಾಖಲೆ ನೀಡಬಹುದು ಎಂಬ ನಿರೀಕ್ಷೆ ಇತ್ತು. ಅಷ್ಟು ಮಂದಿ ಮುಂದೆ ಬಂದಿಲ್ಲ. ಕೆಲವರು ಗೊಂದಲ ಮೂಡಿಸುತ್ತಿರುವುದರಿಂದಲೇ ಜನ ಹಿಂದೇಟು ಹಾಕುತ್ತಿದ್ದಾರೆ' ಎಂದು ಅವರು ಅಭಿಪ್ರಾಯಪಟ್ಟರು.

'ಜನರಿಗೆ ನ್ಯಾಯ ಒದಗಿಸುವ ಉದ್ದೇಶದಿಂದಲೇ ಸುಪ್ರೀಂ ಕೋರ್ಟ್ ಮಂಜೂರಾತಿ ಪಡೆದು ನಿರ್ಮಾಣಗೊಂಡ ಕಟ್ಟಡಗಳ ಮಾಹಿತಿಯನ್ನು ಪಡೆಯುತ್ತಿದೆ. ಈ ಬಿಕ್ಕಟ್ಟು ಬಗೆಹರಿಸುವ ಉದ್ದೇಶ ಸುಪ್ರೀಂ ಕೋರ್ಟ್‌ನದು. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು' ಎಂದರು.

ಸಮಿತಿಯ ಸದಸ್ಯರಾದ ಜೈಕರ್ ಜೆರೋಮ್ ಹಾಗೂ ಎಸ್.ಟಿ.ರಮೇಶ್ ಉಪಸ್ಥಿತರಿದ್ದರು.

**ಅಂಕಿ-ಅಂಶಗಳು**

**1,850** ಮಂದಿ ನಿವೃತ್ತ ನ್ಯಾ.ಚಂದ್ರಶೇಖರ್ ಸಮಿತಿಗೆ ಕಟ್ಟಡಗಳ ದಾಖಲೆಗಳನ್ನು ಒದಗಿಸಿದವರು

**1,500** ಸಹಾಯ ಕೇಂದ್ರಗಳಲ್ಲಿ ದಾಖಲೆ ಒದಗಿಸಿದವರು

**350** ಆನ್‌ಲೈನ್‌ನಲ್ಲಿ ದಾಖಲೆ ಒದಗಿಸಿದವರು

### ಕಂದಾಯ ನಿವೇಶನ– ಮಾಹಿತಿ ಕೇಳಿದ ಸುಪ್ರೀಂ ಕೋರ್ಟ್

ಈ ಯೋಜನೆಗೆ ಅಧಿಸೂಚನೆ ಹೊರಡಿಸಿದ ಪ್ರದೇಶಗಳಲ್ಲಿ ಭೂಪರಿವರ್ತನೆ ಮಾಡಿಸಿಕೊಂಡ ಮತ್ತು ಬಿಡಿಎಯಿಂದ ಮಂಜೂರಾತಿ ಪಡೆದ ಕಂದಾಯ ಬಡಾವಣೆಗಳಿದ್ದರೆ, ಅವುಗಳಲ್ಲಿ ನಿವೇಶನ ಖರೀದಿಸಿದವರ ಬಗ್ಗೆಯೂ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಕೇಳಿದೆ. ಈ ಹಿಂದೆ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, ಅಂಜನಾಪುರ ಹಾಗೂ ಬನಶಂಕರಿ ಬಡಾವಣೆಗಳಲ್ಲಿ ಕಂದಾಯ ನಿವೇಶನದಾರರಿಗೆ ಬಿಡಿಎ ಬದಲಿ ನಿವೇಶನ ನೀಡಿದ ಬಗ್ಗೆಯೂ ಅಧ್ಯಯನ ಮಾಡಿ ವರದಿ ನೀಡುವಂತೆ ಸುಪ್ರೀಂ ಕೋರ್ಟ್ ಬಿಡಿಎಗೆ ಸೂಚಿಸಿದೆ. ಕಂದಾಯ ನಿವೇಶನ ಖರೀದಿಸಿದವರಿಗೂ ನೆರವಾಗುವ ಇರಾದೆ ಸುಪ್ರೀಂ ಕೋರ್ಟ್‌ಗೆ ಇದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ' ಎಂದು ನಿವೃತ್ತ ನ್ಯಾ. ಚಂದ್ರಶೇಖರ್ ಅಭಿಪ್ರಾಯಪಟ್ಟರು.

### ಕಟ್ಟಡದ ದಾಖಲೆ ಸಲ್ಲಿಕೆಗೆ ಏ.30 ಗಡುವು

'ಕಟ್ಟಡಗಳ ಬಗ್ಗೆ ದಾಖಲೆಗಳೊಂದಿಗೆ ಅರ್ಜಿ ನೀಡುವುದಕ್ಕೆ ಏ.30ರ ಗಡುವು ವಿಧಿಸಿದ್ದೇವೆ. ಮೇಡಿ ಅಗ್ರಹಾರ, ಸೋಮಶೆಟ್ಟಿಹಳ್ಳಿ, ದೊಡ್ಡ ಬ್ಯಾಲಕೆರೆ, ಸಿಂಗನಾಯಕನಹಳ್ಳಿಗಳ ಸಹಾಯ ಕೇಂದ್ರಗಳು ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ತೆರೆದಿರುತ್ತವೆ. ಆನ್‌ಲೈನ್ ಪೋರ್ಟಲ್ (jcc-skl.in) ಮೂಲಕವೂ ಅರ್ಜಿಗಳನ್ನು ಸಲ್ಲಿಸಬಹುದು. ಏ 30ರ ನಂತರ ನೀಡುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ' ಎಂದು ನಿವೃತ್ತ ನ್ಯಾ.ಚಂದ್ರಶೇಖರ್ ಸ್ಪಷ್ಟಪಡಿಸಿದರು.

### 'ಕೋಡಿಹಳ್ಳಿ ವಿರುದ್ಧ ಕೋರ್ಟ್‌ಗೆ ವರದಿ'

'2018ರ ಆ. 3ಕ್ಕಿಂತ ಮುನ್ನ ಕಟ್ಟಡ ನಿರ್ಮಿಸಿದ ಬಗ್ಗೆ ಸಮಿತಿಗೆ ದಾಖಲೆ ನೀಡದಂತೆ ಜನರ ಹಾದಿ ತಪ್ಪಿಸುತ್ತಿದ್ದ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರಿಗೆ ನೋಟಿಸ್ ನೀಡಿದ್ದೆವು. ಮಾ .24ರ ಒಳಗೆ ಪ್ರತಿಕ್ರಿಯಿಸುವಂತೆ ಸೂಚಿಸಿದ್ದರೂ ಅವರಿಂದ ಸ್ಪಂದನೆ ಬಂದಿಲ್ಲ. ಹಾಗಾಗಿ ಅವರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ವರದಿ ನೀಡಿದ್ದೇವೆ' ಎಂದು ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್ ಮಾಹಿತಿ ನೀಡಿದರು.

# ಬಾಬು ಜಗಜೀವನ್ ರಾಂ ಜಯಂತಿ ವೇಳೆ ಪ್ರತಿಭಟನೆ

## ದಿಢೀರ್ ಹೋರಾಟದಿಂದ ಮುಖ್ಯಮಂತ್ರಿಗೆ ಮುಜುಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಜನ್ಮದಿನಾಚರಣೆ ವೇಳೆ ದಲಿತ ಸಂಘಟನೆಗಳ ಸದಸ್ಯರು ದಿಢೀರ್ ಪ್ರತಿಭಟನೆ ನಡೆಸಿದ್ದರಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇರಿಸು ಮುರಿಸು ಅನುಭವಿಸಿದ ಘಟನೆ ಸೋಮವಾರ ನಡೆಯಿತು.

ವಿಧಾನಸೌಧದ ಪಶ್ಚಿಮ ದ್ವಾರದ ಬಳಿ ಇರುವ ಜಗಜೀವನ್ ರಾಂ ಪ್ರತಿಮೆಗೆ ಮಾಲಾರ್ಪಣೆ ಮತ್ತು ಗೌರವ ಸಲ್ಲಿಸುವ ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಲಾಗಿತ್ತು. ಬೆಳಿಗ್ಗೆ 10 ಗಂಟೆಗೆ ಯಡಿಯೂರಪ್ಪ ಅಧಿಕಾರಿಗಳ ಜತೆ ಸ್ಥಳಕ್ಕೆ ಬಂದರು. ಆಗ ರಾಮನಗರ ಮತ್ತು ಮಾಗಡಿ ತಾಲ್ಲೂಕಿನಿಂದ ಬಂದಿದ್ದ ದಲಿತ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು.

'ಮಾಗಡಿಯಲ್ಲಿ ಜಗಜೀವನ್ ರಾಂ ಭವನ ನಿರ್ಮಾಣ ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ. ಕಾಡುಗೋಡನಹಳ್ಳಿ ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯ ನಡೆಸಿದವರ ವಿರುದ್ಧ ಸೂಕ್ತ ಕ್ರಮ ಜರುಗಿಸಿಲ್ಲ' ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರನ್ನು ಬದಲಾವಣೆ ಮಾಡುವಂತೆಯೂ ಆಗ್ರಹಿಸಿದರು.

ಜಗಜೀವನ್ ರಾಂ ಪ್ರತಿಮೆಗೆ ಮಾಲಾರ್ಪಣೆ ಮಾಡಲು ಹೊರಟಿದ್ದ ಮುಖ್ಯಮಂತ್ರಿ, ಪ್ರತಿಭಟನೆಯಿಂದ ಗಲಿಬಿಲಿಗೊಂಡರು. ತಕ್ಷಣವೇ ಸ್ಥಳಕ್ಕೆ ದೌಡಾಯಿಸಿದ ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು, ಪ್ರತಿಭಟನಾಕಾರರ ಮನವಿ ಸ್ವೀಕರಿಸಿದರು. ಸಮಸ್ಯೆಗಳ ಪರಿಹಾರ ಮಾಡುವುದಾಗಿ ಮನವೊಲಿಸಿದರು. ನಂತರ ಯಡಿಯೂರಪ್ಪ ಅವರು ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಅಲ್ಲಿಂದ ತೆರಳಿದರು.



ವಿಧಾನಸೌಧದ ಪಶ್ಚಿಮ ದ್ವಾರದಲ್ಲಿ ಸೋಮವಾರ ನಡೆದ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ್ ರಾಂ ಜನ್ಮದಿನಾಚರಣೆ ವೇಳೆ ಪ್ರತಿಭಟನೆ ನಡೆಸಿದ ದಲಿತ ಸಂಘಟನೆಗಳ ಸದಸ್ಯರ ಜತೆ ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಚರ್ಚಿಸುತ್ತಿರುವುದು



# ನಾಳೆಯಿಂದ ಸಾರಿಗೆ ಮುಷ್ಕರ: ನಿರ್ಧಾರ ಅಚಲ

ಬೆಂಗಳೂರು: ಮೇ 4ರ ಬಳಿಕ ವೇತನ ಪರಿಷ್ಕರಣೆ ಮಾಡಲಾಗುವುದು ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ನೀಡಿರುವ ಭರವಸೆಗೆ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ಅಸಮ್ಮತಿ ಸೂಚಿಸಿದ್ದು, ಮುಷ್ಕರದ ನಿರ್ಧಾರ ಅಚಲ ಎಂದು ಹೇಳಿದೆ.

'ಚುನಾವಣಾ ನೀತಿ ಸಂಹಿತೆಗೂ, ನಮ್ಮ ಬೇಡಿಕೆ ಈಡೇರಿಕೆಗೂ ಯಾವುದೇ ಸಂಬಂಧ ಇಲ್ಲ. ಕಳೆದ ಬಾರಿಯ ಮುಷ್ಕರದ ಸಮಯದಲ್ಲೇ ನಮಗೆ ಭರವಸೆ ನೀಡಲಾಗಿದೆ. ಅದನ್ನು ಈಡೇರಿಸಲು ನೀತಿ ಸಂಹಿತೆ ಅಡ್ಡಿಯಾಗುವುದಿಲ್ಲ. ಪಲಾಯನವಾದ ಮಾಡುತ್ತಿರುವ ಸರ್ಕಾರದ ಈ ರೀತಿಯ ಭರವಸೆಗಳಿಗೆ ನಾವು ಜಗ್ಗುವುದಿಲ್ಲ' ಎಂದು ಕೂಟದ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

'6ನೇ ವೇತನ ಆಯೋಗದ ಶಿಫಾರಸುಗಳನ್ನು ಸಾರಿಗೆ ನೌಕರರಿಗೂ ಅನ್ವಯಿಸುವ ಬೇಡಿಕೆ ಹೊರತುಪಡಿಸಿ ಬೇರಾವ ಕೊಡುಗೆಗೂ ನಾವು ಒಪ್ಪುವುದಿಲ್ಲ. ಬೇಡಿಕೆ ಈಡೇರಿದರೆ ಮಾತ್ರ ಮುಷ್ಕರ ನಿರ್ಧಾರ ಹಿಂಪಡೆಯಲಾಗುವುದು. ಇಲ್ಲದಿದ್ದರೆ, ಅನಿರ್ದಿಷ್ಟಾವಧಿ ಮುಷ್ಕರ ಅನಿವಾರ್ಯ. ಸಾರ್ವಜನಿಕರು ಮತ್ತು ಖಾಸಗಿ ಬಸ್‌ಗಳ ಮಾಲೀಕರು ಸಹಕರಿಸಬೇಕು' ಎಂದು ಮನವಿ ಮಾಡಿದರು.

'ಏ.1ರಿಂದ ವಿವಿಧ ರೀತಿಯ ಪ್ರತಿಭಟನೆಗಳನ್ನು ನಡೆಸಲಾಗುತ್ತಿದೆ. ಅದರಂತೆ ಡಿಪೋಗಳ ಎದುರು ಸೋಮವಾರ ಧರಣಿ ನಡೆಯಬೇಕಿತ್ತು. ಆದರೆ, ಸತ್ಯಾಗ್ರಹಕ್ಕೆ ಅನುಮತಿ ದೊರೆತ ಕಾರಣ ಯಾವುದೇ ಚಟುವಟಿಕೆ ನಡೆಯಲಿಲ್ಲ. ಮಂಗಳವಾರವೂ ನೌಕರರು ಭಿತ್ತಿಪತ್ರ ಚಳವಳಿ ನಡೆಸಲಿದ್ದಾರೆ' ಎಂದು ಚಂದ್ರಶೇಖರ್ ಹೇಳಿದರು.

ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, 'ವೇತನ ಹೆಚ್ಚಳದ ಬೇಡಿಕೆಯನ್ನು ನಾವು ಇಟ್ಟಿಲ್ಲ. ಈ ರೀತಿಯ ಹೇಳಿಕೆ ನೀಡುವುದನ್ನು ಬಿಟ್ಟು ಸರ್ಕಾರ ನುಡಿದಂತೆ ನಡೆಯಬೇಕು. ಖಾಸಗಿ ಬಸ್‌ಗಳನ್ನು ರಸ್ತೆಗೆ ಇಳಿಸುವ ಸಾಹಸಕ್ಕೆ ಕೈ ಹಾಕಬಾರದು' ಎಂದರು.



ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಭಿತ್ತಿಪತ್ರ ಪ್ರದರ್ಶಿಸಿದ ಸಾರಿಗೆ ನೌಕರರು –ಪ್ರಜಾವಾಣಿ ಚಿತ್ರ

## ಶ್ರೀಗಂಧ ಮರದ 12 ತುಂಡು ಜಪ್ತಿ; ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೊರಮಾವು ಅಗರದ ಶನಿ ಮಹಾತ್ಮ ದೇವಸ್ಥಾನ ಆವರಣದಲ್ಲಿದ್ದ ಶ್ರೀಗಂಧ ಮರ ಕಡಿದು ಸಾಗಿಸುತ್ತಿದ್ದ ಆರೋಪಿ ಸಂಪತ್ (27) ಎಂಬಾತನನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಸಂಪತ್, ತನ್ನ ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದ. ಆತನಿಂದ ₹ 3.40 ಲಕ್ಷ ಮೌಲ್ಯದ 114 ಕೆ.ಜಿ ತೂಕದ ಶ್ರೀಗಂಧದ ಮರದ 12 ತುಂಡುಗಳನ್ನು ಜಪ್ತಿ ಮಾಡಲಾಗಿದೆ. ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ತಮಿಳುನಾಡಿನಿಂದ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಏ. 2ರಂದು ರಾತ್ರಿ ದೇವಸ್ಥಾನದ ಆವರಣಕ್ಕೆ ನುಗ್ಗಿ ಶ್ರೀಗಂಧ ಮರ ಕಡಿದಿದ್ದರು. ಅದರ ತುಂಡುಗಳನ್ನು ಕಾರಿನಲ್ಲಿಟ್ಟುಕೊಂಡು ಹೊರಟಿದ್ದರು. ರಾತ್ರಿ ಗಸ್ತಿನಲ್ಲಿದ್ದ ಇನ್‌ಸ್ಪೆಕ್ಟರ್, ಕಾರು ತಡೆದು ಪರಿಶೀಲನೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ' ಎಂದೂ ತಿಳಿಸಿದರು.

ಆನ್‌ಲೈನ್‌ನಲ್ಲೇ ಮಾರಾಟಕ್ಕೆ ಅವಕಾಶ ಕಲ್ಪಿಸಿರುವ ಬಿಡಿಎ • ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ

# ಒಂದೇ ವಾರದಲ್ಲಿ 40 ಫ್ಲ್ಯಾಟ್ ಬಿಕರಿ

• ಪ್ರವೀಣ್ ಕುಮಾರ್ ಪಿ.ವಿ.

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಿರ್ಮಿಸಿರುವ ವಸತಿ ಸಮುಚ್ಚಯಗಳ ಫ್ಲ್ಯಾಟ್‌ಗಳನ್ನು ಆನ್‌ಲೈನ್‌ನಲ್ಲೇ ಮಾರಾಟ ಮಾಡುವ ಪ್ರಕಿಯೆಗೆ ಇತ್ತೀಚೆಗೆ ಚಾಲನೆ ನೀಡಿದೆ. ಒಂದು ವಾರ ಪ್ರಾಯೋಗಿಕವಾಗಿ ನಡೆದ ಮಾರಾಟ ಪ್ರಕ್ರಿಯೆ ವೇಳೆಯೇ 40 ಫ್ಲ್ಯಾಟ್‌ಗಳು ಬಿಕರಿ ಆಗಿವೆ.

ಬಿಡಿಎ ಈ ಹಿಂದೆ ವಿವಿಧ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ತೆರದಲ್ಲೇ ಅರ್ಜಿ ಕರೆದು ಲಾಟರಿ ಎತ್ತುವ ಮೂಲಕ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡುತ್ತಿತ್ತು. ಈ ವಿಧಾನದಲ್ಲಿ ಗ್ರಾಹಕರಿಗೆ ಅವರು ಬಯಸಿದ ಫ್ಲ್ಯಾಟ್ ಸಿಗುತ್ತದೆ ಎಂಬ ಖಾತರಿ ಇರಲಿಲ್ಲ. ಹಾಗಾಗಿ ಖರೀದಿಗೆ ಜನ ಹಿಂದೇಟು ಹಾಕುತ್ತಿದ್ದರು. ಬಿಡಿಎ ವಸತಿ ಸಮುಚ್ಚಯಗಳಲ್ಲಿ ಸಾವಿರಾರು ಫ್ಲ್ಯಾಟ್‌ಗಳು ಈ ಕಾರಣದಿಂದಾಗಿ ಬಿಕರಿ ಆಗದೇ ಉಳಿದಿದ್ದವು.

ಗ್ರಾಹಕರು ನೇರವಾಗಿ ವಸತಿ ಖರೀದಿಸಲು ಬಿಡಿಎ ನಾಲ್ಕು ವರ್ಷಗಳ ಹಿಂದೆ ಅವಕಾಶ ಕಲ್ಪಿಸಿತು. ಈ ಸಲುವಾಗಿ ಕೇಂದ್ರ ಕಚೇರಿಯಲ್ಲಿ ಸಹಾಯ ಕೇಂದ್ರವನ್ನೂ ತೆರೆಯಿತು. ಆ ಬಳಿಕವೂ ಖಾಸಗಿ ಬಿಲ್ಡರ್‌ಗಳಿಗೆ ಪೈಪೋಟಿ ನೀಡುವ ರೀತಿಯಲ್ಲಿ ಮಾರುಕಟ್ಟೆ ವಿಸ್ತರಣೆ ತಂತ್ರಗಾರಿಕೆ ರೂಪಿಸುವಲ್ಲಿ ವಿಫಲವಾಗಿದ್ದರಿಂದ ಬಿಡಿಎ ಫ್ಲ್ಯಾಟ್‌ಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಬೇಡಿಕೆ ಸೃಷ್ಟಿಯಾಗಿರಲಿಲ್ಲ. ಕೆಲವು ವಸತಿ ಸಮುಚ್ಚಯಗಳಲ್ಲಿ, ಲಿಫ್ಟ್, ಕುಡಿಯುವ ನೀರು ಪೂರೈಕೆ, ವಾಹನ ನಿಲುಗಡೆ ತಾಣ, ವಿದ್ಯುತ್ ಮುಂತಾದ ಮೂಲಸೌಕರ್ಯಗಳ ಕೊರತೆ ಇದ್ದುದೂ ಇದಕ್ಕೆ ಕಾರಣವಾಗಿತ್ತು.

'ವಸತಿ ಸಮುಚ್ಚಯಗಳ ಮೂಲಸೌಕರ್ಯಗಳ ಕೊರತೆ ನೀಗಿಸುವುದರ ಜೊತೆಗೆ ಫ್ಲ್ಯಾಟ್ ಖರೀದಿ ವಿಧಾನವನ್ನೂ ಸರಳಗೊಳಿಸಿದ್ದೇವೆ. ಜನ ಆನ್‌ಲೈನ್‌ನಲ್ಲಿ ಬಸ್ ಟಿಕೆಟ್ ಕಾಯ್ದಿರಿಸಿದಷ್ಟೇ ಸುಲಭವಾಗಿ ಬಿಡಿಎ ಫ್ಲ್ಯಾಟ್‌ಗಳನ್ನು ಖರೀದಿಸಬಹುದು. ಹಾಗಾಗಿ ಬಿಡಿಎ ಫ್ಲ್ಯಾಟ್‌ಗಳ ಖರೀದಿಗೂ ಜನ ಆಸಕ್ತಿ ತೋರಿಸುತ್ತಿದ್ದಾರೆ' ಎಂದು ಆಯುಕ್ತ ಎಚ್.ಆರ್.ಮಹಾದೇವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಒಂದೇ ವಾರದಲ್ಲಿ 40 ಫ್ಲ್ಯಾಟ್‌ಗಳು ಮಾರಾಟವಾಗಿರುವುದು ಸಣ್ಣ ವಿಚಾರವೇನಲ್ಲ. ಗ್ರಾಹಕರು ಫ್ಲ್ಯಾಟ್‌ಗಳ ಸಕಲ ವಿವರಗಳನ್ನೂ ಬಿಡಿಎ ವೆಬ್‌ಸೈಟ್‌ನಲ್ಲೇ (https://housing.bdabangalore.org/) ನೋಡಬಹುದು. ವಸತಿ ಸಮುಚ್ಚಯ ಎಲ್ಲಿದೆ ಎಂಬುದನ್ನು ಗೂಗಲ್ ಮ್ಯಾಪ್‌ನಲ್ಲಿ ಗುರುತಿಸಬಹುದು. ಪ್ರತಿ ವಸತಿಯ ಒಳಗಡೆ ಹೇಗಿದೆ ಎಂಬ ವಿಡಿಯೊಗಳನ್ನೂ ವೆಬ್‌ಸೈಟ್‌ನಲ್ಲೇ ನೋಡಬಹುದು. ಶೀಘ್ರವೇ ಬಿಡಿಎ ಎಲ್ಲ ಫ್ಲ್ಯಾಟ್‌ಗಳೂ ಮಾರಾಟವಾಗಲಿವೆ' ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದರು.



ದೊಡ್ಡಬನಹಳ್ಳಿಯ ಬಿಡಿಎ ವಸತಿ ಸಮುಚ್ಚಯ

ಪ್ರಜಾವಾಣಿ ವಿಶೇಷ

**ಎಲ್ಲಿ ಎಷ್ಟು ಫ್ಲ್ಯಾಟ್ ಲಭ್ಯ**

| ಯೋಜನೆ | ಫ್ಲ್ಯಾಟ್ ವಿವರ | ಲಭ್ಯವಿರುವ ಫ್ಲ್ಯಾಟ್ | ಅಂದಾಜು ಮೊತ್ತ (₹ ಲಕ್ಷಗಳಲ್ಲಿ) |
|---|---|---|---|
| ಕಣಮಿಣಿಕೆ ಹಂತ–2 | 2 ಬಿಎಚ್‌ಕೆ | 503 | 25 |
| ಕಣಮಿಣಿಕೆ ಹಂತ–3 | 2 ಬಿಎಚ್‌ಕೆ | 267 | 28.50 |
| ಕೊಮ್ಮಘಟ್ಟ ಹಂತ–1 | 2 ಬಿಎಚ್‌ಕೆ | 115 | 25 |
| ಕೊಮ್ಮಘಟ್ಟ ಹಂತ–2 | 2 ಬಿಎಚ್‌ಕೆ | 267 | 30.40 |
| ದೊಡ್ಡಬನಹಳ್ಳಿ ಹಂತ–1 | 2 ಬಿಎಚ್‌ಕೆ | 43 | 25 |
| ವಲಗೇರಹಳ್ಳಿ ಹಂತ–6 | 2 ಬಿಎಚ್‌ಕೆ | 51 | 44 |
| ಮಾಳಗಾಲ ಹಂತ–2 | 2 ಬಿಎಚ್‌ಕೆ | 42 | 42 |
| ಕಣಮಿಣಿಕೆ ಹಂತ–4 | 3 ಬಿಎಚ್‌ಕೆ | 93 | 40 |

### ಖುದ್ದು ವೀಕ್ಷಣೆಗೂ ಅವಕಾಶ

'ಯಾರಾದರೂ ಗ್ರಾಹಕರು ವಸತಿ ಸಮುಚ್ಚಯಕ್ಕೆ ಭೇಟಿ ನೀಡಿ ಫ್ಲ್ಯಾಟ್‌ಗಳನ್ನು ವೀಕ್ಷಿಸಲು ಆಸಕ್ತಿ ತೋರಿಸಿದರೆ ಅದಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಅಲ್ಲಿ ಸೂಕ್ತ ಮೂಲಸೌಕರ್ಯ ಕಲ್ಪಿಸಲಾಗಿದೆಯೇ ಇಲ್ಲವೇ ಎಂಬುದನ್ನು ಅವರು ಖುದ್ದಾಗಿ ಪರಿಶೀಲಿಸಬಹುದು. ಗ್ರಾಹಕರಿಗೆ ಈ ಬಗ್ಗೆ ಮಾಹಿತಿ ನೀಡಲೆಂದೇ ಪ್ರತಿ ವಸತಿ ಸಮುಚ್ಚಯದ ಬಳಿಯೂ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

## ಯುವರಾಜ್‌ಗೆ ಜಾಮೀನು ನೀಡಲು ನಿರಾಕರಣೆ

**ಬೆಂಗಳೂರು:** ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮುಖಂಡರ ಪರಿಚಯಸ್ಥನೆಂದು ಹೇಳಿಕೊಂಡು ಸಾರ್ವಜನಿಕರಿಂದ ಕೋಟ್ಯಂತರ ರೂಪಾಯಿ ಪಡೆದು ವಂಚಿಸಿರುವ ಆರೋಪದಡಿ ಬಂಧನದಲ್ಲಿರುವ ಯುವರಾಜ್‌ಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿ ಕೆ. ನಟರಾಜನ್ ಅವರು ಜಾಮೀನು ತಿರಸ್ಕರಿಸಿದ್ದು, ಅರ್ಜಿದಾರರ ವಿರುದ್ಧ ಗಂಭೀರ ಆರೋಪಗಳಿವೆ ಮತ್ತು ಕೇಂದ್ರ ಅಪರಾಧ ದಳ (ಸಿಸಿಬಿ) ತನಿಖೆ ನಡೆಸುತ್ತಿದೆ ಎಂದು ಹೇಳಿದ್ದಾರೆ.

ಕೆಎಸ್‌ಆರ್‌ಟಿಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಿಸುವುದಾಗಿ ನಂಬಿಸಿದ್ದ ಯುವರಾಜ್, ದೂರುದಾರರ ಬಳಿ ₹1.50 ಕೋಟಿ ಬೇಡಿಕೆ ಇಟ್ಟಿದ್ದರು. ಚೆಕ್ ಮೂಲಕ ₹51 ಲಕ್ಷ ಮತ್ತು ನಗದು ರೂಪದಲ್ಲಿ ₹48.75 ಲಕ್ಷ ಪಡೆದಿದ್ದರು ಎಂಬುದು ಅವರ ಮೇಲಿರುವ ಆರೋಪ.

ಅವರ ಜಾಮೀನು ಅರ್ಜಿಯನ್ನು ಅಧೀನ ನ್ಯಾಯಾಲಯ ಫೆಬ್ರುವರಿ 7ರಂದು ತಿರಸ್ಕರಿಸಿತ್ತು. ಬಳಿಕ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.



## ಜಮೀರ್ ವಿರುದ್ಧ ಜೆಡಿಎಸ್ ದೂರು

**ಬೆಂಗಳೂರು:** ಮಾರ್ಚ್ 30ರಂದು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಬಹಿರಂಗ ಪ್ರಚಾರ ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಬಣ್ಣದ ಕುರಿತು 'ಕಾಲಾ ಕುಮಾರಸ್ವಾಮಿ' ಎಂಬ ಪದ ಬಳಕೆ ಮಾಡಿರುವ ಕಾಂಗ್ರೆಸ್ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜೆಡಿಎಸ್ ಯುವ ಘಟಕ ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ದೂರು ಸಲ್ಲಿಸಿದೆ.

ಬೆಂಗಳೂರು ಮಹಾನಗರ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಎ.ಎಂ. ಪ್ರವೀಣ್ ಕುಮಾರ್ ನೇತೃತ್ವದ ನಿಯೋಗ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರನ್ನು ಸೋಮವಾರ ಭೇಟಿಮಾಡಿ ದೂರು ಸಲ್ಲಿಸಿತು. ಜಮೀರ್ ಅಹಮ್ಮದ್ ಅವರು ಮಾ.30ರಂದು ಮಾಡಿರುವ ಭಾಷಣದ ದೃಶ್ಯಾವಳಿ ಇರುವ ಸಿ.ಡಿಯನ್ನೂ ದೂರಿನೊಂದಿಗೆ ನೀಡಿತು.

'ಕಾಲಾ ಕುಮಾರಸ್ವಾಮಿ ಎನ್ನುವ ಮೂಲಕ ಜಮೀರ್ ಅಹಮ್ಮದ್ ಅವರು ಕುಮಾರಸ್ವಾಮಿ ಅವರ ಮೈಬಣ್ಣದ ಕುರಿತು ಕೀಳಾಗಿ ಮಾತನಾಡಿದ್ದಾರೆ. ಅವರ ಹೇಳಿಕೆ ಜನಾಂಗೀಯ ನಿಂದನೆ ವ್ಯಾಪ್ತಿಗೆ ಬರುತ್ತದೆ. ಜಮೀರ್ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಸಂತ್ರಸ್ತೆ ಪರ ವಕೀಲ ಕೆ.ಎನ್. ಜಗದೀಶ್ ಕುಮಾರ್ ಹೇಳಿಕೆ

# 'ರಮೇಶ ಜಾರಕಿಹೊಳಿ ಆಸ್ಪತ್ರೆಯಲ್ಲಿಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ತಂಡದ ವಕೀಲರೊಬ್ಬರು ಬೆಳಗಾವಿ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅತ್ಯಾಚಾರ ಪ್ರಕರಣದ ಆರೋಪಿ ಆಸ್ಪತ್ರೆಯಲ್ಲಿಲ್ಲವೆಂದು ಅನುಮಾನ ವ್ಯಕ್ತಪಡಿಸಿದ್ದಾರೆ' ಎಂದು ಸಂತ್ರಸ್ತೆ ಪರ ವಕೀಲ ಕೆ.ಎನ್. ಜಗದೀಶ್‌ಕುಮಾರ್ ಹೇಳಿದ್ದಾರೆ.

ಎಸ್‌ಐಟಿ ವಿಚಾರಣೆಗೆ ರಮೇಶ ಜಾರಕಿಹೊಳಿ ಗೈರಾಗಿರುವುದಕ್ಕೆ ಪ್ರತಿಕ್ರಿಯಿಸಿ ಸಾಮಾಜಿಕ ಜಾಲತಾಣದಲ್ಲಿ ನೇರ ಪ್ರಸಾರದಲ್ಲಿ ಮಾತನಾಡಿ ರುವ ಅವರು, 'ಆರೋಪಿಗೆ ಕೊರೊನಾ ಸೋಂಕು ತಗುಲಿ ರುವುದು ನಿಜವೇ? ಎಂಬುದರ ಬಗ್ಗೆ ನಮ್ಮ ತಂಡ ತೆರೆಮರೆಯಲ್ಲಿ ಮಾಹಿತಿ ಕಲೆಹಾಕುತ್ತಿದೆ' ಎಂದಿದ್ದಾರೆ.

'ನಾವೂ ಮಾನವರು. ರಮೇಶ ಅವರಿಗೆ ಕೊರೊನಾ ಸೋಂಕು ತಗುಲಿರುವುದು ನಿಜವೇ ಆಗಿದ್ದರೆ, ಬೇಗನೇ ಗುಣಮುಖರಾಗಿ ಎಸ್‌ಐಟಿ ಎದುರು ಹಾಜರಾಗಲಿ ಎಂದು ಕೊಲ್ಹಾಪುರ ಮಹಾಲಕ್ಷ್ಮಿ ಹಾಗೂ ಸವದತ್ತಿ ಯಲ್ಲಮ್ಮ ದೇವಿಯನ್ನು ಬೇಡಿಕೊಳ್ಳುತ್ತೇವೆ. ಅವರಿಗಾಗಿ ದೇವಸ್ಥಾನಕ್ಕೂ ಹೋಗಿ ಬರುತ್ತೇನೆ' ಎಂದೂ ತಿಳಿಸಿದ್ದಾರೆ.

ಎಸ್‌ಐಟಿ ಅಧಿಕಾರಿಗಳನ್ನೂ ಕ್ವಾರಂಟೈನ್ ಮಾಡಿ: 'ಎಸ್‌ಐಟಿ ಅಧಿಕಾರಿಗಳು, ರಮೇಶ ಅವರ ಪ್ರಾಥಮಿಕ ಸಂಪರ್ಕದಲ್ಲಿದ್ದರು. ಅಧಿಕಾರಿಗಳನ್ನೂ ಬೆಳಗಾವಿ ಆಸ್ಪತ್ರೆಯಲ್ಲಿ ಕ್ವಾರಂಟೈನ್‌ನಲ್ಲಿಡುವಂತೆ ಸರ್ಕಾರವನ್ನು ಕೋರುತ್ತೇನೆ. ಈ ರೀತಿಯಾದರೆ, ರಮೇಶ ಜಾರಕಿಹೊಳಿ ಅವರಿಗೂ ಭದ್ರತೆ ಸಿಕ್ಕಂತಾಗುತ್ತದೆ' ಎಂದೂ ಜಗದೀಶ್ ಹೇಳಿದರು.

### 'ಕೂಡಲೇ ಆರೋಪಿ ಬಂಧಿಸಿ'

'ಸಂವಿಧಾನ ಹಾಗೂ ಪೊಲೀಸ್ ಅಧಿನಿಯಮ ಪ್ರಕಾರ, ಎಫ್‌ಐಆರ್ ದಾಖಲಾದ ಕೂಡಲೇ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಆದರೆ, ಅತ್ಯಾಚಾರ ಪ್ರಕರಣದ ಆರೋಪಿ ರಮೇಶ ಜಾರಕಿಹೊಳಿ ಅವರನ್ನು ಇದುವರೆಗೂ ಬಂಧಿಸಿಲ್ಲ. ಇದರಿಂದಾಗಿ, ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆ ಮೇಲೆ ಗೌರವವೇ ಇಲ್ಲದಂತಾಗಿದೆ' ಎಂದು ಕೆಲ ವಕೀಲರು, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಬಡವ, ಶ್ರೀಮಂತ ಹಾಗೂ ಅತೀ ಹೆಚ್ಚು ಬಲಿಷ್ಠಶಾಲಿ ವ್ಯಕ್ತಿಗಳಾಗಿದ್ದರೂ ಎಫ್‌ಐಆರ್ ಆದ ಕೂಡಲೇ ಬಂಧಿಸಬೇಕು. ನ್ಯಾಯಾಲಯದ ಅನುಮತಿ ಪಡೆದು ತನಿಖೆ ಮುಂದುವರಿಸಬೇಕು. ಈ ಪ್ರಕರಣದಲ್ಲಿ ಸಂವಿಧಾನಕ್ಕೆ ಅಪಮಾನ ಮಾಡಿ, ಪೊಲೀಸ್ ಅಧಿನಿಯಮವನ್ನೇ ದುರುಪಯೋಗಪಡಿಸಿಕೊಳ್ಳುತ್ತಿರುವುದು ಸರ್ಕಾರ ಹಾಗೂ ಪೊಲೀಸ್ ಇಲಾಖೆಗೆ ಶೋಭೆ ತರುವುದಿಲ್ಲ' ಎಂದೂ ವಕೀಲರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈ ಹಿಂದೆಯೂ ಬಿ.ಎಸ್. ಯಡಿಯೂರಪ್ಪ, ಡಿ.ಕೆ. ಶಿವಕುಮಾರ್ ಅವರನ್ನು ಎಫ್‌ಐಆರ್ ದಾಖಲಾದ ಕೂಡಲೇ ಬಂಧಿಸಲಾಗಿತ್ತು. ಹೀಗಾಗಿ, ಸರ್ಕಾರ ಹಾಗೂ ಪೊಲೀಸ್ ಇಲಾಖೆಯ ಗೌರವ ಕಾಪಾಡುವುದಕ್ಕಾಗಿ ರಮೇಶ ಅವರನ್ನು ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ' ಎಂದೂ ವಕೀಲರು ಕೋರಿದ್ದಾರೆ.

### 'ಸಿ.ಡಿ ಪ್ರಕರಣ: ಸರ್ಕಾರದ ದ್ವಂದ್ವ ನೀತಿ'

**ನವದೆಹಲಿ:** ಶಾಸಕ ರಮೇಶ್ ಜಾರಕಿಹೊಳಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾದ ಸಿ.ಡಿ ಪ್ರಕರಣದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ದ್ವಂದ್ವ ನೀತಿ ಅನುಸರಿಸುತ್ತಿದೆ ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ದೂರಿದರು.

ಎಐಸಿಸಿ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅತ್ಯಾಚಾರ ಸಂತ್ರಸ್ತೆಯೇ ಬಂದು ದೂರು ನೀಡಿದರೂ ರಮೇಶ್ ಜಾರಕಿಹೊಳಿ ಅವರನ್ನು ಬಂಧಿಸಲಾಗಿಲ್ಲ. ಶಾಸಕರಿಗೇ ಒಂದು ಕಾನೂನು, ಜನಸಾಮಾನ್ಯರಿಗೇ ಒಂದು ಕಾನೂನು ಇದೆಯೇ' ಎಂದು ಪ್ರಶ್ನಿಸಿದರು.

ದೂರು ನೀಡಿದವರನ್ನೇ ಹೆದರಿಸುವ ಬೆಳವಣಿಗೆ ಕರ್ನಾಟಕದಲ್ಲಿ ಕಂಡುಬಂದಿದೆ. ಸರ್ಕಾರಕ್ಕೆ ನಿಜಕ್ಕೂ ಕಳಕಳಿ ಇದ್ದರೆ, ಕೂಡಲೇ ಆರೋಪಿ ಸ್ಥಾನದಲ್ಲಿರುವ ಜಾರಕಿಹೊಳಿ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು ಎಂದು ಅವರು ಕೋರಿದರು.

'ವಿಶೇಷ ತನಿಖಾ ತಂಡ (ಎಸ್‌ಐಟಿ)ದಲ್ಲಿ ಇರುವವರು ಸಂತ್ರಸ್ತೆಯ ಕುಟುಂಬ ಸದಸ್ಯರ ಮೇಲೆ ಒತ್ತಡ ಹೇರುತ್ತಿದ್ದಾರೆ. ಎಸ್‌ಐಟಿ ರಚಿಸಿರುವುದು ಸಂತ್ರಸ್ತೆಯ ರಕ್ಷಣೆಗೋ ಅಥವಾ ಆರೋಪಿಯ ರಕ್ಷಣೆಗೋ ಎಂಬುದೇ ತಿಳಿಯದಂತಾಗಿದೆ ಎಂದು ಅವರು ಆಶ್ಚರ್ಯ ವ್ಯಕ್ತಪಡಿಸಿದರು.

ಅತ್ಯಾಚಾರದ ಸಂತ್ರಸ್ತೆಗೆ ಭದ್ರತೆ ಒದಗಿಸುವ ಬದಲು ಆಕೆಯನ್ನೇ ಬೆದರಿಸುವ ಕೆಲಸ ನಡೆಯುತ್ತಿದೆ ಎಂದು ಅವರು ಟೀಕಿಸಿದರು.

## ಹಕ್ಕುಸ್ವಾಮ್ಯ: ಒರಾಕಲ್ ವಿರುದ್ಧ ಗೂಗಲ್‌ಗೆ ಜಯ

**ವಾಷಿಂಗ್ಟನ್ (ಎಎಫ್‌ಪಿ):** ಆಂಡ್ರಾಯ್ಡ್ ಮೊಬೈಲ್ ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಜಾವಾ ಪ್ರೋಗ್ರಾಮಿಂಗ್ ಭಾಷೆ ಬಳಕೆ ಕುರಿತು ಒರಾಕಲ್ ಕಂಪನಿ ಜೊತೆಗೆ ನಡೆದ ದೀರ್ಘಕಾಲದ ಕಾನೂನು ಹೋರಾಟದಲ್ಲಿ ಗೂಗಲ್ ಸಂಸ್ಥೆ ಜಯ ಗಳಿಸಿದೆ.




ಅಮೆರಿಕದ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ 6–2ರ ಬಹುಮತದೊಂದಿಗೆ ಗೂಗಲ್ ಸಂಸ್ಥೆಯ ಪರವಾಗಿ ತೀರ್ಪು ಹೊರಬಿತ್ತು. ಈ ಮೂಲಕ ತನ್ನ ಎದುರಾಳಿಗೆ ಕೋಟ್ಯಂತರ ದಂಡ ಪಾವತಿಸುವುದರಿಂದ ಗೂಗಲ್ ಪಾರಾಯಿತು.

'ಗೂಗಲ್ ಸಂಸ್ಥೆಯು ಹಕ್ಕುಸ್ವಾಮ್ಯ ಕಾನೂನನ್ನು ಉಲ್ಲಂಘಿಸಿಲ್ಲ. ಹಕ್ಕುಸ್ವಾಮ್ಯಕ್ಕೆ ಒಳಗಾಗಬಹುದಾದ ವಸ್ತುವನ್ನೇ ಬಳಸಿಕೊಂಡಿದ್ದರೂ, ಅದು 'ನ್ಯಾಯೋಚಿತ ಬಳಕೆ'ಯಷ್ಟೇ ಆಗಿದೆ' ಎಂದು ತೀರ್ಪು ಬರೆದ ನ್ಯಾಯಮೂರ್ತಿ ಸ್ಟೀಫನ್ ಬ್ರೇಯರ್ ಅವರು ಉಲ್ಲೇಖಿಸಿದರು.




ಪ್ರಶಸ್ತಿ ವಿಜೇತ ಕೆನರಾ ಬ್ಯಾಂಕ್ ತಂಡಕ್ಕೆ ಹಿರಿಯ ಹಾಕಿ ಆಟಗಾರ, ಒಲಿಂಪಿಯನ್ ಧನರಾಜ್ ಪಿಳ್ಳೈ (ಮಧ್ಯೆ) ಟ್ರೋಫಿ ಹಾಗೂ ನಗದು ಬಹುಮಾನ ವಿತರಿಸಿದರು. ಹಾಕಿ ಬೆಂಗಳೂರು ಗೌರವ ಕಾರ್ಯದರ್ಶಿ ಕೆ.ಕೃಷ್ಣಮೂರ್ತಿ, ಕ್ಯೂನೆಟ್ ಕಂಪನಿಯ ಭಾರತ ಪ್ರಾಂತ್ಯದ ಕಾರ್ಪೊರೇಟ್ ಸಂವಹನ ವಿಭಾಗದ ಮುಖ್ಯಸ್ ನಿಶ್ಚಲ್ ಸಿ. ಈ ಸಂದರ್ಭದಲ್ಲಿ ಇದ್ದರು.

## ಹಾಕಿ: ಕೆನರಾ ಬ್ಯಾಂಕ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆನರಾ ಬ್ಯಾಂಕ್ ತಂಡವು ರೋಚಕ ಹಣಾಹಣಿಯಲ್ಲಿ ಟೀಮ್ ಕೂರ್ಗ್ ಗಲ್ಫ್ ತಂಡವನ್ನು ಮಣಿಸಿ ಕೈರೋಸ್ ಕಪ್ ಹಾಕಿ ಫೈವ್ ಎ ಸೈಡ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಶಾಂತಿನಗರದ ಕೆ.ಎಂ. ಕಾರ್ಯಪ್ಪ ಅರೆನಾದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡ 6–5ರಿಂದ ಪೆನಾಲ್ಟಿ ಶೂಟೌಟ್‌ನಲ್ಲಿ ಗೆದ್ದಿತು. ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 3–3 ಗೋಲುಗಳ ಸಮಬಲ ಸಾಧಿಸಿದ್ದವು. ಹೀಗಾಗಿ ಫಲಿತಾಂಶಕ್ಕಾಗಿ ಶೂಟೌಟ್ ಮೊರೆ ಹೋಗಲಾಯಿತು.

ಶೂಟೌಟ್‌ನಲ್ಲಿ ಕೆನರಾ ಮೂರು ಬಾರಿ ಯಶಸ್ಸು ಸಾಧಿಸಿತು. ಟೀಮ್ ಕೂರ್ಗ್ ಗಲ್ಫ್ ಕೇವಲ ಎರಡು ಬಾರಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿತು.

## ಬಾಲಕಿ ಕೊಂದು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹದಿನೇಳು ವರ್ಷದ ಬಾಲಕಿಯ ಕತ್ತು ಬಿಗಿದು ಕೊಲೆ ಮಾಡಿರುವ ಆರೋಪಿ ರಾಜು, ಕೃತ್ಯದ ನಂತರ ತಾನೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬಂಡೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಸೋಮಸಂದ್ರಪಾಳ್ಯದ ಬಾಡಿಗೆ ಕೊಠಡಿಯಲ್ಲಿ ವಾಸವಿದ್ದ ರಾಜು, ತನ್ನ ಮನೆ ಸಮೀಪದಲ್ಲೇ ವಾಸವಿದ್ದ ಬಾಲಕಿಯನ್ನು ಪರಿಚಯಿಸಿಕೊಂಡು ಸ್ನೇಹ ಬೆಳೆಸಿದ್ದ. ಬಾಲಕಿಯನ್ನು ಆಗಾಗ ತನ್ನ ಕೊಠಡಿಗೂ ಕರೆಸಿಕೊಳ್ಳುತ್ತಿದ್ದ. ಅದೇ ಕೊಠಡಿಯಲ್ಲಿ ಬಾಲಕಿಯನ್ನು ಕೊಂದಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭಾನುವಾರ ಬೆಳಿಗ್ಗೆ ಮಲ್ಲೇಶ್ವರದಿಂದ ಯಶವಂತಪುರದತ್ತ ಹೊರಟಿದ್ದ ರೈಲು ಹತ್ತಿದ್ದ ರಾಜು, ಮಾರ್ಗಮಧ್ಯೆಯೇ ರೈಲಿನಿಂದ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದ. ತೀವ್ರ ಗಾಯಗೊಂಡು ಪ್ರಜ್ಞೆ ಕಳೆದುಕೊಂಡಿದ್ದ ಆತನನ್ನು ಸ್ಥಳೀಯರು ರಾಜೀವ್ ಗಾಂಧಿ ಆಸ್ಪತ್ರೆಗೆ ದಾಖಲಿಸಿದ್ದರು. ಪ್ರಜ್ಞೆ ಬರುತ್ತಿದ್ದಂತೆ ಆರೋಪಿ, ಕೊಲೆ ಸಂಗತಿಯನ್ನು ವೈದ್ಯರ ಬಳಿ ಬಾಯ್ಬಿಟ್ಟಿದ್ದ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಮಾಹಿತಿ ಬರುತ್ತಿದ್ದಂತೆ ಆರೋಪಿಯ ಕೊಠಡಿಗೆ ಹೋಗಿ ಪರಿಶೀಲಿಸಲಾಯಿತು. ಅಲ್ಲಿದ್ದ ಬಾಲಕಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು' ಎಂದೂ ಮೂಲಗಳು ತಿಳಿಸಿವೆ.

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಹಾಗೂ ಕೊಲೆ ಆರೋಪದಡಿ ರಾಜು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತ ಸದ್ಯ ಆಸ್ಪತ್ರೆಯಲ್ಲಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವಶಕ್ಕೆ ಪಡೆಯಲಾಗುವುದು. ಬಳಿಕವೇ, ಕೊಲೆಗೆ ಕಾರಣವೇನು ಎಂಬುದು ತಿಳಿಯಲಿದೆ' ಎಂದೂ ತಿಳಿಸಿವೆ.

**ಡೆಲಿವರಿ ಬಾಯ್ ಕೆಲಸ:** 'ಆರೋಪಿ ರಾಜು, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದ. ಬಾಲಕಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದಳು. ಒಂದೇ ಪ್ರದೇಶವಾಗಿದ್ದರಿಂದ ಇಬ್ಬರಿಗೂ ಪರಿಚಯವಾಗಿತ್ತು. ನಂತರ ಅವರಿಬ್ಬರು ಒಟ್ಟಿಗೆ ಸುತ್ತಾಡಲಾರಂಭಿಸಿದ್ದರು. ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಏ. 3ರಂದು ಕಾಲೇಜು ಮುಗಿದ ಬಳಿಕ ಬಾಲಕಿ, ಆರೋಪಿ ಕೊಠಡಿಗೆ ಹೋಗಿದ್ದಳು. ಅದೇ ವೇಳೆ ಬಾಲಕಿ ಹಾಗೂ ಆರೋಪಿ ನಡುವೆ ಜಗಳವಾಗಿರುವ ಮಾಹಿತಿ ಇದೆ. ಅದೇ ಸಂದರ್ಭದಲ್ಲೇ ಆರೋಪಿ, ಕತ್ತು ಬಿಗಿದು ಬಾಲಕಿಯನ್ನು ಕೊಂದಿದ್ದಾನೆಂದು ಗೊತ್ತಾಗಿದೆ. ನಂತರ, ಮೃತದೇಹವನ್ನು ಕೊಠಡಿಯಲ್ಲೇ ಬಿಟ್ಟು ಬೀಗ ಹಾಕಿಕೊಂಡು ಹೊರ ಬಂದಿದ್ದ.' 'ರಾತ್ರಿಯಾದರೂ ಬಾಲಕಿ ಮನೆಗೆ ಹೋಗಿರಲಿಲ್ಲ. ಗಾಬರಿಗೊಂಡ ಪೋಷಕರು, ಬಂಡೆಪಾಳ್ಯ ಠಾಣೆಯಲ್ಲಿ ದೂರು ಸಹ ನೀಡಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.



ಕಾರ್ಯಕ್ರಮದಲ್ಲಿ (ಮಧ್ಯದಲ್ಲಿ ಕುಳಿತವರು ಎಡದಿಂದ) ಲಕ್ಷ್ಮೀನಾರಾಯಣ ಹೆಗಡೆ ಕಲ್ಲಬ್ಬೆ (ಹವ್ಯಕ ಶ್ರೀ 2021), ಗುರುಮೂರ್ತಿ ವೈದ್ಯ (ಹವ್ಯಕ ಶ್ರೀ 2020), ತೇಜಸ್ವಿ ಶಂಕರ್ (ಹವ್ಯಕ ಶ್ರೀ 2020), ಗಜಾನನ ಘನಪಾಠಿ (ಹವ್ಯಕ ಶ್ರೀ 2020), ರಾಮಚಂದ್ರ ಹೆಗಡೆ ಕೊಂಡದಕುಳಿ (ಹವ್ಯಕ ಭೂಷಣ 2020), ಬಂದಗದ್ದೆ ನಾಗರಾಜ (ಹವ್ಯಕ ವಿಭೂಷಣ 2020), ಡಾ.ಶ್ಯಾಮ್ ಸಿ. ಭಟ್ (ಹವ್ಯಕ ಭೂಷಣ 2020), ಡಾ.ಎಚ್.ಎಲ್.ಸುಬ್ಬರಾವ್ (ಹವ್ಯಕ ಭೂಷಣ 2021), ನಾಗರಾಜ ಹೆಗಡೆ ಗೊರನಮನೆ (ಹವ್ಯಕ ಭೂಷಣ 2021), ಚಂದ್ರಕಲಾ ವಿ. ಭಟ್ (ಹವ್ಯಕ ಶ್ರೀ 2021) ಮತ್ತು ಈಶಾ ಶರ್ಮ ಕಾಂತಜೆ (ಹವ್ಯಕ ಶ್ರೀ 2021) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪಲ್ಲವ ಪುರಸ್ಕಾರ ಪಡೆದವರು (ಮೊದಲ ಸಾಲು; ಎಡದಿಂದ) ನಂದನ ಎನ್. ಹೆಗಡೆ, ಡಾ.ವಿ. ಸ್ನೇಹ, ಹೇಮಸ್ವಾತಿ ಕುರಿಯಾಜೆ, ಸಂಜನಾಭಟ್, ಎಂ.ಎನ್.ಗುರುಪ್ರಸಾದ್ ಮತ್ತು ಪ್ರಜ್ಞಾ ಪಿ. ಶರ್ಮ. (ಹಿಂದಿನ ಸಾಲು) ಸಂಸ್ಥಾಪನೋತ್ಸವ ಸಮಿತಿ ಸಂಚಾಲಕ ಮುಗಲೋಡಿ ಕೃಷ್ಣಮೂರ್ತಿ, ವಿಶೇಷ ಪ್ರಶಸ್ತಿ ಸಂಚಾಲಕ ರವಿನಾರಾಯಣ ಪಟ್ಟಾಜೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಜಕ್ಕಳ ಗಿರೀಶ ಭಟ್, ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್. ಗುರುಮೂರ್ತಿ, ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಮತ್ತು ಪ್ರಧಾನ ಕಾರ್ಯದರ್ಶಿ ವೇಣುವಿಘ್ನೇಶ ಇದ್ದಾರೆ –ಪ್ರಜಾವಾಣಿ ಚಿತ್ರ

# 'ಹವ್ಯಕರು, ಬ್ರಾಹ್ಮಣರು ಒಗ್ಗೂಡಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರಸ್ತುತ ಪರಿಸ್ಥಿತಿಯಲ್ಲಿ ಹವ್ಯಕರು ಹಾಗೂ ಬ್ರಾಹ್ಮಣರು ಒಗ್ಗೂಡುವುದು ಅನಿವಾರ್ಯ' ಎಂದು ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಗುರುಮೂರ್ತಿ ಅಭಿಪ್ರಾಯಪಟ್ಟರು.

ಅಖಿಲ ಹವ್ಯಕ ಮಹಾಸಭಾ ಭಾನುವಾರ ಆಯೋಜಿಸಿದ್ದ ಸಂಸ್ಥಾಪನೋತ್ಸವ, ಹವ್ಯಕ ವಿಶೇಷ ಪ್ರಶಸ್ತಿ ಹಾಗೂ ಪಲ್ಲವ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬೇರೆಯವರನ್ನು ದ್ವೇಷಿಸುವ ಸಮಾಜ ನಮ್ಮದಲ್ಲ. ನಾವು ಇತರ ಸಮುದಾಯಗಳಿಗೆ ಮಾರ್ಗದರ್ಶನ ಮಾಡುವವರು. ಸಮುದಾಯದ ಹಿತ ಹಾಗೂ ನಮ್ಮತನವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಹವ್ಯಕರು ಮತ್ತು ಬ್ರಾಹ್ಮಣರು ಒಟ್ಟಾಗಬೇಕಿದೆ' ಎಂದರು.

'ಹವ್ಯಕರು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಛಾಪು ಮೂಡಿಸುತ್ತಿದ್ದಾರೆ. ಸಮಾಜಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡುತ್ತಿದ್ದಾರೆ. ಹವ್ಯಕರು ಮೂಲತಃ ಕೃಷಿಕರಾದರು ಕೂಡ ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿ ಸಮಾಜದಲ್ಲಿ ಗೌರವಯುತವಾದ ಬದುಕು ಸಾಗಿಸುತ್ತಿದ್ದಾರೆ. ದಿವಂಗತ ರಾಮಕೃಷ್ಣ ಹೆಗಡೆ, ದತ್ತಾತ್ರೇಯ ಹೊಸಬಾಳೆ, ವಿಶ್ವೇಶ್ವರ ಹೆಗಡೆ ಕಾಗೇರಿ ಹೀಗೆ ಅನೇಕರ ಸಾಧನೆ ನಮಗೆ ಪ್ರೇರಣೆ. ಅವರು ನಮಗೆ ದಾರಿದೀಪವಾಗಿದ್ದಾರೆ' ಎಂದು ತಿಳಿಸಿದರು.

ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ, 'ವಿಶ್ವದಲ್ಲಿ ಒಟ್ಟು 4 ಲಕ್ಷ ಮಂದಿ ಹವ್ಯಕರಿದ್ದಾರೆ. ಈ ಪೈಕಿ ಯಾರೂ ಶಿಕ್ಷಣದಿಂದ ವಂಚಿತರಾಗಿಲ್ಲ. ಹೀಗಾಗಿ ನಮ್ಮಲ್ಲಿ ಪ್ರತಿಭಾನ್ವಿತರ ದೊಡ್ಡ ದಂಡೇ ಇದೆ. ಅಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದರಿಂದ ಉಳಿದವರಿಗೂ ಸ್ಫೂರ್ತಿ ಬರುತ್ತದೆ. ನಮ್ಮ ಪರಂಪರೆಯನ್ನು ಉಳಿಸಿ ಬೆಳೆಸಲು ಇದರಿಂದ ಅನುಕೂಲವಾಗುತ್ತದೆ' ಎಂದರು.

'ಈ ಪ್ರಶಸ್ತಿ ನಮಗೆ ಸಲ್ಲಬೇಕಾದದ್ದಲ್ಲ. ಇದು ಪರಂಪರೆಗೆ ಕೊಟ್ಟ ಗೌರವ. ಈ ಪರಂಪರೆ ಹೀಗೆ ಮುಂದುವರಿಯಬೇಕು' ಎಂದು 2020ನೇ ಸಾಲಿನ ಹವ್ಯಕ ವಿಭೂಷಣ ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ಬಂದಗದ್ದೆ ನಾಗರಾಜ ಹೇಳಿದರು.

2020ನೇ ಸಾಲಿನ ಹವ್ಯಕ ಭೂಷಣ ಪ್ರಶಸ್ತಿ ಪಡೆದ ಡಾ.ಶ್ಯಾಮ್ ಸಿ.ಭಟ್ 'ಈ ಪ್ರಶಸ್ತಿ ಸಿಕ್ಕಿರುವುದಕ್ಕೆ ಖುಷಿಯಾಗಿದೆ. ಇನ್ನಷ್ಟು ಸಂಶೋಧನೆಗಳನ್ನು ಕೈಗೊಳ್ಳಲು, ಉತ್ತಮ ಕಾರ್ಯಗಳನ್ನು ಮಾಡಲು ಈ ಪುರಸ್ಕಾರ ಪ್ರೇರಣೆಯಾಗಿದೆ' ಎಂದು ತಿಳಿಸಿದರು.



ಚಲ್ಲಹಳ್ಳಿ ಗ್ರಾಮದಲ್ಲಿ ನಿರ್ಮಿಸಲಾದ ಓವರ್ ಹೆಡ್ ಟ್ಯಾಂಕ್ ಅನ್ನು ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು. ಜಿ.ಮರಿಸ್ವಾಮಿ, ಚೊಕ್ಕನಹಳ್ಳಿ ವೆಂಕಟೇಶ್, ದಿಬ್ಬೂರು ಜಯಣ್ಣ ಇದ್ದರು

## ನೀರು ಸಂಗ್ರಹ ಟ್ಯಾಂಕ್ ಉದ್ಘಾಟನೆ

**ಹೆಸರಘಟ್ಟ:** ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅನುದಾನದಡಿ ನಿರ್ಮಿಸಲಾದ 1 ಲಕ್ಷ ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಅನ್ನು ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಶನಿವಾರ ಉದ್ಘಾಟಿಸಿದರು.

ಸೋಣೇನಹಳ್ಳಿ ಜಿಲ್ಲಾ ಪಂಚಾಯಿತಿ ಸದಸ್ಯ ಚೊಕ್ಕನಹಳ್ಳಿ ವೆಂಕಟೇಶ್, 'ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ ಚಲ್ಲಹಳ್ಳಿ, ಸುರಧೇನುಪುರ, ಕುರುಬರಹಳ್ಳಿ, ಚೊಕ್ಕನಹಳ್ಳಿ, ಶಾನುಭೋಗನಹಳ್ಳಿ ಗ್ರಾಮದಲ್ಲಿ ತಲಾ ₹15 ಲಕ್ಷ ವೆಚ್ಚದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಲಾಗಿದೆ' ಎಂದರು.

ಬಿಜೆಪಿ ಮುಖಂಡ ದಿಬ್ಬೂರು ಜಯಣ್ಣ, ಸೋಣೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅನಸೂಯಮ್ಮ ಇದ್ದರು.

**'ಬುದ್ಧಿಭ್ರಮಣೆಯಾಗಿದೆ':** 'ಬಸನಗೌಡ ಪಾಟೀಲ ಯತ್ನಾಳ್‌ಗೆ ಬುದ್ಧಿ ಭ್ರಮಣೆಯಾಗಿದೆ. ಅವರಿಗೆ ಯಡಿಯೂರಪ್ಪ, ವಿಜಯೇಂದ್ರ ಬಿಟ್ಟು ಬೇರೆ ಏನೂ ಕಾಣಿಸುತ್ತಿಲ್ಲ.ಯಡಿಯೂರಪ್ಪ ಅವರಿಗೆ ನಾನು ₹200 ಕೋಟಿ ಮನೆ ಉಡುಗೊರೆ ಕೊಟ್ಟಿದ್ದೇನೆ ಎನ್ನುವ ಮಾತು ಸತ್ಯಕ್ಕೆ ದೂರ' ಎಂದು ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ ಹೇಳಿದರು.

## 'ಆಫ್ರಿಕನ್ ಕಿಚನ್' ಹೆಸರಿನಲ್ಲಿ ಅಕ್ರಮ ಮದ್ಯ

**ಬೆಂಗಳೂರು:** 'ಆಫ್ರಿಕನ್ ಕಿಚನ್' ಹೆಸರಿನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಆರೋಪಿ ಜೋಹಾನ್ಸ್ ವಿಯಿಗ್ವಿಂಗಿಫೆರಿ ಕೆನಿಗಯ್ (46) ಎಂಬಾತನನ್ನು 1 ಕಿ.ಮೀ.ವರೆಗೆ ಬೆನ್ನಟ್ಟಿ ಹೆಣ್ಣೂರು ಪೊಲೀಸರು ಸೆರೆಹಿಡಿದಿದ್ದಾರೆ.

'ನೈಜೀರಿಯಾದ ಜೋಹಾನ್ಸ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ನಗರದಲ್ಲಿ ನಡೆಯುತ್ತಿದ್ದ ಪಾರ್ಟಿಗಳಿಗೆ 'ಆಫ್ರಿಕನ್ ಕಿಚನ್' ಹೆಸರಿನಲ್ಲಿ ಅಕ್ರಮ ವಾಗಿ ಮದ್ಯ ಪೂರೈಕೆ ಮಾಡುತ್ತಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಆತನನ್ನು ಬಂಧಿಸಲಾಗಿದೆ. ಆತನಿಂದ 103 ಲೀಟರ್ ಮದ್ಯ, ಮಾರಕಾಸ್ತ್ರ ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಕ್ರಮ ಮದ್ಯ ಮಾರಾಟ ಪ್ರಕರಣದಲ್ಲಿ ಜೈಲು ಸೇರಿದ್ದ ಆರೋಪಿ, ಈಚೆಗಷ್ಟೇ ಜಾಮೀನು ಮೇಲೆ ಹೊರ ಬಂದಿದ್ದ. ಪುನಃ ಅಕ್ರಮ ಮದ್ಯ ಮಾರಲಾರಂಭಿಸಿದ್ದ. ಈತನ ಬಗ್ಗೆ ಮನೆ ಮಾಲೀಕರು ದೂರು ನೀಡಿದ್ದರು' ಎಂದೂ ತಿಳಿಸಿದರು.

**ಮನೆ ಮಾಲೀಕರಿಗೆ ಬೆದರಿಕೆ:** '3 ವರ್ಷಗಳ ಹಿಂದೆ ವಾಣಿಜ್ಯ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿ, ಬಾಡಿಗೆ ಮನೆಯಲ್ಲಿ ವಾಸವಿದ್ದ. ಅದೇ ಮನೆಯಲ್ಲೇ ಅಕ್ರಮ ಚಟುವಟಿಕೆ ನಡೆಸುತ್ತಿದ್ದ. ಅದನ್ನು ಪ್ರಶ್ನಿಸಿದ್ದ ಮನೆ ಮಾಲೀಕರಿಗೂ ಜೀವ ಬೆದರಿಕೆಯೊಡ್ಡಿದ್ದ. ಭಾನುವಾರ ರಾತ್ರಿ ಆರೋಪಿಗಳು ಮನೆಯಲ್ಲಿ ಪಾರ್ಟಿ ಮಾಡುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಇನ್‌ಸ್ಪೆಕ್ಟರ್ ವಸಂತಕುಮಾರ್ ನೇತೃತ್ವದ ತಂಡವು ಸ್ಥಳಕ್ಕೆ ಹೋಗಿತ್ತು. ಇನ್‌ಸ್ಪೆಕ್ಟರ್ ಕೊಲೆಗೆ ಯತ್ನಿಸಿ ಪರಾರಿಯಾದ. ಆತನನ್ನು ಬೆನ್ನಟ್ಟಿ ಬಂಧಿಸಲಾಯತು' ಎಂದರು.

## ಅಣ್ಣನಿಂದ ತಂಗಿಯ ಹತ್ಯೆ–ಕ್ಯಾಮೆರಾದಿಂದ ಸೆರೆಸಿಕ್ಕ

**ಬೆಂಗಳೂರು:** ತಂಗಿಯನ್ನೇ ಹತ್ಯೆ ಮಾಡಿ, ಆತ್ಮಹತ್ಯೆಯೆಂದು ಬಿಂಬಿಸಲು ಆಕೆಯ ಮೃತದೇಹವನ್ನು ರೈಲು ಹಳಿ ಮೇಲೆ ಎಸೆದಿದ್ದ ಆರೋಪಿ ಕಿರಣ್ (25) ಎಂಬಾತನನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

'ಹೆಣ್ಣೂರು ಟಿಎನ್‌ಟಿ ಲೇಔಟ್ ನಿವಾಸಿ ಮಂಗಳಾ (19) ಅವರನ್ನು ಕೊಲೆ ಮಾಡಿ, ಬೈಯಪ್ಪನಹಳ್ಳಿ ರೈಲು ನಿಲ್ದಾಣ ಸಮೀಪದಲ್ಲೇ ಹಳಿ ಮೇಲೆ ಮೃತದೇಹ ಎಸೆಯಲಾಗಿತ್ತು. ಇದನ್ನು ಆತ್ಮಹತ್ಯೆಯೆಂದು ಆರಂಭದಲ್ಲಿ ತಿಳಿಯಲಾಗಿತ್ತು. ತನಿಖೆ ನಡೆಸಿದಾಗಲೇ ಕೊಲೆ ರಹಸ್ಯ ಬಯಲಾಯಿತು. ಅಣ್ಣ ಕಿರಣ್‌ನೇ ಆರೋಪಿ ಎಂಬುದು ತಿಳಿಯಿತು' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಕಿರಣ್, ಆಟೊ ಚಾಲಕ. ಮಂಗಳಾ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಸೇರಿ ತಾಯಿ ಜೊತೆ ವಾಸವಿದ್ದರು. ಮಂಗಳಾ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದರು. ಇಬ್ಬರೂ ಜೊತೆಯಾಗಿ ಸುತ್ತಾಡುತ್ತಿದ್ದರು ಎನ್ನಲಾಗಿದೆ. ಭಾನುವಾರ ಸಂಜೆ ಮಂಗಳಾ ಮನೆಗೆ ತಡವಾಗಿ ಬಂದಿದ್ದಳು. ಅದಕ್ಕಾಗಿ ಜಗಳವಾಗಿತ್ತು. ಸಿಟ್ಟಿಗೆದ್ದ ಆರೋಪಿ, ಚಾಕುವಿನಿಂದ ಇರಿದು ಮಂಗಳಾ ಅವರನ್ನು ಕೊಂದಿದ್ದ' ಎಂದೂ ಹೇಳಿವೆ.

**ಆಟೊದಲ್ಲಿ ಮೃತದೇಹ:** 'ತಂಗಿಯ ಮೃತದೇಹವನ್ನು ಆರೋಪಿ, ತನ್ನ ಆಟೊದಲ್ಲೇ ಹಾಕಿಕೊಂಡು ಬೈಯಪ್ಪನಹಳ್ಳಿ ನಿಲ್ದಾಣ ಬಳಿಯ ರೈಲ್ವೆ ಹಳಿ ಸಮೀಪ ಎಸೆದು ಹೋಗಿದ್ದ. ಅದು ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದರಿಂದ ಆರೋಪಿಯನ್ನು ಬಂಧಿಸುವುದು ಸಾಧ್ಯವಾಯಿತು.


ನಿಧನ ವಾರ್ತೆ

## ಮಲಯಾಳಂನ ಚಿತ್ರನಟ ಪಿ.ಬಾಲಚಂದ್ರನ್

**ಕೊಟ್ಟಾಯಂ(ಕೇರಳ):** ಮಲಯಾಳಂನ ರಂಗಕರ್ಮಿ ಮತ್ತು ಚಿತ್ರನಟ ಪಿ.ಬಾಲಚಂದ್ರನ್ ಅವರು(69) ಸೋಮವಾರ ನಿಧನರಾದರು.

'ಕಳೆದ ಕೆಲವು ತಿಂಗಳುಗಳಿಂದ ಅನಾರೋಗ್ಯದಿಂದಾಗಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಸೋಮವಾರ ವೈಕಾಮ್‌ನಲ್ಲಿರುವ ತಮ್ಮ ನಿವಾಸದಲ್ಲಿ ಕೊನೆ ಉಸಿರೆಳೆದರು' ಎಂದು ಮೂಲಗಳು ತಿಳಿಸಿವೆ.

ಮೂರು ದಶಕಗಳ ಕಾಲ ಸಿನಿಮಾರಂಗದಲ್ಲಿ ಕಾರ್ಯನಿರ್ವಹಿಸಿದ ಬಾಲಚಂದ್ರನ್ ಅವರು 'ಅಂಕಲ್ ಬನ್', 'ಉಲ್ಲಾಡಕ್ಕಂ', 'ಅಗ್ನಿದೇವನ್', 'ಪವಿತ್ರಂ' ಮತ್ತು 'ಪುನರಾದಿವಸಂ' ಸೇರಿದಂತೆ ಹಲವಾರು ಜನಪ್ರಿಯ ಮಲಯಾಳಂ ಚಲನಚಿತ್ರಗಳಿಗೆ ಚಿತ್ರಕತೆ ಬರೆದಿದ್ದಾರೆ.



ಪಿ.ಬಾಲಚಂದ್ರನ್

ಸಿನಿಮಾ ಜಗತ್ತಿಗೆ ಕಾಲಿಡುವ ಮುನ್ನ ಅವರು ನಾಟಕರಂಗದಲ್ಲಿ ಪ್ರಸಿದ್ಧಿ ಪಡೆದಿದ್ದರು. 1989ರಲ್ಲಿ ಬಾಲಚಂದ್ರನ್ ಅವರು ಅತ್ಯುತ್ತಮ ನಾಟಕ ರಚನೆಗಾಗಿ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದರು.

### ಕೃತಕ ಆಮ್ಲಜನಕದ ಕೊರತೆ – ಆತಂಕ ಪಡುವ ಅಗತ್ಯವಿಲ್ಲ: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ

# ಕೋವಿಡ್: ಐಸಿಯು ದಾಖಲಾತಿ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕೇವಲ ಒಂದು ವಾರದ ಅವಧಿಯಲ್ಲಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಪ್ರಮಾಣದಲ್ಲಿ ಶೇ 62ರಷ್ಟು ಏರಿಕೆ ಕಂಡು ಬಂದಿದ್ದು, ಕೃತಕ ಆಮ್ಲಜನಕದ ಕೊರತೆ ತಲೆದೋರಿದೆ.


ಐಸಿಯುದಲ್ಲಿ ದಾಖಲಾಗಿದ್ದವರ ಸಂಖ್ಯೆ ಮಾ.28ರಂದು 204 ಇದ್ದರೆ, ಭಾನುವಾರ (ಏ.4) 331ರಷ್ಟಿತ್ತು. ಸೋಮವಾರಕ್ಕೆ ಆಗಲೇ 345ಕ್ಕೆ ಏರಿದೆ.

ಬೆಂಗಳೂರು ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇ 100ರಷ್ಟು ಹೆಚ್ಚಾಗಿದೆ. ಅಂದರೆ, ಒಂದು ವಾರದಲ್ಲಿ 79ರಿಂದ 158ಕ್ಕೆ ಹೆಚ್ಚಾಗಿದೆ. 2020ರ ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ಸರಾಸರಿ 814 ಐಸಿಯು ಪ್ರಕರಣಗಳು ಇದ್ದವು. ದಿನಕ್ಕೆ 600 ಟನ್‌ನಷ್ಟು ಆಮ್ಲಜನಕ ಬೇಕಾಗುತ್ತಿತ್ತು. ಈಗಲೂ ಕೃತಕ ಆಮ್ಲಜನಿಕ ಸಿಲಿಂಡರ್‌ಗಳಿಗೆ ಬೇಡಿಕೆ ಹೆಚ್ಚುತ್ತಿದ್ದು, ಈ ಬಗ್ಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕಾದ ಅಗತ್ಯ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

## ನಗರದ ಕೋವಿಡ್ ಪ್ರಕರಣಗಳು

**4,50,759** ಒಟ್ಟು ಸೋಂಕಿತರು

**4,15,309** ಗುಣಮುಖರಾದವರು | **30,782** ಸಕ್ರಿಯ ಪ್ರಕರಣ | **4,667** ಸಾವು



ಐಸಿಯುನಲ್ಲಿ ಇರುವವರು; 164

**ಸೋಮವಾರದ ಏರಿಕೆ**

**3,728** ದೃಢಪಟ್ಟ ಪ್ರಕರಣ

**1,026** ಗುಣಮುಖ | **18** ಸಾವು

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಆಮ್ಲಜನಕ ವ್ಯವಸ್ಥೆ ಅಳವಡಿಸಿರುವ 135 ಹಾಸಿಗೆಗಳು ಕೋವಿಡ್ ರೋಗಿಗಳಿಗೆ ಮೀಸಲಾಗಿಟ್ಟಿದ್ದರೆ, 50 ಹಾಸಿಗೆಗಳನ್ನು ಇತರ ರೋಗಿಗಳಿಗೆ ಮೀಸಲಿರಿಸಲಾಗಿದೆ.

'ನಮ್ಮಲ್ಲಿ ಎಂಟು ಕಿಲೊಲೀಟರ್ ಆಮ್ಲಜನಕ ಸಂಗ್ರಹ ವ್ಯವಸ್ಥೆ ಇದೆ. ಈ ಮೊದಲು ಇಷ್ಟು ಆಮ್ಲಜನಕವನ್ನು ಮೂರರಿಂದ ಐದು ದಿನಗಳವರೆಗೆ ಪೂರೈಸುತ್ತಿದ್ದವು. ರೋಗಿಗಳ ಸಂಖ್ಯೆ ಹೆಚ್ಚಾದಂತೆ ಬಳಕೆ ಪ್ರಮಾಣ ಜಾಸ್ತಿ ಆಗಿದೆ. ಈಗ ಎರಡು ದಿನಗಳಿಗಷ್ಟೇ ಸಾಕಾಗುತ್ತದೆ. ಕೋವಿಡ್‌ಗೆ ಮೀಸಲಿಟ್ಟಿದ್ದ 130 ಹಾಸಿಗೆಗಳು ಭರ್ತಿಯಾಗಿವೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ.ಆರ್. ವೆಂಕಟೇಶಯ್ಯ ಹೇಳಿದರು.

ಆಮ್ಲಜನಕ ಸಿಲಿಂಡರ್ ಪೂರೈಕೆದಾರ, 'ಯುನಿಟಿ ಏರ್'ನ ಪವನ್ ಮೂರ್ತಿ, 'ಕಳೆದ ವರ್ಷ 1,500 ಸಿಲಿಂಡರ್ ಪೂರೈಸಿದ್ದೆವು. ಈ ವರ್ಷದ ಮಾರ್ಚ್‌ನಿಂದ ಈವರೆಗೆ 400 ಸಿಲಿಂಡರ್ ಪೂರೈಸಿದ್ದೇವೆ' ಎಂದು ಹೇಳಿದರು.

## 5 ತಿಂಗಳ ಬಳಿಕ 5 ಸಾವಿರ ಪ್ರಕರಣ !

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದ್ದು, ಸೋಮವಾರ ಒಂದೇ ದಿನ 5,279 ಹೊಸ ಪ್ರಕರಣಗಳು ವರದಿಯಾಗಿವೆ. ಐದು ತಿಂಗಳ ನಂತರ ಇದೇ ಮೊದಲ ಬಾರಿಗೆ ಹೊಸ ಪ್ರಕರಣಗಳ ಸಂಖ್ಯೆ ಐದು ಸಾವಿರ ದಾಟಿದೆ.

ಅಕ್ಟೋಬರ್‌ನಲ್ಲಿ ದಿನಕ್ಕೆ ಐದು ಸಾವಿರಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದವು. ನಂತರ ಈ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಒಂದು ಸಾವಿರ ಆಸು–ಪಾಸು ಇತ್ತು. ತಿಂಗಳಿಂದೀಚೆಗೆ 3,500ದಿಂದ 4000ದವರೆಗೆ ಹೊಸ ಪ್ರಕರಣಗಳು ಪತ್ತೆಯಾಗುತ್ತಿದ್ದವು.

ಈ ವರ್ಷದಲ್ಲಿ ಇದೇ ಮೊದಲ ಬಾರಿಗೆ ಗರಿಷ್ಠ ಸಾವಿನ ಸಂಖ್ಯೆ ದಾಖಲಾಗಿದೆ. 32 ಮಂದಿ ಮರಣ ಹೊಂದುವುದರೊಂದಿಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 12,657ಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆಯು ಎರಡೇ ತಿಂಗಳಲ್ಲಿ 6 ಪಟ್ಟು ಹೆಚ್ಚಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 42,483 ಮುಟ್ಟಿದೆ.


ರಾಜಧಾನಿಯಲ್ಲಿ 3,728 ಹೊಸ ಪ್ರಕರಣಗಳು ಪತ್ತೆಯಾಗಿದ್ದರೆ, 18 ಜನ ಮೃತಪಟ್ಟಿದ್ದಾರೆ. ಮೈಸೂರಿನಲ್ಲಿ 3, ಕಲಬುರ್ಗಿ 2, ಬಳ್ಳಾರಿ, ಬೀದರ್, ಹಾವೇರಿ, ಕೋಲಾರ, ಮಂಡ್ಯ, ಶಿವಮೊಗ್ಗ, ತುಮಕೂರು, ವಿಜಯಪುರ ಹಾಗೂ ಯಾದಗಿರಿಯಲ್ಲಿ ತಲಾ ಒಬ್ಬರು ಕೋವಿಡ್‌ನಿಂದ ಸಾವಿಗೀಡಾಗಿದ್ದಾರೆ.

**ಐಸಿಯು ಪ್ರಕರಣ ಸತತ ಏರಿಕೆ:** ಸದ್ಯ 345 ಮಂದಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಐಸಿಯುಗೆ ದಾಖಲಾಗುವವರ ಸಂಖ್ಯೆ ಒಂದು ವಾರದಿಂದ ಸತತ ಏರಿಕೆಯ ಹಾದಿಯಲ್ಲಿದೆ. ಮಾ.28ರಂದು 204 ಜನ ಇದ್ದರೆ, ಭಾನುವಾರ 331 ಇತ್ತು. ಐಸಿಯುದಲ್ಲಿ ಹಾಸಿಗೆ ಕೊರತೆ ಒಂದೆಡೆಯಾದರೆ, ಕೃತಕ ಆಮ್ಲಜನಕದ ವ್ಯವಸ್ಥೆ ಹೊಂದಿರುವ ಹಾಸಿಗೆಗಳ ಕೊರತೆಯೂ ತಲೆದೋರುತ್ತಿದೆ.

**97 ಸಾವಿರ ಪರೀಕ್ಷೆ:** ರಾಜ್ಯದಲ್ಲಿ ಸೋಮವಾರ 4,229 ಆ್ಯಂಟಿಜೆನ್ ಹಾಗೂ 93,600 ಆರ್‌ಟಿ ಪಿಸಿಆರ್ ಸೇರಿದಂತೆ 97,829 ಮಂದಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಈವರೆಗೆ 2.19 ಕೋಟಿ ಜನ ಪರೀಕ್ಷೆಗೆ ಒಳಗಾಗಿದ್ದಾರೆ.

**ಆತಂಕಪಡುವ ಅಗತ್ಯವಿಲ್ಲ:** 'ಕೃತಕ ಆಮ್ಲಜನಕದ ಸಹಾಯ ಬೇಕಾಗಿರುವ ರೋಗಿಗಳ ಸಂಖ್ಯೆ ತೀರಾ ಕಡಿಮೆ ಇದೆ. ಒಂದು ವೇಳೆ ಈ ಪ್ರಕರಣಗಳ ಸಂಖ್ಯೆ ಜಾಸ್ತಿಯಾದರೂ ಎಲ್ಲ ವ್ಯವಸ್ಥೆ ಮಾಡಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

'ನಗರದಲ್ಲಿ ಸದ್ಯ ಕೋವಿಡ್ ರೋಗಿಗಳಿಗೆ ಮೀಸಲಿಟ್ಟಿರುವ 1,200 ಹಾಸಿಗೆಗಳ ಪೈಕಿ ಶೇ 70ರಷ್ಟು ಹಾಸಿಗೆಗಳಿಗೆ ಕೃತಕ ಆಮ್ಲಜನಕ ವ್ಯವಸ್ಥೆ ಅಳವಡಿಸಲಾಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.




## ಸಂಕ್ಷಿಪ್ತ ಸುದ್ದಿ

### ತಜಿಕಿಸ್ತಾನದಲ್ಲಿ ಭೂಕಂಪನ: ಭಾರತದ ವಿವಿಧೆಡೆ ಅನುಭವ

**ನವದೆಹಲಿ (ಪಿಟಿಐ):** ತಜಿಕಿಸ್ತಾನದಲ್ಲಿ ಸೋಮವಾರ ರಾತ್ರಿ ಅಧಿಕ ತೀವ್ರತೆಯ ಭೂಕಂಪನ ಆಗಿದ್ದು, ಅದರ ಅನುಭವ ದೆಹಲಿ–ಎನ್‌ಸಿಆರ್ ವಲಯ ಒಳಗೊಂಡು ಉತ್ತರ ಭಾರತದ ಹಲವೆಡೆ ವ್ಯಕ್ತವಾಗಿದೆ.

ಭೂವಿಜ್ಞಾನ ಸಚಿವಾಲಯದಡಿ ಬರುವ ಭೂಕಂಪಶಾಸ್ತ್ರ ಇಲಾಖೆ ಮೊದಲು, ಭೂಕಂಪನದ ಕೇಂದ್ರ ಸ್ಥಾನ ಅಮೃತಸರ. 19 ಕಿ.ಮೀ ಆಳದಲ್ಲಿ ವ್ಯಕ್ತವಾಗಿದೆ ಎಂದು ತಿಳಿಸಿತ್ತು. ನಂತರ ಪರಿಷ್ಕೃತ ಹೇಳಿಕೆ ನೀಡಿದ್ದು, ಕೇಂದ್ರ ಸ್ಥಾನ ತಜಿಕಿಸ್ತಾನದಲ್ಲಿ ಕಂಡುಬಂದಿದೆ. ಸಾಫ್ಟ್‌ವೇರ್ ಲೋಪದಿಂದಾಗಿ ತಪ್ಪಾಗಿದೆ ಎಂದು ಸ್ಪಷ್ಟನೆ ನೀಡಿತು.

ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ (ಎನ್‌ಸಿಎಸ್) ಅನುಸಾರ, ಭೂಕಂಪನದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 6.3ರಷ್ಟು ದಾಖಲಾಗಿತ್ತು. ಷಿಕಾಗೊ ಯೂನಿವರ್ಸಿಟಿಯ ವಿದ್ಯಾರ್ಥಿಗಳ ಜೊತೆ ವರ್ಚುಯಲ್ ಸ್ವರೂಪದಲ್ಲಿ ಸಂವಾದ ನಡೆಸುತ್ತಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಅವರು, ಇಡೀ ಕೊಠಡಿ ಕಂಪಿಸಿದ ಅನುಭವ ವಾಯಿತು ಎಂದು ಪ್ರತಿಕ್ರಿಯಿಸಿದರು.

### 'ಖರ್ಗೆ ಸಾಧನೆ ಅರಿತು ಮಾತನಾಡಿ'



ಸಲೀಂ ಅಹ್ಮದ್

**ಬೆಂಗಳೂರು:** ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು 'ವಿಷಕಾರಿ' ಎಂದು ಟೀಕಿಸಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಹೇಳಿಕೆ ಖಂಡಿಸಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, 'ಖರ್ಗೆ ಕುರಿತು ಮಾತನಾಡುವ ಮೊದಲು ಅವರ ಸಾಧನೆಗಳನ್ನು ಅರಿಯಿರಿ' ಎಂದು ತಿರುಗೇಟು ನೀಡಿದ್ದಾರೆ.

'ಒಂಬತ್ತು ಬಾರಿ ಶಾಸಕರಾಗಿ, ಎರಡು ಬಾರಿ ಸಂಸದರಾಗಿ ಆಯ್ಕೆಯಾದ ಖರ್ಗೆ ಅವರು ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಎರಡೂ ಕಡೆಗಳಲ್ಲಿ ಸಚಿವರಾಗಿ ಕೆಲಸ ಮಾಡಿರುವ ಅವರು, ರಾಷ್ಟ್ರ, ರಾಜ್ಯ ಮತ್ತು ಕಲ್ಯಾಣ ಕರ್ನಾಟಕಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಖರ್ಗೆ ವಿಷಕಾರಿ ಆದರೆ, ಬಿಜೆಪಿಯವರೇನು ಮಕರಂದ ಸೂಸುವವರೇ' ಎಂದು ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

# ಗೃಹರಕ್ಷಕ ದಳದ 2 ಸಾವಿರ ಸಿಬ್ಬಂದಿ

### ಕೋವಿಡ್ ನಿಯಂತ್ರಣ ನಿಯಮ ಪಾಲನೆ ಮೇಲೆ ನಿಗಾ: ಆಯುಕ್ತರ ಮಾಹಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋವಿಡ್ ನಿಯಂತ್ರಣ ನಿಯಮಗಳನ್ನು ಪಾಲಿಸದವರಿಗೆ ನಗರದಲ್ಲಿ ಇದುವರೆಗೆ ಮಾರ್ಷಲ್‌ಗಳು ಹಾಗೂ ಪೊಲೀಸ್ ಸಿಬ್ಬಂದಿ ದಂಡ ವಿಧಿಸುತ್ತಿದ್ದರು. ಇನ್ನು ಇವರ ಜೊತೆಗೆ 2 ಸಾವಿರ ಗೃಹರಕ್ಷಕ ಸಿಬ್ಬಂದಿಯನ್ನೂ ಈ ಕಾರ್ಯಕ್ಕೆ ನಿಯೋಜನೆ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ನಗರದಲ್ಲಿ ಕೊರೊನಾ ಸೋಂಕು ದಿನೇ ದಿನೇ ಉಲ್ಬಣಗೊಳ್ಳುತ್ತಿದ್ದು, ಅದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ಹರಡದಂತೆ ತಡೆಯಲು ಎಲ್ಲ ನಾಗರಿಕರು ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಬೇಕು. ಕೋವಿಡ್ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಕೋರಿದರು.

'ನಗರದಲ್ಲಿ ಕೋವಿಡ್ ಲಸಿಕೆ ಹಾಕುವ ಕಾರ್ಯಕ್ರಮವನ್ನು ಸಾಮೂಹಿಕವಾಗಿ ಆಯೋಜಿಸಲು ಖಾಸಗಿ ಆಸ್ಪತ್ರೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಕೈಗಾರಿಕೆಗಳ ಜೊತೆ ಈಗಾಗಲೇ ಚರ್ಚೆ ಮಾಡಲಾಗಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಸ್ಥಳಕ್ಕೇ ತೆರಳಿ ಲಸಿಕೆ ನೀಡಲು ಮತ್ತು ಲಸಿಕಾ ಕೇಂದ್ರಗಳನ್ನು ಹೆಚ್ಚಳ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

'ಕೋವಿಡ್ ಸೋಂಕಿತರು ಮನೆಯಲ್ಲಿ ಪ್ರತ್ಯೇಕವಾಗಿ ಆರೈಕೆಗೆ ಒಳಗಾಗಲು ವ್ಯವಸ್ಥೆ ಇಲ್ಲದಿದ್ದರೆ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯಬಹುದು. ಎಚ್‌ಎಎಲ್ ಹಾಗೂ ಹಜ್ ಭವನಗಳಲ್ಲಿ ಈಗಾಗಲೇ ಕೋವಿಡ್ ಆರೈಕೆ ಕೇಂದ್ರಗಳನ್ನು ಮತ್ತೆ ಪ್ರಾರಂಭಿಸಲಾಗಿದೆ. ಪ್ರತೀ ವಲಯಗಳಲ್ಲಿಯೂ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು' ಎಂದರು.

### 'ಅಂತರರಾಜ್ಯ ಗಡಿಗಳಲ್ಲಿ ಕಟ್ಟೆಚ್ಚರ'

'ಕೋವಿಡ್ ಸೋಂಕಿತರು ನಗರವನ್ನು ಪ್ರವೇಶಿಸದಂತೆ ತಡೆಯಲು ಅಂತರರಾಜ್ಯ ಗಡಿಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ' ಎಂದು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

'ಹೊರರಾಜ್ಯಗಳಿಂದ ನಗರಕ್ಕೆ ಬರುವವರು ಕೋವಿಡ್ ಹೊಂದಿಲ್ಲ ಎಂಬ ಪ್ರಮಾಣಪತ್ರ ತರುವುದು ಕಡ್ಡಾಯ. ಅತ್ತಿಬೆಲೆ ಗಡಿ ತಪಾಸಣಾ ಠಾಣೆಯಲ್ಲಿ, ನಗರಕ್ಕೆ ಬರುವ ಎಲ್ಲ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಇದಕ್ಕಾಗಿ ಹೆಚ್ಚುವರಿ ಸಿಬ್ಬಂದಿಯನ್ನೂ ನಿಯೋಜಿಸಿದ್ದೇವೆ' ಎಂದು ಅವರು ತಿಳಿಸಿದರು.

'ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಬಿರುಸು ಪಡೆದಿದೆ. ಹಾಗಾಗಿ ಇಲ್ಲಿಂದ ಅಲ್ಲಿಗೆ ಹೋಗಿ ಬರುವವರ ಸಂಖ್ಯೆಯೂ ಹೆಚ್ಚಳವಾಗಿದೆ. ಅಲ್ಲಿ ಸೋಂಕಿನ ಪ್ರಮಾಣವೂ ಹೆಚ್ಚು ಇದೆ. ಅಲ್ಲಿಂದ ಇಲ್ಲಿಗೆ ಸೋಂಕು ಹರಡುವುನ್ನು ತಡೆಯಲು ಅಂತರ ರಾಜ್ಯ ಗಡಿಗಳಲ್ಲಿ ಕಟ್ಟೆಚ್ಚರ ವಹಿಸುವುದು ಅನಿವಾರ್ಯ' ಎಂದರು. 'ನಮ್ಮ ರಾಜ್ಯದಲ್ಲಿ ಜಿಲ್ಲೆಗಳ ನಡುವೆ ಪ್ರಯಾಣಿಸುವವರು ಕೋವಿಡ್ ಹೊಂದಿರದ ಬಗ್ಗೆ ಪ್ರಮಾಣಪತ್ರ ತೋರಿಸಬೇಕಾದ ಅಗತ್ಯ ಇಲ್ಲ' ಎಂದು ಸ್ಪಷ್ಟಪಡಿಸಿದರು.

### 'ಖಾಸಗಿ ಆಸ್ಪತ್ರೆಗಳ ಶೇ 20 ರಷ್ಟು ಹಾಸಿಗೆ ಕೋವಿಡ್‌ಗೆ'



ಗೌರವ್ ಗುಪ್ತ

'ಖಾಸಗಿ ಆಸ್ಪತ್ರೆಗಳಲ್ಲಿ ಶೇ 20 ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಡಲು ಸೂಚಿಸಲಾಗಿದೆ. ಕೋವಿಡ್ ರೋಗಿಗಳ ಆರೈಕೆಗೆ ಮೀಸಲಿಡಬೇಕಾದ ಹಾಸಿಗೆಗಳ ಸಂಖ್ಯೆಯನ್ನು ಹಂತ ಹಂತವಾಗಿ ಹೆಚ್ಚಳ ಮಾಡಲು ಕ್ರಮ ವಹಿಸಲಾಗುವುದು' ಎಂದು ಗೌರವ್ ಗುಪ್ತ ತಿಳಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಶೇ 10ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಕಾಯ್ದಿರಿಸುವಂತೆ ಬಿಬಿಎಂಪಿ ಈ ಹಿಂದೆ ಸೂಚನೆ ನೀಡಿತ್ತು.



ಸಿದ್ದಲಿಂಗಯ್ಯ ಅವರು ಬಟಾಬಯಲು ಕವನ ಸಂಕಲನ ಬಿಡುಗಡೆ ಮಾಡಿದರು. (ಎಡದಿಂದ) ಲೇಖಕ ಮುದಿಗೆರೆ ರಮೇಶ್ ಕುಮಾರ್, ಸಾಹಿತಿ ಜಾಣಗೆರೆ ವೆಂಕಟರಾಮಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಮತ್ತು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಇದ್ದಾರೆ – ಪ್ರಜಾವಾಣಿ ಚಿತ್ರ

## 'ಜಾತಿ ವ್ಯವಸ್ಥೆ ತೊಲಗಿಸಲು ಯುವಕರು ಶ್ರಮಿಸಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮಹಾತ್ಮ ಗಾಂಧಿ, ಬಿ.ಆರ್.ಅಂಬೇಡ್ಕರ್, ಬಸವೇಶ್ವರ, ರಾಮಮನೋಹರ ಲೋಹಿಯಾ, ಬುದ್ಧ ಹೀಗೆ ಅನೇಕರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದರು. ಈ ಪಿಡುಗನ್ನು ಬುಡಸಹಿತ ಕಿತ್ತೊಗೆಯಲು ಪ್ರಯತ್ನಿಸಿದರು. ಈ ಮಹಾನ್ ಚೇತನರ ಹಾದಿಯಲ್ಲೇ ಇಂದಿನ ಯುವಕರೂ ಸಾಗಬೇಕು' ಎಂದು ಕವಿ ಸಿದ್ದಲಿಂಗಯ್ಯ ಭಾನುವಾರ ಹೇಳಿದರು.

ಕರ್ನಾಟಕ ಅಂಧರ ವಿಮೋಚನಾ ವೇದಿಕೆ, ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಕಲ್ಯಾಣ ಸಂಸ್ಥೆಯ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುದಿಗೆರೆ ರಮೇಶ್‌ಕುಮಾರ್ ಅವರ 'ಬಟಾಬಯಲು' ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, 'ರಮೇಶ್ ಅವರು ಬಟಾಬಯಲು ಕವನ ಸಂಕಲನದ ಮೂಲಕ ಹೊಸ ಹೆಜ್ಜೆಯೊಂದನ್ನು ಇಟ್ಟಿದ್ದಾರೆ. ಅವರು ಅನೇಕ ನುಡಿಗಟ್ಟುಗಳ ಮೂಲಕ ತಮ್ಮ ಬದುಕಿನ ಸಾರ್ಥಕತೆಯನ್ನು ಈ ಪುಸ್ತಕದಲ್ಲಿ ತೆರೆದಿಟ್ಟಿದ್ದಾರೆ' ಎಂದರು.

ಕೃತಿಯ ಕುರಿತು ಮಾತನಾಡಿದ ರಾಜ್ಯಸಭಾಸದಸ್ಯಎಲ್.ಹನುಮಂತಯ್ಯ 'ಹುಟ್ಟಿನಿಂದಲೇ ಅಂಧರಾಗಿರುವ ರಮೇಶ್ ಅವರು ಅಂದವಾದ ಕವಿತೆಗಳನ್ನು ಬರೆದಿದ್ದಾರೆ' ಎಂದರು.

ಕಾರ್ಯಕ್ರಮದಲ್ಲಿ ಗಾಯಕ ಜನಾರ್ದನ್ (ಜನ್ನಿ) ಅವರಿಗೆ ಗಾನ ಯೋಗಿ ಪುಟ್ಟರಾಜ ಗವಾಯಿ ಸಂಗೀತ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಅಂಧರ ವಿಮೋಚನಾ ವೇದಿಕೆಯ ಅಧ್ಯಕ್ಷ ಲಕ್ಷ್ಮೀನಾರಾಯಣ ನಾಗವಾರ ಇದ್ದರು.

ಮುಖ್ಯಮಂತ್ರಿಗೂ 'ಪರಮಾಧಿಕಾರ' ಇಲ್ಲ– ಶಾಸಕ ಕೆ.ಆರ್. ರಮೇಶ್‌ಕುಮಾರ್, ಮಾಜಿ ಶಾಸಕ ವೈ.ಎಸ್.ವಿ. ದತ್ತ ಪ್ರತಿಪಾದನೆ

# ಈಶ್ವರಪ್ಪ ಸಚಿವ ಪದವಿ ತ್ಯಜಿಸಿದ್ದರೆ ನೈತಿಕ ಬಲ ಹೆಚ್ಚುತ್ತಿತ್ತು

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಸಂವಾದ

**ಬೆಂಗಳೂರು:** 'ಸಂವಿಧಾನದ ಪ್ರಕಾರ, ಮುಖ್ಯಮಂತ್ರಿಯೂ ಸೇರಿದಂತೆ ಯಾರಿಗೂ ಪರಮಾಧಿಕಾರ ಇಲ್ಲ. ಸಂಪುಟ ಸದಸ್ಯರಲ್ಲಿ ಸಮಾನರಲ್ಲಿ ಮೊದಲಿಗನಾಗಿರುವ ಮುಖ್ಯಮಂತ್ರಿಗೆ ಹೆಚ್ಚು ಅಧಿಕಾರ ಇರುವುದು ನಿಜ. ಆದರೆ, ಅದನ್ನು ಪರಮಾಧಿಕಾರ ಎಂಬರ್ಥದಲ್ಲಿ ಬಳಕೆ ಮಾಡಲಾಗದು...'

–ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಚಿವ ಕೆ.ಎಸ್. ಈಶ್ವರಪ್ಪ ಮಧ್ಯದ ಸಂಘರ್ಷದ ಕುರಿತ ಚರ್ಚೆಯ ಮುನ್ನೆಲೆಯಲ್ಲಿರುವ 'ಮುಖ್ಯಮಂತ್ರಿಗೆ ಪರಮಾಧಿಕಾರ ಇದೆಯೆ?' ಎಂಬ ಪ್ರಶ್ನೆ ಕುರಿತು ವಿಧಾನ ಸಭೆಯ ಮಾಜಿ ಸ್ಪೀಕರ್, ಶಾಸಕ ಕೆ.ಆರ್. ರಮೇಶ್ ಕುಮಾರ್ ಹಾಗೂ ಮಾಜಿ ಶಾಸಕ ವೈ.ಎಸ್.ವಿ. ದತ್ತ ಪ್ರತಿಪಾದನೆ.

'ಈಗ ಸೃಷ್ಟಿಯಾಗಿರುವುದು ಸಂವಿಧಾನಾತ್ಮಕ ಬಿಕ್ಕಟ್ಟು ಅಲ್ಲ, ಆಡಳಿತಾತ್ಮಕ ಬಿಕ್ಕಟ್ಟು' ಎಂಬ ಪ್ರತಿಪಾದನೆಯನ್ನು ಒಪ್ಪಿಕೊಂಡ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್, 'ಈ ಪ್ರಕರಣದಿಂದ ಮುಖ್ಯಮಂತ್ರಿ ದುರ್ಬಲರಾಗಿದ್ದಾರೆ ಎಂಬ ವಾದದಲ್ಲಿ ಹುರುಳಿಲ್ಲ. ಪಕ್ಷದ ವರಿಷ್ಠರು ಆಂತರಿಕವಾಗಿಯೇ ಬಿಕ್ಕಟ್ಟು ಶಮನಗೊಳಿಸುವ ಕೆಲಸ ಮಾಡುತ್ತಿದ್ದಾರೆ' ಎಂದರು.

'ಈಶ್ವರಪ್ಪ ಅವರು ಸಂಪುಟದ ಸದಸ್ಯರಾಗಿದ್ದುಕೊಂಡೇ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವುದು ಸಮಂಜಸವಲ್ಲ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋರಾಟಕ್ಕೆ ಇಳಿದಿದ್ದರೆ ಅವರ ಮಾತುಗಳಿಗೆ ಹೆಚ್ಚಿನ ನೈತಿಕ ಬಲ ಇರುತ್ತಿತ್ತು' ಎಂದು ಮೂವರೂ ಹೇಳಿದರು.


## ಮಾನಸಿಕ ಅಂತರವಿದ್ದಾಗ ದೋಷ ಕಂಡುಕೊಳ್ಳುವ ಪ್ರಯತ್ನ

ವ್ಯಕ್ತಿಗತವಾದ ಮಾನಸಿಕ ಅಂತರ ಇದ್ದಾಗ ಪ್ರತಿಯೊಬ್ಬರಲ್ಲೂ ದೋಷ ಕಂಡುಕೊಳ್ಳುವ ಪ್ರಯತ್ನ ಆಗುತ್ತದೆ. ಈಶ್ವರಪ್ಪನವರ ತುಮುಲ ಈ ರೀತಿ ಪ್ರಕಟವಾಗಬಹುದು.

'ಪರಮಾಧಿಕಾರ' ಎಂಬ ಪದ ಸಂವಿಧಾನದಲ್ಲಿ ಇಲ್ಲ. ಮಂತ್ರಿ ಸ್ಥಾನ ಮುಖ್ಯಮಂತ್ರಿಯ ಇಚ್ಛೆಯ ಅನುಸಾರ ಇರುತ್ತದೆ. ಸಾರ್ವಜನಿಕ ಹಿತಾಸಕ್ತಿ, ಪಕ್ಷದ ನೀತಿ ಎಲ್ಲವನ್ನೂ ಸಮನ್ವಯ ಮಾಡಬೇಕಾದ ಜವಾಬ್ದಾರಿ ಮುಖ್ಯಮಂತ್ರಿ ಮೇಲಿರುತ್ತದೆ. ಅವುಗಳಿಗೆ ಹೊಂದಾಣಿಕೆ ಸಾಧ್ಯವಾಗುವುದಿಲ್ಲ ಎಂಬುದು ಮನದಟ್ಟಾದರೆ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬಹುದು. ಮುಖ್ಯಮಂತ್ರಿಯ ವಿರುದ್ಧ ಮಂತ್ರಿ ದೂರು ನೀಡಲು ಅವಕಾಶವೇ ಇಲ್ಲ.

ಮುಖ್ಯಮಂತ್ರಿಗೆ ಹೆಚ್ಚು ಅಧಿಕಾರ ಇದೆ ಎಂಬುದನ್ನು ಅಲ್ಲಗಳೆಯಲಾಗದು. ರಾಜ್ಯಪಾಲರು ಮತ್ತು ಸಂಪುಟದ ನಡುವಿನ ಕೊಂಡಿ ಮುಖ್ಯಮಂತ್ರಿ. ನೇರವಾಗಿ ಸಚಿವರು ರಾಜ್ಯಪಾಲರ ಜತೆ ವ್ಯವಹರಿಸಲು ಸಾಧ್ಯವಿಲ್ಲ. ಈಶ್ವರಪ್ಪ ಅವರು ನಿಯಮಗಳನ್ನು ಪ್ರಸ್ತಾಪಿಸಿದಾಗ, ಅದೇ ನಿಯಮಗಳನ್ನು ಅಧ್ಯಯನ ಮಾಡಬೇಕಿತ್ತು.

ಇದು ಕೇವಲ ₹ 65 ಕೋಟಿ ಅನುದಾನ ಬಿಡುಗಡೆಯ ಸಣ್ಣ ವಿಷಯ. ಮುಖ್ಯಮಂತ್ರಿ ದುರ್ಬಲರಲ್ಲ. ಈಶ್ವರಪ್ಪ ಅವರ ಕ್ರಮ ಸಮರ್ಥನೀಯ ಅಲ್ಲ. ಈಶ್ವರಪ್ಪ ಮನಸ್ಸಿನಲ್ಲಿರುವ ಸಣ್ಣ ವಿಚಾರದಿಂದ ದೊಡ್ಡ ಕಂದಕ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಕುಟುಂಬದ ಹಸ್ತಕ್ಷೇಪದ ವಿಚಾರ ನನ್ನ ಅನುಭವಕ್ಕೆ ಬಂದಿಲ್ಲ. ಆ ರೀತಿಯ ಅನುಭವ ಆದವರು ಆರೋಪ ಮಾಡಿರಬಹುದು. ದುರ್ಬಲರು ಎಂದು ಯಾರೂ ಇರುವುದಿಲ್ಲ.



ಎಲ್ಲ ಪಕ್ಷಗಳ ಸರ್ಕಾರಗಳು ಇದ್ದಾಗಲೂ ವಿರೋಧ ಪಕ್ಷದ ಶಾಸಕರಿಗೆ ಅನುದಾನ ಕೊಡುತ್ತಾರೆ. ಕೆಲಸ, ಶಾಸಕರ ಬದ್ಧತೆ ಮತ್ತು ಅನುದಾನದ ಬಳಕೆಯ ಮೇಲೆ ಎಲ್ಲವೂ ನಿರ್ಧಾರವಾಗುತ್ತದೆ. ಸೈದ್ಧಾಂತಿಕ ನೆಲೆಗಟ್ಟಿನ ಹೊರಗೆ ರಾಜಕೀಯ ನಡೆಯುತ್ತಿರುವುದರಿಂದ ಈ ಸ್ಥಿತಿ ಎದುರಾಗಿದೆ.


**ಆಯನೂರು ಮಂಜುನಾಥ್,** ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ

## ಸಿ.ಎಂ ವಿರುದ್ಧ ನೇರ ದೂರು ನೀಡುವುದು ಸರಿಯಲ್ಲ

ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಎಂಬುದು ಇಲ್ಲ. ಜವಾಬ್ದಾರಿಗಳು ಮಾತ್ರ ಇವೆ. ಗ್ರಾಮ ಪಂಚಾಯಿತಿ ಸದಸ್ಯನಿಂದ ಮುಖ್ಯಮಂತ್ರಿಯವರೆಗೆ ಯಾರಿಗೂ ಅಧಿಕಾರದ ವ್ಯಾಪ್ತಿ ನಿಗದಿಯಾಗಿಲ್ಲ. 'ಮುಖ್ಯಮಂತ್ರಿ' ಎಂದರೆ ಸಂಪುಟದ ಸಮಾನರಲ್ಲಿ ಮೊದಲಿಗರು. ಇಲಾಖೆಗೆ ಸಂಬಂಧಿಸಿದ ಹಣ ಬಿಡುಗಡೆಯಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಈಶ್ವರಪ್ಪ ಆಪಾದಿಸಿದ್ದಾರೆ. ಈ ಅಧಿಕಾರ ಖಂಡಿತವಾಗಿಯೂ ಮುಖ್ಯಮಂತ್ರಿಗೆ ಇದೆ. ಆದರೆ, ಅದನ್ನು ಪರಮಾಧಿಕಾರ ಎನ್ನಲಾಗದು.

ಮುಖ್ಯಮಂತ್ರಿಯ ಶಿಫಾರಸಿನಂತೆ ಸಂಪುಟ ಸೇರ್ಪಡೆ, ಖಾತೆ ಹಂಚಿಕೆ ನಡೆಯುತ್ತದೆ. ಈ ರೀತಿ ಮುಖ್ಯಮಂತ್ರಿ ವಿರುದ್ಧ ಸಚಿವರು ನೇರವಾಗಿ ದೂರು ನೀಡುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸರಿಯಾದ ನಡವಳಿಕೆ ಅಲ್ಲ. ರಾಮಕೃಷ್ಣ ಹೆಗಡೆ, ಎಸ್.ನಿಜಲಿಂಗಪ್ಪ, ಡಿ. ದೇವರಾಜ ಅರಸು, ವೀರೇಂದ್ರ ಪಾಟೀಲ, ಎಸ್.ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ ಎಲ್ಲರೂ ಈ ಸ್ಥಿತಿ ಎದುರಿಸಿದ್ದಾರೆ. ಆದರೆ, ನೇರವಾಗಿ ದೂರು ಕೊಟ್ಟ ಉದಾಹರಣೆ ಇಲ್ಲ.

ಈಗ ಮುಖ್ಯಮಂತ್ರಿ ಮತ್ತು ಸಚಿವರ ನಡುವೆ ಇರುವುದು ಸಂಪುಟ ಸಭೆಗೆ ಸಂಬಂಧಿಸಿದ ವಿಚಾರ ಅಲ್ಲ. ಇದು ಅನುದಾನ ಬಿಡುಗಡೆಗೆ ಮಾತ್ರ ಸಂಬಂಧಿಸಿದ ವಿಚಾರ. ಇದನ್ನು ಸಂವಿಧಾನಾತ್ಮಕ ಬಿಕ್ಕಟ್ಟು ಎನ್ನುವುದೇ ತಪ್ಪು. ಇದು ಒಂದು ಆಡಳಿತಾತ್ಮಕ ಬಿಕ್ಕಟ್ಟು ಅಷ್ಟೆ. ಇದು ಈಶ್ವರಪ್ಪ ಅವರದ್ದೇ ನಿರ್ಧಾರವಾ? ಬಾಹ್ಯ ಬೆಂಬಲವೂ ಇರುಬಹುದಾ? ಪಕ್ಷದ ಹೈಕಮಾಂಡ್ ಏಕೆ ಮಾತನಾಡುತ್ತಿಲ್ಲ ಎಂಬ ಪ್ರಶ್ನೆಗಳೂ ಇವೆ. ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ದುರ್ಬಲಗೊಂಡಾಗ ಇಂತಹ ಲಕ್ಷಣಗಳು ಗೋಚರಿಸುತ್ತವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಯಡಿಯೂರಪ್ಪ ಮತ್ತು ಈಶ್ವರಪ್ಪ ನಡುವೆಯೇ ಅಂತ್ಯಗೊಳ್ಳಬಹುದಾದ ವಿವಾದವೂ ಹೌದು.



ಪರಿಸ್ಥಿತಿಯ ಇಕ್ಕಟ್ಟಿನ ಕುರಿತು ಮುಖ್ಯಮಂತ್ರಿ ಮನವರಿಕೆ ಮಾಡಿದ್ದರೆ, ಸಚಿವರೂ ತಮ್ಮ ಆಕ್ಷೇಪವನ್ನು ನೇರವಾಗಿ ದಾಖಲಿಸಿದ್ದರೆ ಮುಗಿಯುತ್ತಿತ್ತು. ಸಾರ್ವಜನಿಕರ ತೆರಿಗೆಯ ಹಣವನ್ನು ಬಳಸುವಾಗ ಎಚ್ಚರ ತಪ್ಪಿದರೂ ಇಂತಹ ಘಟನೆಗಳು ನಡೆಯುತ್ತವೆ.

**ಕೆ.ಆರ್. ರಮೇಶ್ ಕುಮಾರ್,** ಕಾಂಗ್ರೆಸ್ ಶಾಸಕ

## ಹೇಗೆ ಕೆಲಸ ಮಾಡುತ್ತಾರೆಂಬ ಮಾನದಂಡದಿಂದ ನಿರ್ಧಾರ

ಸಚಿವರನ್ನು ನೇಮಕ ಮಾಡಿದವರು ಮುಖ್ಯಮಂತ್ರಿ. ಕಿತ್ತು ಹಾಕುವ ಅಧಿಕಾರವೂ ಇರುತ್ತದೆ. ಮುಖ್ಯಮಂತ್ರಿಯಾಗಲಿ, ಮಂತ್ರಿಯಾಗಲಿ ಅವರು ಹೇಗೆ ಕೆಲಸ ಮಾಡುತ್ತಾರೆ ಎಂಬುದರ ಮೇಲೆ ಮಾನದಂಡ ನಿರ್ಧಾರವಾಗುತ್ತದೆ.

ಸಂಪುಟಕ್ಕೆ ಸಾಮೂಹಿಕ ಹೊಣೆಗಾರಿಕೆ ಇರುತ್ತದೆ. ಅದನ್ನು ಹೊರತುಪಡಿಸಿ ಮಂತ್ರಿಯೊಬ್ಬರು ಹೋಗಿ ದೂರು ಕೊಟ್ಟಿದ್ದಾರೆ ಎಂದರೆ ಸಾಮೂಹಿಕ ಹೊಣೆಗಾರಿಕೆಗೆ ಬದ್ಧರಾಗಿಲ್ಲ ಎಂದೇ ಅರ್ಥ. ಒಂದೋ ರಾಜೀನಾಮೆ ನೀಡಬೇಕು ಅಥವಾ ಮುಖ್ಯಮಂತ್ರಿಯೇ ಕಿತ್ತು ಹಾಕಬೇಕು.

ಹಿಂದೆ ಶಾಸಕಾಂಗ ಪಕ್ಷದ ಸಭೆಗಳ ಕುರಿತು ಮುಖ್ಯಮಂತ್ರಿಗೂ ಭಯ ಇರುತ್ತಿತ್ತು. ಈಗ ಶಾಸಕಾಂಗ ಪಕ್ಷದ ಸಭೆಗಳಿಗೆ ಶಾಸಕರೇ ಹೋಗುವುದಿಲ್ಲ. ಬಹಿರಂಗವಾಗಿ ಮಾತನಾಡುವುದು, ದೂರು ಕೊಡುವುದೇ ಸರಿ ಎಂದುಕೊಂಡಿದ್ದಾರೆ. ಶಾಸಕರು, ಸಚಿವರ ನಡವಳಿಕೆಗಳ ಕುರಿತು ಲಿಖಿತ ನಿಯಮಗಳಿಲ್ಲ. ಸಂಪ್ರದಾಯ ಆಧರಿಸಿ ನಡೆಯುತ್ತೇವೆ. ಈಶ್ವರಪ್ಪ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

ಅನುದಾನ ಹಂಚಿಕೆ, ಆಡಳಿತದಲ್ಲಿ ಹಸ್ತಕ್ಷೇಪ ಸೇರಿದಂತೆ ಎಲ್ಲವನ್ನೂ ಸುಲಭವಾಗಿ ಬಗೆಹರಿಸಬಹುದಿತ್ತು. ಆದರೆ, ಯಡಿಯೂರಪ್ಪ ಮತ್ತು ಈಶ್ವರಪ್ಪ ನಡುವಿನ ಸಂಘರ್ಷಕ್ಕೆ ದೀರ್ಘ ಇತಿಹಾಸವಿದೆ. ಈ ಕಾರಣಕ್ಕಾಗಿಯೇ ಯಡಿಯೂರಪ್ಪ ಪಕ್ಷ ತ್ಯಜಿಸಿ ಹೋದದ್ದೂ ಇದೆ. ಎಲ್ಲವೂ ಸರಿ ಇಲ್ಲ ಎಂಬ ಸ್ಥಿತಿ ಇದೆ.

ರಾಷ್ಟ್ರೀಯ ಪಕ್ಷಗಳಲ್ಲಿ ಹೈಕಮಾಂಡ್ ಪ್ರಬಲವಾದಾಗ ಮುಖ್ಯಮಂತ್ರಿ ದುರ್ಬಲ ಆಗುತ್ತಾರೆ. ಹೈಕಮಾಂಡ್ ಪ್ರಬಲವಾದರೆ ಮುಖ್ಯಮಂತ್ರಿ ದುರ್ಬಲ ಆಗುತ್ತಾರೆ. ಅಧಿಕಾರಕ್ಕಾಗಿ ಎಲ್ಲರನ್ನೂ ಪಕ್ಷಕ್ಕೆ ಸೇರಿಸಿಕೊಂಡಾಗ ಇಂತಹ ಸ್ಥಿತಿ ಎದುರಾ ಗುತ್ತದೆ.



**ವೈ.ಎಸ್.ವಿ. ದತ್ತ,** ಜೆಡಿಎಸ್ ಮುಖಂಡ

## 'ಎಸ್‌ಐಟಿ ನೋಟಿಸ್ ಬಂದಿಲ್ಲ'

**ಚಿತ್ರದುರ್ಗ:** ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಈವರೆಗೆ ಯಾವುದೇ ನೋಟಿಸ್ ನೀಡಿಲ್ಲ ಎಂದು ಮಾಜಿ ಸಚಿವ ಡಿ.ಸುಧಾಕರ್ ಅವರು ತಿಳಿಸಿದರು.

## ನ್ಯಾಯಾಧೀಶರ ಎದುರು ಸಂತ್ರಸ್ತೆ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆಯಾಗಿರುವ ಯುವತಿ, ತಮ್ಮ ಪೋಷಕರು ನೀಡಿದ್ದ ಅಪಹರಣ ಪ್ರಕರಣದ ವಿಚಾರಣೆಗಾಗಿ ನಗರದ 32ನೇ ಎಸಿಎಂಎಂ ನ್ಯಾಯಾಲಯದ ಎದುರು ಮಂಗಳವಾರ ಹಾಜರಾದರು.

'ನನ್ನ ಮಗಳನ್ನು ಅಪಹರಣ ಮಾಡಿ ಅಕ್ರಮ ಬಂಧನದಲ್ಲಿರಿಸಲಾಗಿದೆ' ಎಂದು ಆರೋಪಿಸಿದ್ದ ಯುವತಿ ಪೋಷಕರು, ಬೆಳಗಾವಿ ಎಪಿಎಂಸಿ ಠಾಣೆಯಲ್ಲಿ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಪ್ರಕರಣವನ್ನು ಯುವತಿ ವಾಸವಿದ್ದ ಪ್ರದೇಶ ವ್ಯಾಪ್ತಿಯ ಬೆಂಗಳೂರಿನ ಆರ್.ಟಿ.ನಗರ ಠಾಣೆಗೆ ವರ್ಗಾಯಿಸಿದ್ದರು.

ಪ್ರಕರಣದ ತನಿಖೆ ಜವಾಬ್ದಾರಿಯನ್ನು ಎಸ್‌ಐಟಿಗೆ ವಹಿಸಲಾಗಿತ್ತು. 'ನನ್ನನ್ನು ಯಾರೂ ಅಪಹರಣ ಮಾಡಿಲ್ಲ. ನನ್ನ ಮೇಲೆ ಯಾರ ಒತ್ತಡವೂ ಇಲ್ಲ. ಪೋಷಕರ ಮೇಲೆಯೇ ಒತ್ತಡ ಹಾಕಿ, ಈ ದೂರು ಕೊಡಿಸಲಾಗಿದೆ' ಎಂಬುದಾಗಿ ಯುವತಿ, ತನಿಖಾಧಿಕಾರಿಯೂ ಆದ ಎಸಿಪಿ ನಾಗರಾಜ್ ಎದುರು ಹೇಳಿಕೆ ದಾಖಲಿಸಿದ್ದರು.

ಹೇಳಿಕೆಯನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದ ತನಿಖಾಧಿಕಾರಿ, ಯುವತಿಯನ್ನೇ ನ್ಯಾಯಾಲಯಕ್ಕೆ ಕರೆಸಿ ಹೇಳಿಕೆ ದಾಖಲಿಸಿಕೊಳ್ಳಲು ಅವಕಾಶ ಕೋರಿದ್ದರು. ಅದಕ್ಕೆ 32ನೇ ಎಸಿಎಂಎಂ ನ್ಯಾಯಾಲಯ, ಅನುಮತಿ ನೀಡಿತ್ತು.

**ವಿಶೇಷ ನ್ಯಾಯಾಲಯದಲ್ಲಿ ಹೇಳಿಕೆ ದಾಖಲು:** ಗುರುನಾನಕ್ ಭವನ ಬಳಿಯ ವಿಶೇಷ ನ್ಯಾಯಾಲಯದಲ್ಲೇ ಯುವತಿ ಹೇಳಿಕೆ ದಾಖಲಿಸಿಕೊಳ್ಳಲಾಯಿತು. ಹೇಳಿಕೆಯನ್ನು ನ್ಯಾಯಾಲಯ, ಮುಚ್ಚಿದ ಲಕೋಟೆಯಲ್ಲಿ ತನಿಖಾಧಿಕಾರಿಗೆ ತಲುಪಿಸಲಿದೆ.

### ಸಿಡಿ ಪ್ರಕರಣದ ಯುವತಿ ತಾಯಿ ಆಸ್ಪತ್ರೆಗೆ ದಾಖಲು

**ವಿಜಯಪುರ:** ಸಿ.ಡಿ ಪ್ರಕರಣದ ಯುವತಿಯ ತಾಯಿ ಅನಾರೋಗ್ಯದಿಂದ ಸೋಮವಾರ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮಧುಮೇಹದಿಂದ ಬಳಲುತ್ತಿರುವ ಯುವತಿಯ ತಾಯಿ ಆರೋಗ್ಯದಲ್ಲಿ ಏರುಪೇರಾದ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

## 'ಈಶ್ವರಪ್ಪ ಪತ್ರ ತಲುಪಿಲ್ಲ'

**ಬೆಂಗಳೂರು:** 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಕೆ.ಎಸ್.ಈಶ್ವರಪ್ಪ ಬರೆದ ಪತ್ರ ನನಗೆ ತಲುಪಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

'ಈಶ್ವರಪ್ಪ ನನಗೆ ದೂರ ವಾಣಿ ಕರೆ ಮಾಡಿದ್ದರು. ಆ ವಿಷಯ ಗಳನ್ನೆಲ್ಲ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡೋಣ ಎಂದು ಅವರಿಗೆ ಹೇಳಿ ದ್ದೇನೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಯಡಿಯೂರಪ್ಪ ನಮ್ಮ ಸರ್ವೋಚ್ಚ ನಾಯಕರು. ಆದರೆ, ಕಾರ್ಯಕರ್ತರು ನಮ್ಮ ಪಕ್ಷದ ಮಾಲೀಕರು. ರಾಜ್ಯದಲ್ಲಿ ಪಕ್ಷದ ಪ್ರಮುಖ ಸಮಿತಿ ಸಭೆ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಇದು ಕುಟುಂಬ ಆಧಾರಿತವಾಗಿಲ್ಲ. ವಂಶ ಪಾರಂಪರ್ಯ ಉತ್ತರಾಧಿಕಾರಿ ಪ್ರವೃತ್ತಿ ಪಕ್ಷದೊಳಗಿಲ್ಲ' ಎಂದರು.

# ‘ಶಿಕ್ಷಕರ ವರ್ಗಾವಣೆಗೆ ಸುಗ್ರೀವಾಜ್ಞೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಪುನಃ ಸುಗ್ರೀವಾಜ್ಞೆ ಹೊರಡಿಸಲು ರಾಜ್ಯ ಸರ್ಕಾರ ಸಿದ್ಧತೆ ನಡೆಸಿದ್ದು, ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆಯಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ತಿಳಿಸಿದರು.



ಎಸ್. ಸುರೇಶ್ ಕುಮಾರ್

‘ರಾಜ್ಯದಲ್ಲಿ ಸಾವಿರಾರು ಶಿಕ್ಷಕರು ಹಲವು ವರ್ಷಗಳಿಂದ ವರ್ಗಾವಣೆಯ ನಿರೀಕ್ಷೆಯಲ್ಲಿದ್ದಾರೆ. ನಮ್ಮ ಸರ್ಕಾರ ಬಂದ ಆರಂಭದಲ್ಲಿ ವರ್ಗಾವಣೆಯ ಭರವಸೆ ನೀಡಿದ್ದೆವು. ಅದನ್ನು ಈಡೇರಿಸುವುದು ನಮ್ಮ ಕರ್ತವ್ಯ ಆಗಿರುವುದರಿಂದ ಸುಗ್ರೀವಾಜ್ಞೆ ಸಿದ್ಧಪಡಿಸಲಾಗಿದೆ’ ಎಂದು ಅವರು ‘ಪ್ರಜಾವಾಣಿ’ಗೆ ಹೇಳಿದರು.

ಈ ಹಿಂದೆ ವರ್ಗಾವಣೆಗೆ ಸಿದ್ಧತೆ ನಡೆಸಿದಾಗ, ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಯನ್ನು ಪ್ರಶ್ನಿಸಿ ಶಿಕ್ಷಕರೊಬ್ಬರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ ವರ್ಗಾವಣೆ ಪ್ರಕ್ರಿಯೆ ತಡೆ ತರಲಾಗಿತ್ತು. 2016–17 ರಲ್ಲಿ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿದ ಕಾರಣಕ್ಕೆ ಅನೇಕ ಶಿಕ್ಷಕರು ಬೇರೆ ತಾಲ್ಲೂಕಿಗೆ ವರ್ಗಾವಣೆಗೊಂಡಿದ್ದರು. ಈ ರೀತಿಯ ಸಂಕಷ್ಟ ಅನುಭವಿಸುತ್ತಿರುವ ಕೆಲವು ಶಿಕ್ಷಕರು, ತಮ್ಮನ್ನು ಬಿಟ್ಟು 2019–20ರಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸೆಲಿಂಗ್‌ನಲ್ಲಿ ಆದ್ಯತೆ ನೀಡಿರುವುದನ್ನು ಪ್ರಶ್ನಿಸಿ ಕೆಎಟಿಗೆ ದೂರು ನೀಡಿದ್ದರು.

ಕೆಎಟಿ ಆದೇಶದಿಂದಾಗಿ, ಕೋರಿಕೆ ಮತ್ತು ಪರಸ್ಪರ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿ, ಕೌನ್ಸೆಲಿಂಗ್‌ನ ನಿರೀಕ್ಷೆಯಲ್ಲಿದ್ದ 75 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ‘ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020’ ಕ್ಕೆ ಕೆಲವು ಮಾರ್ಪಾಡುಗಳನ್ನು ಮಾಡಿ ಸುಗ್ರೀವಾಜ್ಞೆ ಹೊರಡಿಸಲಾಗುತ್ತಿದೆ.

# ಮೃತ ಪುತ್ರನ ಕಟೌಟ್ ಜೊತೆ ‘ಯುವರತ್ನ’ ಸಿನಿಮಾ ವೀಕ್ಷಣೆ!

ಮೈಸೂರು: ಮೃತಪಟ್ಟ ತಮ್ಮ ಪುತ್ರನ ಕಟೌಟ್‌ನೊಂದಿಗೆ ಮೈಸೂರಿನ ಕುಟುಂಬವೊಂದು, ಚಿತ್ರಮಂದಿರದಲ್ಲಿ ಸೋಮವಾರ ಪುನೀತ್ ರಾಜ್‌ಕುಮಾರ್ ಅಭಿನಯದ ‘ಯುವರತ್ನ’ ಸಿನಿಮಾ ವೀಕ್ಷಿಸಿದೆ. ಪುನೀತ್ ಅಭಿಮಾನಿಯಾಗಿದ್ದ ಆತನ ಆಸೆಯನ್ನು ಈಡೇರಿಸುವುದಕ್ಕಾಗಿ ಹಾಗೂ ತಮ್ಮ ನೋವನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ, ಪುತ್ರನ ಕಟೌಟ್‌ಗೂ ಪ್ರತ್ಯೇಕ ಟಿಕೆಟ್ ಖರೀದಿಸಿರುವ ಅವರು, ಒಂದು ಸೀಟಿನಲ್ಲಿ ಕಟೌಟ್ ಇರಿಸಿ, ಸಿನಿಮಾ ‘ಕಣ್ತುಂಬಿ’ಕೊಂಡಿದ್ದಾರೆ.

ಇಲ್ಲಿನ ಕುವೆಂಪು ನಗರದ ಮುರಳೀಧರ ಅವರು, ತಮ್ಮ ಪತ್ನಿ, ಇನ್ನೊಬ್ಬ ಮಗ ಹಾಗೂ ಮೃತಪಟ್ಟ ಮಗನ ಕಟೌಟ್ ಜೊತೆ ಇಲ್ಲಿನ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನಲ್ಲಿ ಚಿತ್ರ ವೀಕ್ಷಿಸಿದ್ದಾರೆ.

**ಪುನೀತ್ ಎಂದರೆ ಪ್ರಾಣ:** ‘ನನ್ನ ಮಗ ಹರಿಕೃಷ್ಣನ್, ಪುನೀತ್ ರಾಜ್‌ಕುಮಾರ್ ಅವರ ದೊಡ್ಡ ಅಭಿಮಾನಿ. ಅವರೆಂದರೆ ಅವನಿಗೆ ಪ್ರಾಣ. ‘ಯುವರತ್ನ’ ಬಿಡುಗಡೆಗೂ ಮುನ್ನವೇ ಹಾಡುಗಳನ್ನು ಡೌನ್‌ಲೌಡ್ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದ’ ಎಂದು ಮುರಳೀಧರ್ ತಮ್ಮ ಪುತ್ರನನ್ನು ಹಾಗೂ ಆತನ ಅಭಿಮಾನವನ್ನು ಹೇಳಿಕೊಂಡಿದ್ದಾರೆ.

‘ಮಗ, ‘ಯುವರತ್ನ’ ಬಿಡುಗಡೆಗಾಗಿ ಕಾತರದಿಂದ ಕಾದಿದ್ದ. 2020ರ ಡಿ.13ರಂದು ಸ್ನೇಹಿತನ ಜೊತೆ ವರುಣಾ ನಾಲೆಗೆ ಈಜಲು ಹೋಗಿದ್ದಾಗ ನೀರಲ್ಲಿ ಮುಳುಗಿ ಮೃತಪಟ್ಟ. ಆದ್ದರಿಂದ, ಅವನೊಬ್ಬನನ್ನೇ ಮನೆಯಲ್ಲಿ ಬಿಟ್ಟು ಬರಲು ಮನಸ್ಸಾಗಲಿಲ್ಲ. ಅವನಿಗೂ ಟಿಕೆಟ್ ಪಡೆದು ಸಿನಿಮಾ ನೋಡಿದೆವು’ ಎಂದಿರುವ ಮುರಳೀಧರ್, ಪುತ್ರನ ಕಟೌಟ್ ತೋರಿಸಿ ಕಣ್ಣೀರಿಡುವ ವಿಡಿಯೊ ವೈರಲ್ ಆಗಿದೆ.

ಇದಕ್ಕೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರುವ ನಟ ಪುನೀತ್ ರಾಜ್‌ಕುಮಾರ್, ‘ಮೈಸೂರಿನ ಮುರಳೀಧರ್ ಹಾಗೂ ಕುಟುಂಬದವರು, ಅವರ ದಿವಂಗತ ಪುತ್ರ ಹರಿಕೃಷ್ಣನ್ ಫೋಟೊ ಜೊತೆಗೆ ಯುವರತ್ನ ಸಿನಿಮಾ ನೋಡಿರುವ ದೃಶ್ಯಗಳನ್ನು ನೋಡಿ ನನ್ನ ಮನಸ್ಸು ಭಾರವಾಯಿತು. ಬಾಲಕ ಹರಿಕೃಷ್ಣನ್ ಆತ್ಮಕ್ಕೆ ಶಾಂತಿ ಸಿಗಲಿ’ ಎಂದಿದ್ದಾರೆ.

# ಯಾದಗಿರಿ: ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

**ಯಾದಗಿರಿ:** ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸೋಮವಾರ ಸಂಜೆ ಬಿರುಗಾಳಿ ಸಹಿತ ಭಾರಿ ಮಳೆಯಾಯಿತು. ಯರಗೋಳ ಸಮೀಪದ ಅಲ್ಲಿಪುರ ಗ್ರಾಮದಲ್ಲಿ ಸಿಡಿಲು ಬಡಿದು ಆಕಳು ಸಾವನ್ನಪ್ಪಿದೆ. ಭತ್ತದ ತೆನೆಗಳು ನೆಲಕಚ್ಚಿವೆ.

ನಗರದ ಸುಭಾಷ ವೃತ್ತದ ಉಳ್ಳೆಸೂಗುರ ಕಾಂಪ್ಲೆಕ್ಸ್ ಬಳಿ ನಿರ್ಮಾಣ ಹಂತದ ಗೋಡೆ ಕುಸಿದ ಪರಿಣಾಮ 8 ಬೈಕ್‌ಗಳು ಜಖಂಗೊಂಡಿವೆ. ಬೀದಿ ಬದಿ ಹೂ–ಹಣ್ಣು ಮತ್ತು ತರಕಾರಿ ವ್ಯಾಪಾರಸ್ಥರಿಗೆ ತೊಂದರೆಯಾಯಿತು.

ಖಾನಾಪುರ–ಯಾದಗಿರಿ ಮಾರ್ಗದ ರಾಜ್ಯ ಹೆದ್ದಾರಿಯಲ್ಲಿ ಮರ ಉರುಳಿಬಿದ್ದಿದ್ದರಿಂದ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡಿತ್ತು.

ನಗರದ ಎಪಿಎಂಸಿ ಆವರಣದಲ್ಲಿ ಮಾರಾಟಕ್ಕೆ ತರಲಾಗಿದ್ದ ಶೇಂಗಾ, ಮಳೆಯಿಂದ ನೀರು ಪಾಲಾಗಿದೆ.



ಯಾದಗಿರಿಯ ಸುಭಾಷ ವೃತ್ತದ ಬಳಿ ಸೋಮವಾರ ಮಳೆಯಿಂದ ಗೋಡೆ ಕುಸಿದು ಬೈಕ್‌ಗಳು ಜಖಂಗೊಂಡಿರುವುದು

# ಜಿಲೆಟಿನ್ ಸ್ಫೋಟ: ಮತ್ತೊಬ್ಬ ಸಾವು

ಪ್ರಜಾವಾಣಿ ವಾರ್ತೆ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಚಾಕೇನಹಳ್ಳಿ ಕಟ್ಟೆ ಗ್ರಾಮದ ಸ್ಫೋಟಕ ಸಂಗ್ರಹಿಸುವ ಗೋದಾಮಿನ ಬಳಿ ಭಾನುವಾರ ಜಿಲೆಟಿನ್ ಸ್ಫೋಟಿಸಿ, ತೀವ್ರವಾಗಿ ಗಾಯಗೊಂಡಿದ್ದ ಮತ್ತೊಬ್ಬ ವ್ಯಕ್ತಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಸೋಮವಾರ ಮೃತಪಟ್ಟಿದ್ದಾರೆ.

ಸ್ಫೋಟಕ ಸಂಗ್ರಹಾಗಾರದ ಮೇಲ್ವಿಚಾರಕರಾಗಿದ್ದ ಹಾಸನ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿಯ ಬಿಜೇಮಾರನಹಳ್ಳಿಯ ರವಿಕುಮಾರ್ ಮೃತಪಟ್ಟವರು. ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಎರಡಕ್ಕೇರಿದೆ. ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮತ್ತೊಬ್ಬ ಗಾಯಾಳು ಚಾಕೇನಹಳ್ಳಿ ಗ್ರಾಮದ ನಟರಾಜ್ ಅವರನ್ನು ತಡರಾತ್ರಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

# ಲಲಿತಕಲಾ ಅಕಾಡೆಮಿ: ಮೂವರಿಗೆ ಗೌರವ ಪ್ರಶಸ್ತಿ



ಬಿ. ಮಾರುತಿ



ಗಣೇಶ್ ಸೋಮಯಾಜಿ



ಮೀರಾ ಕುಮಾರ್

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಮೂವರು ಕಲಾವಿದರನ್ನು 2020ನೇ ಸಾಲಿನ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಿದೆ.

‘ಚಿತ್ರಕಲಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಿರುವ ಬೆಂಗಳೂರಿನ ಮೀರಾ ಕುಮಾರ್, ಮಂಗಳೂರಿನ ಗಣೇಶ ಸೋಮಯಾಜಿ ಹಾಗೂ ಧಾರವಾಡದ ಬಿ. ಮಾರುತಿ ಅವರಿಗೆ 2020ನೇ ಸಾಲಿನ ಗೌರವ ಪ್ರಶಸ್ತಿ ಸಂದಿದೆ. ಇವರಿಗೆ ತಲಾ ₹50 ಸಾವಿರ ನಗದು ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಗುತ್ತದೆ. ಸಾಂಪ್ರದಾಯಿಕ ಶೈಲಿಯಲ್ಲಿ ಸಾಧನೆ ಮಾಡಿರುವ ಮಹಿಳೆಯೊಬ್ಬರನ್ನು ಈ ಬಾರಿ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ವಿಶೇಷ’ ಎಂದು ಅಕಾಡೆಮಿಯ ಅಧ್ಯಕ್ಷ ಡಿ.ಮಹೇಂದ್ರ ತಿಳಿಸಿದ್ದಾರೆ.

ಭರತ್ ಕಂದಕೂರ, ಅಂಗವಿಕಲ ಕಿರಣ್ ಶೇರ್ ಖಾನೆ ಸೇರಿದಂತೆ 10 ಮಂದಿ ಕಲಾವಿದರನ್ನು 49ನೇ ವಾರ್ಷಿಕ ಕಲಾ ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ. ಒಟ್ಟು 89 ಕಲಾಕೃತಿಗಳ ಪೈಕಿ ಉತ್ತಮವಾದ 10 ಕಲಾಕೃತಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಎಲ್ಲರಿಗೂ ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ನೀಡಲಾಗುತ್ತದೆ’ ಎಂದು ಹೇಳಿದ್ದಾರೆ.

**ಕಲಾ ಪ್ರದರ್ಶನ ಬಹುಮಾನಕ್ಕೆ ಆಯ್ಕೆಯಾದವರು:** ಭರತ್ ಕಂದಕೂರ (ಕೊಪ್ಪಳ), ಚಂದ್ರಶೇಖರ್ ಜಿ. ಪಾಟೀಲ್ (ಕಲಬುರ್ಗಿ), ವೈ. ಮೈನು (ಬೆಂಗಳೂರು), ವಿ.ಎಂ. ಉಮೇಶ್ (ದಕ್ಷಿಣ ಕನ್ನಡ), ಬಿ. ಮಂಜುನಾಥ (ಶಿವಮೊಗ್ಗ), ಅಲ್ಕಾ ಚಂದ್ವಾನಿ (ಬೆಂಗಳೂರು), ಕಿರಣ್ ಶೇರ್ ಖಾನೆ (ಹುಬ್ಬಳ್ಳಿ), ರೇಣುಕಾ ಕೆಸರಮಡು (ತುಮಕೂರು), ಸಂತೋಷ್ ರಾಥೋಡ್ (ಕಲಬುರ್ಗಿ) ಹಾಗೂ ದಸ್ತಗಿರಿ ಮಸ್ತಾನಸಾಬ್ (ಕಲಬುರ್ಗಿ).

# ಡಿಕೆಶಿ ವಿರುದ್ಧದ ಐ.ಟಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಆದಾಯ ತೆರಿಗೆ(ಐ.ಟಿ) ಇಲಾಖೆ ಸಲ್ಲಿಸಿದ್ದ ಮೂರು ಕ್ರಿಮಿನಲ್ ಪರಿಷ್ಕರಣೆ ಅರ್ಜಿಗಳನ್ನು ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

2017ರ ಆಗಸ್ಟ್‌ನಲ್ಲಿ ಅವರ ಮನೆ ಮತ್ತು ಕಚೇರಿಗಳ ಮೇಲಿನ ದಾಳಿ ವೇಳೆ ಸಾಕ್ಷ್ಯನಾಶಕ್ಕೆ ಸಂಬಂಧಿಸಿದ ಮೂರು ಪ್ರಕರಣಗಳಲ್ಲಿ ಡಿ.ಕೆ. ಶಿವಕುಮಾರ್ ಅವರಿಗೆ ರಿಲೀಫ್ ನೀಡಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಐ.ಟಿ ಇಲಾಖೆ, ಹೈಕೋರ್ಟ್ ಮೊರೆ ಹೋಗಿತ್ತು.

‘ವಿಶೇಷ ನ್ಯಾಯಾಲಯಗಳು ಹೊರಡಿಸಿರುವ ಆದೇಶಗಳಲ್ಲಿ ಯಾವುದೇ ಹಸ್ತಕ್ಷೇಪ ಅನಗತ್ಯ’ ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಬಿಡದಿ ಬಳಿಯ ರೆಸಾರ್ಟ್‌ಗೆ ದಾಳಿ ನಡೆಸಿದಾಗ ಡಿ.ಕೆ.ಶಿವಕುಮಾರ್ ಅವರು ತಮ್ಮ ಬಳಿ ಇದ್ದ ಚೀಟಿಯೊಂದನ್ನು ಹರಿದು ಹಾಕಿ ಸಾಕ್ಷ್ಯ ನಾಶ ಮಾಡಿದ್ದಾರೆ ಎಂದು ಐ.ಟಿ ಆರೋಪಿಸಿತ್ತು.

₹100 ಕೋಟಿ ವಸೂಲಿ ಮಾಡುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದ ಆರೋಪ

# ಸಿಬಿಐ ತನಿಖೆ: ದೇಶಮುಖ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಮುಂಬೈ: ಹಣ ವಸೂಲಿ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆಸುವಂತೆ ಸಿಬಿಐಗೆ ಬಾಂಬೆ ಹೈಕೋರ್ಟ್ ಆದೇಶ ನೀಡಿದ ಬಳಿಕ, ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ಸೋಮವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಮುಂಬೈನಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್‌ಗಳಿಂದ ಪ್ರತಿ ತಿಂಗಳು ₹100 ಕೋಟಿ ವಸೂಲಿ ಮಾಡುವಂತೆ ಅಮಾನತುಗೊಂಡಿರುವ ಸಚಿನ್ ವಾಜೆ ಸೇರಿದಂತೆ ಇತರ ಪೊಲೀಸ್ ಅಧಿಕಾರಿಗಳಿಗೆ ದೇಶಮುಖ್ ಸೂಚಿಸಿದ್ದರು ಎಂದು ಹಿರಿಯ ಐಪಿಎಸ್ ಅಧಿಕಾರಿ ಮತ್ತು ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಆರೋಪಿಸಿದ್ದರು.



ಅನಿಲ್ ದೇಶಮುಖ್

ನ್ಯಾಯಾಲಯದ ಆದೇಶದ ಬಳಿಕ ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರನ್ನು ಭೇಟಿಯಾದ ಎನ್‌ಸಿಪಿ ನಾಯಕ ದೇಶಮುಖ್ ಅವರು, ಸಿಬಿಐ ತನಿಖೆ ನಡೆಸುವುದರಿಂದ ಸಚಿವ ಸ್ಥಾನದಲ್ಲಿ ಮುಂದುವರಿಯುವುದು ಸಮರ್ಪಕವಲ್ಲ. ಹೀಗಾಗಿ, ರಾಜೀನಾಮೆ ನೀಡುವುದಾಗಿ ತಿಳಿಸಿದರು. ಪವಾರ್ ಒಪ್ಪಿಗೆ ನೀಡಿದ ಬಳಿಕ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ.

'ನ್ಯಾಯಾಲಯದ ಆದೇಶದ ಬಳಿಕ ಈ ಹುದ್ದೆಯಲ್ಲಿ ಮುಂದುವರಿಯುವ ಯಾವುದೇ ನೈತಿಕತೆ ಇಲ್ಲ. ಹೀಗಾಗಿ, ರಾಜೀನಾಮೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಸಲ್ಲಿಸಿರುವ ಪತ್ರದಲ್ಲಿ ಅನಿಲ್ ದೇಶಮುಖ್ ತಿಳಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಸಹ ಮಾಡಿರುವ ದೇಶಮುಖ್ ಅವರು ವಕೀಲರಾದ ಜಯಶ್ರೀ ಪಾಟೀಲ್ ಅವರು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆಸುವಂತೆ ಸಿಬಿಐಗೆ ಹೈಕೋರ್ಟ್ ಆದೇಶಿಸಿದೆ ಎಂದು ತಿಳಿಸಿದ್ದಾರೆ.

ಬಾಂಬೆ ಹೈಕೋರ್ಟ್ ತೀರ್ಪು ಪ್ರಶ್ನಿಸಿ ದೇಶಮುಖ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಮಹಾರಾಷ್ಟ್ರ ಸರ್ಕಾರ ಸಹ ತೀರ್ಪಿನ ಬಗ್ಗೆ ಕಾನೂನು ಅಭಿಪ್ರಾಯವನ್ನು ಪಡೆಯುತ್ತಿದೆ.

## ಅಸಾಮಾನ್ಯ ಪ್ರಕರಣ: ಬಾಂಬೆ ಹೈಕೋರ್ಟ್

ಅನಿಲ್ ದೇಶಮುಖ್ ವಿರುದ್ಧ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಮಾಡಿರುವ ಭ್ರಷ್ಟಾಚಾರ ಆರೋಪಗಳ ಬಗ್ಗೆ 15 ದಿನಗಳ ಒಳಗೆ ಪ್ರಾಥಮಿಕ ತನಿಖೆ ನಡೆಸುವಂತೆ ಬಾಂಬೆ ಹೈಕೋರ್ಟ್ ಸಿಬಿಐಗೆ ನಿರ್ದೇಶನ ನೀಡಿದೆ.

'ಇದೊಂದು ಅಸಾಮಾನ್ಯ ಮತ್ತು ಅಪರೂಪದ ಪ್ರಕರಣವಾಗಿದ್ದು, ಸ್ವತಂತ್ರ ತನಿಖೆಯ ಅಗತ್ಯವಿದೆ' ಎಂದು ಮುಖ್ಯ ನ್ಯಾಯಮೂರ್ತಿ ದೀಪಾಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್. ಕುಲಕರ್ಣಿ ಅವರನ್ನೊಳಗೊಂಡ ಪೀಠವು ಹೇಳಿದೆ.

ರಾಜ್ಯದ ಗೃಹ ಸಚಿವರ ವಿರುದ್ಧ ಸೇವೆಯಲ್ಲಿರುವ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಆರೋಪ ಮಾಡಿದ್ದಾರೆ. ಹೀಗಾಗಿ, ನ್ಯಾಯಾಲಯ ಮೂಕ ಪ್ರೇಕ್ಷಕವಾಗಿರಲು ಸಾಧ್ಯವಿಲ್ಲ. ಗಂಭೀರ ಸ್ವರೂಪದ ಆರೋಪಗಳಾಗಿರುವುದರಿಂದ ಸ್ವತಂತ್ರ ತನಿಖೆಯ ಅಗತ್ಯವಿದೆ. ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳಲು ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ತನಿಖೆ ಅನಿವಾರ್ಯ ಎಂದು ಪೀಠವು 52 ಪುಟಗಳ ಆದೇಶದಲ್ಲಿ ತಿಳಿಸಿದೆ.

ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆಗೆ ಆದೇಶಿಸುವಂತೆ ಕಳೆದ ತಿಂಗಳು ಸಲ್ಲಿಸಿದ್ದ ಮೂರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಮತ್ತು ಇನ್ನೊಂದು ಕ್ರಿಮಿನಲ್ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಈ ಆದೇಶ ನೀಡಿದೆ.

> **'ಕಾನೂನಿನ ಆಡಳಿತ ನಡೆಸಬೇಕು ಎಂದು ಸಂವಿಧಾನ ಹೇಳಿದೆ. ರಾಜಕೀಯ ಬೆಂಬಲ ಇರುವ ಗೂಂಡಾಗಳ ಆಡಳಿತವಲ್ಲ. ಎಲ್ಲ ನ್ಯಾಯಾಲಯಗಳು ಕಾನೂನಿನ ಆಡಳಿತ ನಡೆಸಲು ಬದ್ಧವಾಗಿವೆ.**
> **ಬಾಂಬೆ ಹೈಕೋರ್ಟ್**

ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪರಮ್ ಬೀರ್ ಸಿಂಗ್ ಸಲ್ಲಿಸಿದ್ದರು. ಉಳಿದ ಎರಡನ್ನು ವಕೀಲರಾದ ಘನಶ್ಯಾಮ್ ಉಪಾಧ್ಯಾಯ ಮತ್ತು ಸ್ಥಳೀಯ ಶಿಕ್ಷಕ ಮೋಹನ್ ಭಿಡೆ ಸಲ್ಲಿಸಿದ್ದರು. ಕ್ರಿಮಿನಲ್ ರಿಟ್ ಅರ್ಜಿಯನ್ನು ವಕೀಲರಾದ ಜಯಶ್ರೀ ಪಾಟೀಲ್ ಸಲ್ಲಿಸಿದ್ದರು. ಪಾಟೀಲ್ ಅವರ ಅರ್ಜಿ ಆಧರಿಸಿ ಹೈಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿತು.

ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸದ ಕಾರಣ ಸಿಬಿಐ ತನಿಖೆಗೆ ಆದೇಶಿಸುವುದು ಅಗತ್ಯವಿಲ್ಲ ಎಂದು ಅಡ್ವೊಕೇಟ್ ಜನರಲ್ ಅಶುತೋಷ್ ಕುಂಭಕೋನಿ ವಾದ ಮಂಡಿಸಿದ್ದರು.

ಆದರೆ, ಮಾರ್ಚ್ 21ರಂದೇ ಮಲಬಾರ್ ಹಿಲ್ ಠಾಣೆಯಲ್ಲಿ ದೇಶಮುಖ್ ಮತ್ತು ಸಿಂಗ್ ವಿರುದ್ಧ ದೂರು ಸಲ್ಲಿಸಲಾಗಿದೆ. ಆದರೆ, ಪ್ರಾಥಮಿಕ ತನಿಖೆ ನಡೆಸಿ ಎಫ್‌ಐಆರ್ ದಾಖಲಿಸಲು ಪೊಲೀಸರು ವಿಫಲರಾಗಿದ್ದಾರೆ ಎಂದು ಜಯಶ್ರೀ ಪಾಟೀಲ್ ನ್ಯಾಯಾಲಯಕ್ಕೆ ವಿವರಿಸಿದರು.

ಪೊಲೀಸರ ವೈಫಲ್ಯವನ್ನು ಪರಿಗಣಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ ಈ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡುವುದು ಅನಿವಾರ್ಯ ಎಂದು ಹೇಳಿತು.

ಪಾಟೀಲ್ ಅವರು ದೂರು ನೀಡಿದ್ದರೂ ಪೊಲೀಸರು ಕ್ರಮಕೈಗೊಳ್ಳದಿರುವ ಬಗ್ಗೆಯೂ ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿತು.

ಯಾವುದೇ ಆರೋಪಿ ಯಾವುದೇ ರೀತಿಯ ಉನ್ನತ ಹುದ್ದೆಯಲ್ಲಿ ಇರಲಿ. ಕಾನೂನಿನ ಆಡಳಿತವೇ ಮುಖ್ಯವಾಗಬೇಕು ಮತ್ತು ಸಂವಿಧಾನದ ತತ್ವಗಳ ಉಲ್ಲಂಘನೆಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದೆ.

ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ರಾಜ್ಯ ಸರ್ಕಾರ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದೆ. ಆದರೂ, ಕಾನೂನಿನ ಪ್ರಕಾರ ಪಾಟೀಲ್ ಅವರು ನೀಡಿದ ದೂರಿನ ಬಗ್ಗೆ ತನಿಖೆ ನಡೆಸಬೇಕಾಗಿತ್ತು ಎಂದು ಹೇಳಿದೆ.

> **ಅನಿಲ್ ದೇಶಮುಖ್ ರಾಜೀನಾಮೆ ನೀಡುವುದನ್ನು ಹೊರತುಪಡಿಸಿ ಬೇರೆ ಆಯ್ಕೆ ಇರಲಿಲ್ಲ. ಆರೋಪ ಹೊರಿಸಿದ ಮೊದಲ ದಿನವೇ ಅವರಿಗೆ ನೈತಿಕತೆಯ ಬಗ್ಗೆ ನೆನಪಾಗಬೇಕಾಗಿತ್ತು.**
> **ದೇವೇಂದ್ರ ಫಡಣವೀಸ್,** ವಿರೋಧ ಪಕ್ಷದ ನಾಯಕ

> **ಬಾಂಬೆ ಹೈಕೋರ್ಟ್ ಆದೇಶದ ಬಗ್ಗೆ ಅಧ್ಯಯನ ನಡೆಸಿದ ಬಳಿಕ ಮಹಾರಾಷ್ಟ್ರ ಸರ್ಕಾರ ಪ್ರತಿಕ್ರಿಯೆ ನೀಡಲಿದೆ. ಇದೊಂದು ರಾಜಕೀಯ ಪ್ರೇರಿತ ವಿಷಯವೂ ಹೌದು. ಆದರೂ, ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ.**
> **ಸಂಜಯ್ ರಾವುತ್,** ಶಿವಸೇನಾ ನಾಯಕ

### ಬಿಜೆಪಿ ವಾಗ್ದಾಳಿ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ವಾಗ್ದಾಳಿ ನಡೆಸಿರುವ ಕೇಂದ್ರ ಸಚಿವ ಮತ್ತು ಬಿಜೆಪಿಯ ಹಿರಿಯ ನಾಯಕ ರವಿಶಂಕರ್ ಪ್ರಸಾದ್, ಅನಿಲ್ ದೇಶಮುಖ್ ರಾಜೀನಾಮೆ ಬಳಿಕ ಅಧಿಕಾರದಲ್ಲಿ ಮುಂದುವರಿಯುವ ಯಾವುದೇ ನೈತಿಕತೆ ಇಲ್ಲ ಎಂದು ಟೀಕಿಸಿದ್ದಾರೆ. ಹಲವು ಪ್ರಮುಖ ಅಹಿತಕರ ಘಟನೆಗಳು ನಡೆದಿದ್ದರೂ ಉದ್ಧವ್ ಠಾಕ್ರೆ ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ ಎಂದಿದ್ದಾರೆ.

### ವಾಲ್ಸೆ ಪಾಟೀಲ್ ನೂತನ ಗೃಹ ಸಚಿವ

ಮುಂಬೈ: ಅನಿಲ್ ದೇಶಮುಖ್ ಅವರು ರಾಜೀನಾಮೆ ನೀಡಿರುವುದರಿಂದ, ಗೃಹ ಖಾತೆಯನ್ನು ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರ ಆಪ್ತರಾಗಿರುವ ದಿಲೀಪ್ ವಾಲ್ಸೆ ಪಾಟೀಲ್ ಅವರಿಗೆ ನೀಡಲಾಗಿದೆ.

ಮಹಾ ವಿಕಾಸ ಅಘಾಡಿ ಸರ್ಕಾರದಲ್ಲಿ ಸಚಿವರಾಗಿರುವ 64 ವರ್ಷದ ವರ್ಷ ದಿಲೀಪ್ ಅವರು, ಇದುವರೆಗೆ ಅಬಕಾರಿ ಮತ್ತು ಕಾರ್ಮಿಕ ಖಾತೆಯನ್ನು ನಿಭಾಯಿಸುತ್ತಿದ್ದರು.

## ಸುದ್ದಿ 2 ನಿಮಿಷ

### 'ಮೇ ಅಂತ್ಯದವರೆಗೂ ಕೋವಿಡ್ ಗಂಭೀರ: ಡಾ.ಕೆ. ಸುಧಾಕರ್'

ಬೆಂಗಳೂರು: 'ರಾಜ್ಯದಲ್ಲಿ ಕಾಣಿಸಿಕೊಂಡಿರುವ ಕೊರೊನಾ ಎರಡನೇ ಅಲೆಯನ್ನು ಮೇ ಅಂತ್ಯವರೆಗೂ ಬಹಳ ಗಂಭೀರವಾಗಿ ಪರಿಗಣಿಸಬೇಕು ಎಂದು ತಾಂತ್ರಿಕ ಸಲಹಾ ಸಮಿತಿಯು ಎಚ್ಚರಿಸಿದೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೋಂಕಿನ ಸ್ಥಿತಿಗತಿ ಕುರಿತು ಸಮಿತಿಯು ಸರ್ಕಾರಕ್ಕೆ ವರದಿ ನೀಡಿದೆ. ಸೋಂಕು ನಿಯಂತ್ರಣಕ್ಕೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ' ಎಂದರು.



'ರಾಜ್ಯಕ್ಕೆ ಕೇಂದ್ರ ಸರ್ಕಾರವು 15 ಲಕ್ಷಕ್ಕೂ ಹೆಚ್ಚು ಕೋವಿಡ್ ಲಸಿಕೆ ಡೋಸ್ ನೀಡಿದ್ದು, ಇದರಲ್ಲಿ ಬೆಂಗಳೂರಿನಲ್ಲಿ 10 ಲಕ್ಷ ಮತ್ತು ಬೆಳಗಾವಿಯಲ್ಲಿ 5 ಲಕ್ಷ ಡೋಸ್ ವಿತರಿಸಲಾಗುವುದು' ಎಂದೂ ಅವರು ತಿಳಿಸಿದರು.

**ಹಾಸಿಗೆ ವ್ಯವಸ್ಥೆಗೆ ಕ್ರಮ:** 'ರಾಜಧಾನಿಯಲ್ಲಿ ನಿತ್ಯ ಮೂರರಿಂದ ಮೂರೂವರೆ ಸಾವಿರ ಪ್ರಕರಣಗಳು ವರದಿಯಾಗುತ್ತಿವೆ. ಏ.15ರ ವೇಳೆ ನಿತ್ಯ ಆರೂವರೆ ಸಾವಿರಕ್ಕೂ ಅಧಿಕ ಪ್ರಕರಣಗಳು ಬರುತ್ತವೆ ಎಂದು ತಜ್ಞರ ಸಮಿತಿಯ ಸದಸ್ಯರೊಬ್ಬರು ಅಂದಾಜಿಸಿದ್ದಾರೆ' ಎಂದರು.

'ಸದ್ಯ ಬೆಂಗಳೂರಿನಲ್ಲಿ ತುರ್ತು ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆ ಕೊರತೆ ಉದ್ಭವಿಸಿದೆ. ಈ ಹಿಂದೆಯೇ ಸರ್ಕಾರಿ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಯ ಶೇ. 20ರಷ್ಟು ಹಾಸಿಗೆಯನ್ನು ಬಳಸಿಕೊಳ್ಳುವುದಕ್ಕೆ ಅನುಮತಿ ನೀಡಲಾಗಿತ್ತು. ಸದ್ಯ ಈವರೆಗೂ ಎಷ್ಟು ಹಾಸಿಗೆಗಳನ್ನು ಬಳಸಿಕೊಂಡಿದ್ದಾರೆ ಎಂದು ಪರಿಶೀಲನೆ ನಡೆಸುತ್ತೇವೆ.' ಎಂದರು.

### ಎಚ್‌.ಡಿ. ದೇವೇಗೌಡ ದಂಪತಿ ಮನೆಗೆ

ಬೆಂಗಳೂರು: ಕೋವಿಡ್ ಸೋಂಕಿತರಾಗಿದ್ದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಮತ್ತು ಅವರ ಪತ್ನಿ ಚೆನ್ನಮ್ಮ ಗುಣಮುಖರಾಗಿದ್ದು, ಸೋಮವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಚೆನ್ನಮ್ಮ ಅವರಿಗೆ ಮೊದಲು ಕೋವಿಡ್ ದೃಢಪಟ್ಟಿತ್ತು. ಮಾರ್ಚ್ 30ರಂದು ಅವರನ್ನು ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ದೇವೇಗೌಡರಿಗೂ ಕೋವಿಡ್ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಮಾ.31ರಂದು ಅವರನ್ನೂ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಇಬ್ಬರೂ ಸೋಂಕಿನಿಂದ ಗುಣಮುಖರಾಗಿರುವುದು ಸೋಮವಾರ ನಡೆಸಿದ ಪರೀಕ್ಷೆಯಲ್ಲಿ ಖಚಿತವಾಗಿತ್ತು. ಬಳಿಕ ಅವರನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಯಿತು. ದೇವೇಗೌಡ ದಂಪತಿ ಆಸ್ಪತ್ರೆಯಿಂದ ನಿರ್ಗಮಿಸುವಾಗ ಮಣಿಪಾಲ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ.ಸುದರ್ಶನ್ ಬಲ್ಲಾಳ್ ಮತ್ತು ಶ್ವಾಸಕೋಶ, ಉಸಿರಾಟ ಸಂಬಂಧಿ ತಜ್ಞ ಡಾ. ಸತ್ಯನಾರಾಯಣ್ ಮೈಸೂರು ಹಾಜರಿದ್ದು, ಹೂಗುಚ್ಛ ನೀಡಿ ಬೀಳ್ಕೊಟ್ಟರು.

**ಕವಟಗಿಮಠಗೆ ಕೋವಿಡ್:** (ಬೆಳಗಾವಿ ವರದಿ) ವಿಧಾನಪರಿಷತ್ ಮುಖ್ಯಸಚೇತಕ ಮಹಾಂತೇಶ ಕವಟಗಿಮಠ ಅವರಿಗೆ ಕೋವಿಡ್‌-19 ದೃಢಪಟ್ಟಿದೆ. ಅವರು ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಕಾರ್ಯದಿಂದ ದೂರ ಉಳಿಯುವಂತಾಗಿದೆ.

'ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ದಾಖಲಾಗಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.' ಎಂದು ಸಹೋದರ ಜಗದೀಶ ಕವಟಗಿಮಠ ತಿಳಿಸಿದರು.

## ಆಸ್ತಿ ಕೊಳ್ಳೆಗೆ ಅಪ್ಪನೇ ಬದಲು!

ಒಂದನೇ ಪುಟದಿಂದ

ಖಾತೆ ಮಾಡಿಕೊಡಲು ಜಿಲ್ಲಾಡಳಿತ ಮೀನಮೇಷ ಎಣಿಸುತ್ತಿದೆ ಎಂದು ಆರೋಪಿಸಿ ಪ್ರತಿವಾದಿಗಳು ಹೈಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದರು. ಪ್ರತಿವಾದಿಗಳ ಹೆಸರಿಗೆ ಖಾತೆ ಮಾಡಿಕೊಡಬೇಕು ಎಂದು 2018ರಲ್ಲಿ ಹೈಕೋರ್ಟ್ ನಿರ್ದೇಶನ ನೀಡಿದ್ದರಿಂದಾಗಿ, ಜಿಲ್ಲಾಡಳಿತದ ಅಧಿಕಾರಿಗಳು ಖಾತೆಯನ್ನೂ ಮಾಡಿಕೊಟ್ಟರು. ನ್ಯಾಯಾಂಗ ನಿಂದನೆ ಪ್ರಕರಣ ಇತ್ಯರ್ಥವಾದ ಕೂಡಲೇ ಅಂದು ಉಪವಿಭಾಗಾಧಿಕಾರಿಯಾಗಿದ್ದ ಎಂ.ಕೆ. ಜಗದೀಶ್ , ಪಹಣಿ ಮಾಡುವುದಕ್ಕೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 67ರ ಅಡಿಯಲ್ಲಿ ತಡೆಯಾಜ್ಞೆ ವಿಧಿಸಿದರು.

ನಂತರ ಈ ಹುದ್ದೆಗೆ ಬಂದ ದಯಾನಂದ ಭಂಡಾರಿ, ಭೂಕಂದಾಯ ಕಾಯ್ದೆಯಡಿ ಪ್ರಕರಣದ ವಿಚಾರಣೆ ನಡೆಸುವ ಅಧಿಕಾರ ತಮಗೆ ಇಲ್ಲ ಎಂದು ಪ್ರತಿಪಾದಿಸಿ 2020ರ ಜನವರಿ 29ರಂದು ಪ್ರಕರಣವನ್ನೇ ಕೈಬಿಟ್ಟರು.

## ಕಲ್ಲಿದ್ದಲು ಹಗರಣ: ವಿಚಾರಣೆಗೆ ಇಬ್ಬರು ನ್ಯಾಯಾಧೀಶರ ನೇಮಕ

ನವದೆಹಲಿ (ಪಿಟಿಐ): ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಇಬ್ಬರು ನ್ಯಾಯಾಧೀಶರನ್ನು ಸುಪ್ರೀಂ ಕೋರ್ಟ್ ಸೋಮವಾರ ನೇಮಿಸಿದೆ.

2014ರಿಂದ ಬಾಕಿ ಉಳಿದಿರುವ ಈ ಪ್ರಕರಣದ ವಿಚಾರಣೆ ನಡೆಸಲು ನ್ಯಾಯಾಧೀಶರಾದ ಅರುಣ್ ಭಾರದ್ವಾಜ್ ಮತ್ತು ಸಂಜಯ್ ಬನ್ಸಾಲ್ ಅವರನ್ನು ನೇಮಿಸಲಾಗಿದೆ.

ಈ ಮೊದಲು ವಿಶೇಷ ನ್ಯಾಯಾಧೀಶ ಭರತ್ ಪರಾಶರ್ ಅವರು ವಿಚಾರಣೆ ನಡೆಸುತ್ತಿದ್ದರು. ವಿಶೇಷ ನ್ಯಾಯಾಧೀಶರ ಹುದ್ದೆಗೆ ನೇಮಿಸಲು ಅರ್ಹ ನ್ಯಾಯಾಧೀಶರ ಹೆಸರುಗಳನ್ನು ಶಿಫಾರಸು ಮಾಡುವಂತೆ ಸುಪ್ರೀಂ ಕೋರ್ಟ್ ಮಾರ್ಚ್ 15ರಂದು ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ಸೂಚಿಸಿತ್ತು.

ಈ ಸೂಚನೆ ಅನ್ವಯ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರು ಶಿಫಾರಸು ಮಾಡಿದ್ದ ಐವರು ನ್ಯಾಯಾಧೀಶರ ಹೆಸರುಗಳನ್ನು ಮುಖ್ಯನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ಪರಿಶೀಲಿಸಿ, ಒಬ್ಬ ವಿಶೇಷ ನ್ಯಾಯಾಧೀಶರ ಬದಲು ಇಬ್ಬರನ್ನು ನೇಮಿಸುವ ನಿರ್ಧಾರ ಕೈಗೊಂಡಿದೆ.

ಹೀಗಾಗಿ, ಎರಡು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ 41 ಪ್ರಕರಣಗಳ ವಿಚಾರಣೆ ನಡೆಯಲಿದೆ.

ಡಸಾಲ್ಟ್ ಕಂಪನಿ ವರದಿ ಉಲ್ಲೇಖ: ಪ್ರಧಾನಿ ಹೇಳಿಕೆಗೆ ಕಾಂಗ್ರೆಸ್ ಪಟ್ಟು

## ರಫೇಲ್ ಖರೀದಿ: ಸಮಗ್ರ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ರಫೇಲ್ ಯುದ್ಧ ವಿಮಾನಗಳ ಮಾರಾಟ ಸಂಬಂಧ ಭಾರತದ ಮಧ್ಯವರ್ತಿಗೆ ₹94.93 ಕೋಟಿ (1.1 ಮಿಲಿಯನ್ ಯೂರೊ) 'ಕೊಡುಗೆ' ನೀಡಲಾಗಿದೆ ಎಂದು ಫ್ರಾನ್ಸ್‌ನ ವೈಮಾನಿಕ ಸಂಸ್ಥೆ ಡಸಾಲ್ಟ್ ಹೇಳಿದೆ. ಭ್ರಷ್ಟಾಚಾರ ವಿರೋಧಿ ಸಂಸ್ಥೆ (ಎಎಫ್‌ಎ) ಹೇಳಿಕೆ ಆಧರಿಸಿ ಫ್ರಾನ್ಸ್‌ನ 'ಮೀಡಿಯಾಪಾರ್ಟ್' ಈ ವರದಿ ಮಾಡಿದೆ.

ಯುದ್ಧವಿಮಾನಗಳನ್ನು ಪೂರೈಸಿದ್ದ ಡಸಾಲ್ಟ್ ಸಂಸ್ಥೆ, ಈ ಹಣವನ್ನು ರಫೇಲ್ ಜೆಟ್‌ನ ಮಾದರಿಗಳ ತಯಾರಿಕೆಗೆ ನೀಡಲಾಗಿತ್ತು ಎಂದು ಕಾರಣ ನೀಡಿದೆ. ಆದರೆ, ಜೆಟ್‌ಗಳನ್ನು ಪೂರೈಸಿರುವುದಕ್ಕೆ ಪೂರಕವಾಗಿ ಯಾವುದೇ ದಾಖಲೆಗಳು ಅಥವಾ ಛಾಯಾಚಿತ್ರಗಳನ್ನು ಸಂಸ್ಥೆಯು ಒದಗಿಸಿಲ್ಲ ಎಂದು ಮಾಧ್ಯಮ ವರದಿಯು ಹೇಳಿದೆ.

ಈ ಮಧ್ಯವರ್ತಿ ಭಾರತದಲ್ಲಿ ನಡೆದಿರುವ, ರಕ್ಷಣಾ ಪರಿಕರ ಖರೀದಿಬ ಇನ್ನೊಂದು ವಹಿವಾಟಿನಲ್ಲಿಯೂ ಆರೋಪಿ ಆಗಿದ್ದಾರೆ ಎಂದು ಮೀಡಿಯಾಪಾರ್ಟ್ ವರದಿಯಲ್ಲಿ ಉಲ್ಲೇಖಿಸಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಕಾಂಗ್ರೆಸ್ ವಾಗ್ದಾಳಿ: ಫ್ರಾನ್ಸ್ ಮಾಧ್ಯಮಗಳ ಈ ವರದಿಯನ್ನೇ ಉಲ್ಲೇಖಿಸಿ ಪ್ರಧಾನಿ ನರೇಂದ್ರಮೋದಿ ಅವರ ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್ ಪಕ್ಷ, ಈ ಕುರಿತು ಹೇಳಿಕೆಯನ್ನು ನೀಡಬೇಕು ಎಂದು ಒತ್ತಾಯಿಸಿದೆ.



ಮಧ್ಯವರ್ತಿಗಳ ಉಪಸ್ಥಿತಿಯಿಂದಾಗಿ ಯುದ್ಧ ವಿಮಾನಗಳ ಖರೀದಿಯಲ್ಲಿ ರಕ್ಷಣಾ ಪರಿಕರಗಳ ಖರೀದಿ ಪ್ರಕ್ರಿಯೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದೂ ಕಾಂಗ್ರೆಸ್ ಪಕ್ಷ ಆರೋಪಿಸಿದೆ. ರಫೇಲ್ ಯುದ್ಧ ವಿಮಾನಗಳ ಖರೀದಿ ವಹಿವಾಟಿನಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ತನ್ನ ಆರೋಪವನ್ನು ಮತ್ತೆ ಪುನರುಚ್ಚರಿಸಿದೆ.

'ಫ್ರಾನ್ಸ್‌ನ ಡಸಾಲ್ಟ್ ಸಂಸ್ಥೆಯು 1.1 ಮಿಲಿಯನ್ ಯೂರೊ ಅನ್ನು 'ಕೊಡುಗೆ' ನೀಡಲಾಗಿದೆ' ಎಂದು ವರದಿಯಲ್ಲಿ ತೋರಿಸಿದೆ. ಇದು, ವಾಸ್ತವವಾಗಿ ರಫೇಲ್ ವಹಿವಾಟಿನಲ್ಲಿ ಮಧ್ಯವರ್ತಿಗಳಿಗೆ ನೀಡಿದ ಕಮಿಷನ್ ಮೊತ್ತವೇ?' ಎಂದು ಕಾಂಗ್ರೆಸ್ ಪಕ್ಷದ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಪ್ರಶ್ನಿಸಿದ್ದಾರೆ.

ರಫೇಲ್ ಯುದ್ಧ ವಿಮಾನಗಳ ಖರೀದಿ ವಹಿವಾಟಿನಲ್ಲಿ ಕೊಡುಗೆ ನೀಡಿರುವ ಕುರಿತ ಸಂಸ್ಥೆಯ ಹೇಳಿಕೆ ಹಿನ್ನೆಲೆಯಲ್ಲಿ ಈ ವಹಿವಾಟಿನ ಭ್ರಷ್ಟಾಚಾರದ ಆರೋಪ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದಾರೆ.

ವರದಿಯ ಅನುಸಾರ, 'ಕೊಡುಗೆ' ಕುರಿತ ಮಾಹಿತಿಗೆ ಪೂರಕವಾಗಿ ಡಸಾಲ್ಟ್ ಸಂಸ್ಥೆಯು, ಭಾರತೀಯ ಕಂಪನಿಯಾದ ಡೆಫಿಸಿಸ್ ಸಲ್ಯೂಷನ್ಸ್ ಸಂಸ್ಥೆಯ ಇನ್‌ವಾಯ್ಸ್ ಅನ್ನು ಉಲ್ಲೇಖಿಸಿತ್ತು.

'ಡಸಾಲ್ಟ್ ಸಂಸ್ಥೆಯು, 59 ರಫೇಲ್ ಯುದ್ಧ ವಿಮಾನಗಳ ಖರೀದಿ ಪ್ರಕ್ರಿಯೆಯಲ್ಲಿ ತೊಡಗಿದ್ದ ಭಾರತೀಯ ಸಂಸ್ಥೆಗೆ ಕೊಡುಗೆ ನೀಡಿದ್ದಾಗಿ ಭ್ರಷ್ಟಾಚಾರ ವಿರೋಧಿ ಸಂಸ್ಥೆಗೆ ತಿಳಿಸಿದೆ. ಸ್ವತಃ ಜೆಟ್ ತಯಾರಿಕಾ ಸಂಸ್ಥೆಯಾಗಿ ಭಾರತೀಯ ಸಂಸ್ಥೆ ಜೊತೆಗೆ ಏಕೆ ಕೈಜೋಡಿಸಬೇಕು ಎಂದು ಫ್ರಾನ್ಸ್‌ನ ಅಧಿಕಾರಿಗಳು ಪ್ರಶ್ನಿಸಿದಾಗ ಡಸಾಲ್ಟ್ ಸಂಸ್ಥೆಯಿಂದ ಸಮಾಧಾನಕರವಾದ ಉತ್ತರ ಬಂದಿಲ್ಲ' ಎಂದು ಸುರ್ಜೇವಾಲಾ ಅವರು ಹೇಳಿದ್ದಾರೆ.

'ವರದಿಯಲ್ಲಿ ಉಲ್ಲೇಖಿಸಿರುವ ಭಾರತದ ಡೆಫಿಸಿಸ್ ಸಲ್ಯೂಷನ್ಸ್ ಸಂಸ್ಥೆ ವಾಸ್ತವವಾಗಿ ವಿಮಾನಗಳ ಸಿಮ್ಯುಲೇಟರ್ ಗಳ ಜೋಡಣೆ, ಆಪ್ಟಿಕಲ್ ಮತ್ತು ವಿದ್ಯುನ್ಮಾನ ವ್ಯವಸ್ಥೆ ಜೋಡಣೆ ಕಾರ್ಯ ನಡೆಸಲಿದೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಪ್ರಧಾನಿ ಅವರು ಈಗ ಡಸಾಲ್ಟ್ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸುವರೇ' ಎಂದು ಪ್ರಶ್ನಿಸಿದ್ದಾರೆ.

### ಆರೋಪ ಆಧಾರರಹಿತ –ಬಿಜೆಪಿ

ನವದೆಹಲಿ (ಪಿಟಿಐ): ರಫೇಲ್ ಖರೀದಿ ವಹಿವಾಟಿನಲ್ಲಿ ಭ್ರಷ್ಟಾಚಾರ ಆರೋಪವನ್ನು ಬಿಜೆಪಿ 'ಆಧಾರರಹಿತ' ಎಂದು ತಳ್ಳಿಹಾಕಿದೆ. ತನಿಖೆ ನಡೆಸಬೇಕೆಂಬ ಬೇಡಿಕೆಯನ್ನು ಸುಪ್ರೀಂ ಕೋರ್ಟ್ ಕೂಡಾ ತಿರಸ್ಕರಿಸಿತ್ತು ಅಲ್ಲದೆ, ಮಹಾಲೇಖಪಾಲರ ವರದಿಯಲ್ಲಿಯೂ ಈ ಬಗ್ಗೆ ಯಾವುದೇ ಲೋಪ ಗುರುತಿಸಿಲ್ಲ ಎಂದು ಸಮರ್ಥಿಸಿಕೊಂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ರವಿಶಂಕರ್ ಪ್ರಸಾದ್, 'ಫ್ರಾನ್ಸ್ ಮಾಧ್ಯಮ ವರದಿಯಲ್ಲಿ ಉಲ್ಲೇಖಿಸಿರುವ ಮಧ್ಯವರ್ತಿ ಎನ್ನಲಾದ ಸುಶೇನ್ ಗುಪ್ತಾರನ್ನು ಆಗಸ್ತಾ ವೆಸ್ಟ್‌ಲ್ಯಾಂಡ್ ಪ್ರಕರಣದಲ್ಲಿ 2019ರಲ್ಲಿ ಇ.ಡಿ ಬಂಧಿಸಿತ್ತು. ಅಲ್ಲದೆ, ಆ ತನಿಖೆಯಲ್ಲಿ ಕಾಂಗ್ರೆಸ್‌ನ ಅನೇಕ ಮುಖಂಡರ ಹೆಸರು ಕೇಳಿಬಂದಿದ್ದವು ಎಂದೂ ಹೇಳಿದರು.

## ಕೋವಿಡ್: 8ಕ್ಕೆ ಮುಖ್ಯಮಂತ್ರಿಗಳ ಜತೆ ಪ್ರಧಾನಿ ಮೋದಿ ಸಭೆ

ನವದೆಹಲಿ: ದೇಶದಲ್ಲಿ ಸೋಮವಾರ ಒಂದೇ ದಿನ ಕೋವಿಡ್‌–19 ಪ್ರಕರಣಗಳು ಒಂದು ಲಕ್ಷ ದಾಟಿವೆ. ಹೀಗಾಗಿ, ಹೆಚ್ಚುತ್ತಿರುವ ಪ್ರಕರಣಗಳನ್ನು ನಿಯಂತ್ರಿಸುವ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 8ರಂದು ಮುಖ್ಯಮಂತ್ರಿಗಳ ಜತೆ ಸಭೆ ನಡೆಸಲಿದ್ದಾರೆ.

ಈ ಸಭೆಗೆ ಮುನ್ನ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಅತಿ ಹೆಚ್ಚು ಪ್ರಕರಣಗಳು ಪತ್ತೆಯಾಗಿರುವ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಸಚಿವರ ಜತೆ ಸಮಾಲೋಚನೆ ನಡೆಸಲಿದ್ದಾರೆ.

ಫೆಬ್ರುವರಿ 8ರಿಂದ ದೇಶದಲ್ಲಿ ಸೋಂಕು ಪ್ರಕರಣಗಳು 12 ಪಟ್ಟು ಹೆಚ್ಚಾಗಿವೆ. ಕಳೆದ ವರ್ಷ ಜನವರಿಯಲ್ಲಿ ಸೋಂಕು ಕಾಣಿಸಿಕೊಂಡ ಬಳಿಕ ಇದೇ ಮೊದಲ ಬಾರಿ ಒಂದು ಲಕ್ಷ ಮೀರಿ ಪ್ರಕರಣಗಳು ಪತ್ತೆಯಾಗಿದ್ದು, ಸೋಮವಾರ ಒಂದೇ ದಿನ 478 ಮಂದಿ ಸತ್ತಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್ 10ರಂದು 99,181 ಸೋಂಕು ಪ್ರಕರಣಗಳು ದೃಢಪಟ್ಟಿದ್ದವು.

ಅತಿ ಹೆಚ್ಚು ಸೋಂಕು ಪ್ರಕರಣಗಳು ಕಾಣಿಸಿಕೊಂಡಿರುವ ಮಹಾರಾಷ್ಟ್ರ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಕಠಿಣ ನಿರ್ಬಂಧಗಳನ್ನು ಹೇರಲಾಗಿದೆ.

ರಾಜಸ್ಥಾನ ಸರ್ಕಾರ ರಾತ್ರಿ ವೇಳೆ ಕರ್ಫ್ಯೂ ಜಾರಿಗೊಳಿಸಿದ್ದು, ಜತೆಗೆ ಏಪ್ರಿಲ್ 5ರಿಂದ 19ರವರೆಗೆ 1ರಿಂದ 9ನೇ ತರಗತಿಗಳನ್ನು ಸ್ಥಗಿತಗೊಳಿಸಲಾಗಿದೆ.



## ಗ್ರಾಮದಲ್ಲೇ ಜ್ವರ ಕೇಂದ್ರ ತೆರೆದು ಚಿಕಿತ್ಸೆ

ನಾಯಕನಹಟ್ಟಿ ಹೋಬಳಿಯ ರೇಖಲಗೆರೆ ಗ್ರಾಮಕ್ಕೆ ಭೇಟಿ ನೀಡಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ರೇಖಲಗೆರೆ (ನಾಯಕನಹಟ್ಟಿ): ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಹೋಬಳಿ ಸಮೀಪದ ರೇಖಲಗೆರೆ ಗ್ರಾಮದಲ್ಲಿ ಸ್ವಚ್ಛತೆ ಕೊರತೆಯ ಕಾರಣಕ್ಕೆ ಜ್ವರದಿಂದ ಬಳಲುತ್ತಿದ್ದವರಿಗಾಗಿ ಗ್ರಾಮದಲ್ಲೇ ಜ್ವರ ಚಿಕಿತ್ಸಾ ಕೇಂದ್ರ ತೆರೆದು ಚಿಕಿತ್ಸೆ ನೀಡಲಾಗುತ್ತಿದೆ.

'ಐದು ದಿನಗಳವರೆಗೂ ಕೇಂದ್ರದಲ್ಲಿ ಪ್ರತಿಯೊಬ್ಬರನ್ನೂ ತಪಾಸಣೆಗೊಳಪಡಿಸಿ ಸೂಕ್ತ ಚಿಕಿತ್ಸೆ ನೀಡಲಾಗುವುದು' ಎಂದು ಮುಸ್ಲಲಗುಮ್ಮಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿ ಡಾ.ಬಿ. ಜಬೀವುಲ್ಲಾ ಹೇಳಿದರು.

ಆರೋಗ್ಯ ಇಲಾಖೆಯ ಸಿಬ್ಬಂದಿ ಜತೆ ರೇಖಲಗೆರೆ ಗಾಮಕ್ಕೆ ಸೋಮವಾರ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿ ಅವರು ಮಾತನಾಡಿದರು. ಗ್ರಾಮದಲ್ಲಿ ಸ್ವಚ್ಛತೆ ಕೊರತೆಯ ಕಾರಣ ಜ್ವರಪೀಡಿತರ ಸಂಖ್ಯೆ ಹೆಚ್ಚಾಗಿದೆ. ಸಮಸ್ಯೆ ಇರುವವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು.

ಗ್ರಾಮದಲ್ಲಿರುವ ಚರಂಡಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬ್ಲೀಚಿಂಗ್ ಪೌಡರ್ ಸಿಂಪಡಣೆ, ತ್ಯಾಜ್ಯ ವಿಲೇವಾರಿ, ಕೊಳಚೆನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲು ಮಲ್ಲೂರಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಲಾಗಿದೆ.



ನಾಯಕನಹಟ್ಟಿ ಸಮೀಪದ ರೇಖಲಗೆರೆ ಗಾಮಕ್ಕೆ ಸೋಮವಾರ ಆರೋಗ್ಯ ಇಲಾಖೆಯ ಸಿಬ್ಬಂದಿ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿದರು.

ಪ್ರತಿ ಮನೆಯ ನೀರಿನ ತೊಟ್ಟಿಗಳಲ್ಲಿ ಲಾರ್ವಾ ಸಮೀಕ್ಷೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

'ರೇಖಲಗೆರೆ ಗ್ರಾಮದಲ್ಲಿ ಸ್ವಚ್ಛತೆ ಕೊರತೆಯಿಂದ ಸೊಳ್ಳೆಗಳ ಹಾವಳಿ; 15 ಜನರಿಗೆ ಡೆಂಗಿ, ಟೈಫಾಯಿಡ್' ಶೀರ್ಷಿಕೆ ಅಡಿ 'ಪ್ರಜಾವಾಣಿ'ಯಲ್ಲಿ ಸೋಮವಾರ ವರದಿ ಪ್ರಕಟಗೊಂಡಿತ್ತು. ಎಚ್ಚೆತ್ತ ಆರೋಗ್ಯ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಂಡಿದ್ದಾರೆ.

ಛತ್ತೀಸ್‌ಗಡದಲ್ಲಿ ಗೃಹ ಸಚಿವ ಅಮಿತ್ ಶಾ: ನಿರ್ಣಾಯಕ ಹಂತದವರೆಗೆ ಕಾರ್ಯಾಚರಣೆ

## 'ಧೃತಿಗೆಡುವುದಿಲ್ಲ, ಹೋರಾಟ ನಿಲ್ಲುವುದಿಲ್ಲ'

ನವದೆಹಲಿ: 'ನಕ್ಸಲರ ದಾಳಿಯಿಂದ ಧೃತಿಗೆಡುವ ಪ್ರಶ್ನೆಯೇ ಇಲ್ಲ. ನಕ್ಸಲರ ಪಿಡುಗು ಹತ್ತಿಕ್ಕಲು ಭದ್ರತಾ ಪಡೆಗಳು ಕಾರ್ಯಾಚರಣೆ ಚುರುಕುಗೊಳಿಸಲಿದ್ದು, ಹೋರಾಟವನ್ನು ನಿರ್ಣಾಯಕ ಹಂತಕ್ಕೆ ಒಯ್ಯಲಾಗುವುದು' ಎಂದು ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದರು.

ಛತ್ತೀಸಗಡದ ಜಗದಲ್‌ಪುರ್‌ದಲ್ಲಿ ಅವರು ಮುಖ್ಯಮಂತ್ರಿ ಭೂಪೇಶ್ ಬಾಘೆಲ್ ಮತ್ತು ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದ ಸಭೆಯಲ್ಲಿ ಪರಿಸ್ಥಿತಿ ಕುರಿತು ಚರ್ಚಿಸಿದರು. ನಕ್ಸಲರ ಪ್ರಾಬಲ್ಯವಿದೆ ಎನ್ನಲಾದ ರಾಜ್ಯದ ಬಾಸ್ತರ್ ವಲಯಕ್ಕೆ ಇದು ಕೇಂದ್ರ ಗೃಹ ಸಚಿವರ ಮೊದಲ ಭೇಟಿಯಾಗಿದೆ.

ಈ ಮಧ್ಯೆ, 22 ಮಂದಿ ಸಾವಿಗೆ ಕಾರಣವಾದ ಗುಂಡಿನ ದಾಳಿ ನಂತರ ಕೋಬ್ರಾ ಪಡೆಯ ಕಮಾಂಡೊ ಅನ್ನು ಅಪಹರಿಸಲಾಗಿದೆ ಎಂದು ನಕ್ಸಲರು ಹೇಳಿಕೊಂಡಿದ್ದಾರೆ. ಘಟನೆಯಲ್ಲಿ 22 ಮಂದಿ ಮೃತಪಟ್ಟಿದ್ದು, 31ಮಂದಿ ಗಾಯಗೊಂಡಿದ್ದರು. ಕೋಬ್ರಾ ಕಮಾಂಡೊ ರಾಕೇಶ್ವರ ಸಿಂಗ್ ಮಿನ್ಹಾಸ್ ಎಂಬವರು ನಾಪತ್ತೆಯಾಗಿದ್ದರು.



ನಕ್ಸಲ್ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಸೋಮವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಛತ್ತೀಸಗಡದ ಜಗ್‌ದಲ್ ಪುರದಲ್ಲಿ ಗೌರವ ಸಲ್ಲಿಸಿದರು

ಜಗದಲ್‌ಪುರದಲ್ಲಿ ಸಭೆಯ ನಂತರ ಅಮಿತ್ ಶಾ ಅವರು, 'ನಕ್ಸಲರ ವಿರುದ್ಧದ ಈ ಹೋರಾಟ ನಿಲ್ಲುವುದಿಲ್ಲ ಎಂದು ತಿಳಿಸಲು ಬಯಸುತ್ತೇನೆ. ಅಂತ್ಯದಲ್ಲಿ ಖಂಡಿತವಾಗಿ ನಮಗೆ ಗೆಲುವು ಸಿಗಲಿದೆ' ಎಂದು ಆಶಿಸಿದರು.

ರಾಜ್ಯದ ಎಲ್ಲ ಸಂಸದರು, ಮುಖ್ಯಮಂತ್ರಿ ಮತ್ತು ಬುಡಕಟ್ಟು ವರ್ಗದ ಜನಪ್ರತಿನಿಧಿಗಳ ಸಲಹೆಗಳನ್ನು ಪರಿಗಣಿಸಿದ ನಂತರವೇ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ ಎಂದರು.

### 'ರೂಪುರೇಷೆ ಇಲ್ಲದ ಕಾರ್ಯಾಚರಣೆ'

ನವದೆಹಲಿ: 22 ಮಂದಿ ಭದ್ರತಾ ಸಿಬ್ಬಂದಿಯ ಸಾವಿಗೆ ಕಾರಣವಾದ ನಕ್ಸಲರ ವಿರುದ್ಧದ ಕಾರ್ಯಾಚರಣೆ ಅಸಮರ್ಥವಾಗಿದ್ದು, ಇದರ ರೂಪುರೇಷೆಯೂ ಸಮರ್ಪಕವಾಗಿರಲಿಲ್ಲ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ನಮ್ಮ ಯೋಧರು ಎಂದೂ ಬಂದೂಕುಗಳಿಗೆ ಆಹಾರವಾಗಿ ಸ್ವ ಇಚ್ಛೆಯಿಂದ ಹುತಾತ್ಮರಾಗುವಂತಹ ಮನಸ್ಥಿತಿಯುಳ್ಳವರಲ್ಲ' ಎಂದು ಹೇಳಿದ್ದಾರೆ.



ಚರಕಾಚಾರ್ಯರ ಪ್ರಕಾರ, ನಿದ್ರೆ ಮನುಷ್ಯನ ಸಂತೋಷ, ನೆಮ್ಮದಿ, ದುಃಖ, ದೇಹದ ಪೌಷ್ಟಿಕತೆ, ಕೃಶತೆ, ಬಲ, ದೃಢತೆ, ಜ್ಞಾನ, ಮೂಢತ್ವ, ಜೀವ, ಮರಣಗಳಿಗೆ ಕಾರಣ.

# ನಿದ್ದೆಗೆಟ್ಟೋ ಬುದ್ಧಿಗೆಟ್ಟೋ

ಡಾ. ಅನಿತಾ ರವಿ

ಇಂದು ನಾವು ನಿದ್ರೆಗೆ ಸಾಕಷ್ಟು ಸಮಯವನ್ನು ಕೊಡುತ್ತಿಲ್ಲ. ಆಯುರ್ವೇದದ ರೀತ್ಯಾ, ಆರೋಗ್ಯಯುತ ಜೀವನದ ಮೂರು ತಳಹದಿಗಳು: ಆಹಾರ, ಸಾತ್ವಿಕ ಜೀವನ ಮತ್ತು ನಿದ್ರೆ.

## ನಿದ್ರೆಯ ಆವಶ್ಯಕತೆ


ನಿದ್ರೆ ಮನುಷ್ಯನ ದೈಹಿಕ–ಮಾನಸಿಕ ವಿಶ್ರಾಂತಿಯ ಸಮಯ. ಈ ಸಮಯದಲ್ಲೇ ದೇಹದಲ್ಲಿನ ಪ್ರತಿಯೊಂದು ಜೀವಕೋಶಗಳು ಪುನರ್ಜೀವಿತಗೊಳ್ಳುತ್ತಿರುತ್ತವೆ. ಸಹಜವಾಗಿ ಒಬ್ಬ ಮನುಷ್ಯನಿಗೆ 7–8 ಗಂಟೆಗಳ ಸುಖನಿದ್ರೆ ಅತ್ಯವಶ್ಯಕ. ಮಕ್ಕಳಿಗೆ ಸುಮಾರು 10–15 ಗಂಟೆಗಳ ನಿದ್ರೆ ಬೇಕಾಗುತ್ತದೆ. ಈ ಸಮಯದಲ್ಲಿ ಅವರಲ್ಲಿ ಅಗ್ರೋತ್ ಹಾರ್ಮೋನ್ ಎಂಬ ರಾಸಾಯನಿಕ ಅಧಿಕ ಪ್ರಮಾಣದಲ್ಲಿ ಬಿಡುಗಡೆಯಾಗಿ ಅವರ ಸಂಪೂರ್ಣ ಬೆಳವಣಿಗೆಗೆ ಕಾರಣವಾಗುತ್ತದೆ. ಹಾಗೆಯೇ ಒತ್ತಡ ಉಂಟಾದಾಗ ಬಿಡುಗಡೆಯಾಗುವ ಹಾರ್ಮೋನ್ ಅತಿ ಕಡಿಮೆ ಪ್ರಮಾಣದಲ್ಲಿ ಬಿಡುಗಡೆಯಾಗುತ್ತದೆ. ಹಸಿವನ್ನು ಹತೋಟಿಯಲ್ಲಿಡುವ ಹಾರ್ಮೋನ್‌ಗಳು, ದೇಹ, ಮನಸ್ಸನ್ನು ಸುಸ್ಥಿತಿಯಲ್ಲಿಡುವ ವಿಷಯಗಳೆಲ್ಲವೂ ಸುಖನಿದ್ರೆಯನ್ನು ಸಂಪೂರ್ಣವಾಗಿ ಅವಲಂಬಿಸಿವೆ.

## ಹೇಗೆ ಮಾಡಬೇಕು?

- ರಾತ್ರಿ ಮಲಗುವ ಎರಡು ಗಂಟೆಗಳ ಮೊದಲೇ ಲಘು ಆಹಾರವನ್ನು ಸೇವಿಸಿರಬೇಕು.
- ಊಟವಾದ ನಂತರ ಗಾಳಿಗೆ ಮೈಯೊಡ್ಡಿ ನೂರು ಹೆಜ್ಜೆ ನಡೆಯಬೇಕು.
- ಸದಭಿರುಚಿಯ ಪುಸ್ತಕಗಳನ್ನು ಓದಿಯೋ, ಆಹ್ಲಾದವೀಯುವ ಸಂಗೀತವನ್ನು ಆಲಿಸಿಯೋ ನಿದ್ರೆಗೆ ತಯಾರಾಗಬೇಕು.
- ಮಲಗುವ ಕೋಣೆಯಲ್ಲಿ ಆದಷ್ಟು ನೈಸರ್ಗಿಕವಾಗಿ ಗಾಳಿ ಬೀಸುವ ಹಾಗೆ ಕಿಟಕಿಗಳನ್ನು ತೆರೆದಿಡಬೇಕು.
- ನಿಗದಿತ ಸಮಯದಲ್ಲೇ ಪ್ರತಿರಾತ್ರಿಯೂ ಮಲಗಿ ಬೆಳಗ್ಗೆ ಬೇಗ ನಿಗದಿತ ಸಮಯದಲ್ಲೇ ಏಳಬೇಕು.
- ರಾತ್ರಿ ಮಲಗುವಾಗ ನಮ್ಮ ಎಡಬದಿಗೆ ಮಲಗುವ ಅಭ್ಯಾಸವನ್ನು ಮಾಡಿಕೊಳ್ಳಬೇಕು.
- ಮೊಬೈಲ್, ಟಿ.ವಿ. ನೋಡುತ್ತಾ ಎಲ್ಲೆಂದರಲ್ಲಿ ಮಲಗಬಾರದು.
- ಹಗಲು ನಿದ್ರೆ ಮಾಡಿದಲ್ಲಿ ರಾತ್ರಿ ಮಲಗಿದ ಕೂಡಲೇ ನಿದ್ರೆ ಬರುವುದಿಲ್ಲ. ಮುಸ್ಸಂಜೆಯ ನಿದ್ರೆ, ಹಗಲುನಿದ್ರೆಗಳು ಅನಾರೋಗ್ಯಕರ ಅಭ್ಯಾಸ.
- ಎಳೆಯ ಮಕ್ಕಳಿಗೆ, ವೃದ್ಧರಿಗೆ, ಅಶಕ್ತರಿಗೆ, ಹಗಲು ನಿದ್ರೆಗೆ ಅವಕಾಶವಿದೆ. ದೈಹಿಕವಾಗಿ ಅತ್ಯಂತ ಶ್ರಮವುಂಟಾದಾಗ, ರಾತ್ರಿನಿದ್ರೆ ಮಾಡಲು ಆಗದೇ ಇರುವ ಸಂದರ್ಭಗಳಲ್ಲಿ, ಗ್ರೀಷ್ಮಋತುವಿನಲ್ಲಿ ಮಾರನೇ ದಿವಸ ಊಟ ತಿಂಡಿ ಮಾಡುವ ಮೊದಲು ಒಂದು ಚಿಕ್ಕ ಹಗಲುನಿದ್ರೆಗೆ ಅವಕಾಶವಿದೆ.
- ಕೆಲವರಿಗೆ ಐದು ಗಂಟೆಗಳ ನಿದ್ರೆ ಸಾಕಾಗುತ್ತದೆ. ವೃದ್ಧರಿಗೂ ರಾತ್ರಿ ನಿದ್ರೆ ಸ್ವಲ್ಪ ಕಡಿಮೆಯೇ. ಆದರೆ ಅದರಿಂದ ಯಾವುದೇ ಮಾನಸಿಕ, ದೈಹಿಕ ತೊಂದರೆಗಳಾಗದಿದ್ದಲ್ಲಿ ಅದು ವಯೋಸಹಜ ಕ್ರಿಯೆ.
- ಪ್ರತಿಯೊಬ್ಬರೂ 7–8 ಗಂಟೆಗಳ ಸುಖನಿದ್ರೆಯನ್ನು ಅನುಭವಿಸಲೇಬೇಕು.

## ನಿದ್ರಾಹೀನತೆಯಿಂದ ಆಗುವ ತೊಂದರೆಗಳು


- ಮಾನಸಿಕ ಒತ್ತಡ, ಭಯ, ಕೋಪ, ಆತಂಕ, ಅತಿಯಾದ ವ್ಯಾಯಾಮ, ದೈಹಿಕ ಶ್ರಮ, ಉಪವಾಸ, ಕಡಿಮೆ ಆಹಾರ ಸೇವಿಸುವುದು – ಇವೆಲ್ಲವೂ ನಿದ್ರಾಹೀನತೆಗೆ ಪ್ರಮುಖ ಕಾರಣಗಳು.
- ಸರಿಯಾದ ಪ್ರಮಾಣದ ನಿದ್ರೆ ಆಗದೇ ಇದ್ದಾಗ ಮಾನಸಿಕವಾಗಿ ಕಿರಿಕಿರಿ, ಒತ್ತಡ, ಉತ್ಸಾಹಹೀನತೆ, ತಲೆನೋವು, ತಲೆಭಾರ, ಅತಿಯಾದ ಆಕಳಿಕೆ, ಬಳಲಿಕೆ, ಶೀಘ್ರ ಕೋಪ, ಅಜೀರ್ಣಗಳು ಉಂಟಾಗುತ್ತವೆ.
- ದೇಹದ ರೋಗನಿರೋಧಕ ಶಕ್ತಿ ಮತ್ತು ನಿದ್ರೆಗಳೆರಡೂ ಒಂದಕ್ಕೊಂದು ಪೂರಕವಾಗಿದೆ. ಆವಶ್ಯಕತೆಗಿಂತ ಕಡಿಮೆ ನಿದ್ರೆ ದೇಹದಲ್ಲಿ ಅನೇಕ ಸೋಂಕು ರೋಗಗಳ ಉಲ್ಬಣಕ್ಕೆ ಕಾರಣವಾಗುತ್ತದೆ.
- ರಾತ್ರಿಯ ಸಹಜ ನಿದ್ರೆಯ ಸಮಯ ಮುಖ್ಯವಾಗಿ ಮಿದುಳು ಮತ್ತು ಹೃದಯದ ವಿಶ್ರಾಂತಿಯ ಕಾಲ. ನಾಡಿಮಿಡಿತ, ಉಸಿರಾಟಗಳು ನಿಧಾನವಾಗಿ ತಮ್ಮ ಕೆಲಸಗಳನ್ನು ಒತ್ತಡವಿಲ್ಲದೆ ಮಾಡುವ ಸಮಯ, ಈ ಸಮಯದಲ್ಲಿ ಕೆಲಸದ ಒತ್ತಡದಿಂದಲೂ ಮತ್ತಾವುದೋ ಕಾರಣಗಳಿಂದ ಎಚ್ಚರವಾಗಿದ್ದರೆ ಅದು ರಕ್ತದೊತ್ತಡ, ಭ್ರಮೆ, ಪಾರ್ಶ್ವವಾಯು, ಹೃದಯಸಂಬಂಧಿ ರೋಗಗಳನ್ನು ಆಹ್ವಾನಿಸುತ್ತದೆ; ಹಾರ್ಮೋನುಗಳ ವೈಪರೀತ್ಯ ಉಂಟಾಗಿ ಪಿಸಿಓಎಸ್, ಹೈಪೊಥೈರಾಡಿಸಮ್, ಡಯಾಬಿಟಿಸ್, ಮಾನಸಿಕ ರೋಗಗಳು, ಬೊಜ್ಜುಗಳಿಗೆ ಅವಕಾಶವನ್ನು ಒದಗಿಸುತ್ತದೆ. ಚರಕಾಚಾರ್ಯರು ಸ್ಥೌಲ್ಯಕ್ಕೆ (ಬೊಜ್ಜು – Obesity) ಮುಖ್ಯ ಕಾರಣವೇ ನಿದ್ರಾಹೀನತೆ ಎಂದಿದ್ದಾರೆ.
- ನಿದ್ರೆಯನ್ನು ಆವಶ್ಯಕತೆಗಿಂತ ಹೆಚ್ಚು ಮಾಡುವುದು, ಹಗಲುನಿದ್ರೆ, ಊಟದ ನಂತರ ಮಲಗುವುದು – ಇವು ಕೂಡ ಅನಾರೋಗ್ಯಕ್ಕೆ ಕಾರಣಗಳು.



## ನಿದ್ರಾಹೀನತೆಗೆ ಪರಿಹಾರಗಳು

- ಶಿಸ್ತಿನ ಜೀವನವನ್ನು ರೂಢಿಸಿಕೊಳ್ಳುವುದು.
- ಮಾನಸಿಕ ಒತ್ತಡವನ್ನು, ಧ್ಯಾನ, ಪ್ರಾಣಾಯಾಮಾದಿಗಳ ಸಹಾಯದಿಂದ ಕಡಿಮೆ ಮಾಡಿಕೊಳ್ಳುವುದು.
- ಪಾದಾಭ್ಯಂಗ, ಅಭ್ಯಂಗ - ದೇಹಕ್ಕೆ ಎಣ್ಣೆಯ ಮಸಾಜ್ ಮಾಡುವುದು.
- ತಲೆಗೆ ಪ್ರತಿ ದಿವಸ ಎಣ್ಣೆ ಹಚ್ಚುವುದು.
- ದೇಹದ ಶಕ್ತಿಗನುಸಾರವಾಗಿ ವ್ಯಾಯಾಮಾದಿಗಳನ್ನು ಮಾಡುವುದು.
- ರಾತ್ರಿಯ ಊಟದಲ್ಲಿ ಹಾಲನ್ನ, ಮೊಸರು ಬಳಸುವುದು.
- ಆಕಳ/ ಎಮ್ಮೆಯ ಹಾಲನ್ನು ಬೆಲ್ಲ ಹಾಕಿ ಸೇವಿಸುವುದು.
- ತರಕಾರಿಗಳ ಬಿಸಿಯಾದ ಸೂಪ, ಮಾಂಸರಸ ಸೇವನೆ.
- ರಾತ್ರಿ ಮಲಗುವ ಒಂದು ಗಂಟೆ ಮೊದಲು ಮೊಬೈಲನ್ನು ಬಳಸದಿರುವುದು.
- ರಾತ್ರಿಯಲ್ಲಿ ಚಹಾ, ಕಾಫಿ, ಆಲ್ಕೋಹಾಲ್‌ಗಳನ್ನು ಸೇವಿಸದಿರುವುದು.
- ನಿಗದಿತ ಸಮಯದಲ್ಲಿ ಮಲಗುವುದು.





# ಬೇಸಿಗೆ ಇರಲಿ ಎಚ್ಚರ

ಡಾ. ಮೈತ್ರಿ ಅಡಿಗ

**ಚಳಿಗಾಲ ಬಂದಾಗ 'ಎಷ್ಟು ಚಳಿ?' ಎಂದರು**
**ಬಂತಲ್ಲ ಬೇಸಿಗೆ, 'ಕೆಟ್ಟಬಿಸಿಲ್' ಎಂದರು**
**ಮಳೆ ಬಿತ್ತೊ, 'ಬಿಡದಲ್ಲ ಶನಿ!' ಟೀಕೆ**
**ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!**

ಪ್ರತಿಯೊಂದು ಕಾಲ ಬದಲಾದಾಗಲೂ ಕೆ. ಎಸ್. ನರಸಿಂಹಸ್ವಾಮಿಯವರ ಈ ಪದ್ಯ ನೆನಪಾಗುತ್ತದೆ. ಕಾಲ ಕಾಲಕ್ಕೆ ತಕ್ಕಂತೆ ನಮ್ಮ ಆಹಾರ, ಬಟ್ಟೆ, ಜೀವನಶೈಲಿಯನ್ನು ಬದಲಾಯಿಸಿಕೊಂಡರೆ ಎಲ್ಲ ಕಾಲವನ್ನೂ ಸಂತೋಷದಿಂದ ಬರ ಮಾಡಿಕೊಂಡು ಅರೋಗ್ಯವನ್ನು ಕಾಪಾಡಿಕೊಳ್ಳಬಹುದು. ಬೇಸಿಗೆಯ ಬೇಗೆ ಏರುತ್ತಿರುವಾಗ ಮನೆಯಲ್ಲಿ ನಾವು ತೆಗೆದುಕೊಳ್ಳಬಹುದಾದ ಕೆಲವು ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿದುಕೊಳ್ಳೋಣ.

- ವಯಸ್ಸಾದಂತೆ ಚಳಿ ಅಥವಾ ಸೆಖೆಯನ್ನು ತಡೆದುಕೊಳ್ಳುವ ಶಕ್ತಿ ಕುಗ್ಗುತ್ತದೆ. ಆದ್ದರಿಂದ 55 ವರ್ಷ ಮೇಲ್ಪಟ್ಟವರು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಬಿಸಿಲಿನಲ್ಲಿ ಓಡಾಡುವುದು ಒಳಿತಲ್ಲ. ಹೊರ ಹೋಗುವಾಗ ಟೋಪಿ, ಸನ್‌ಗ್ಲಾಸನ್ನು ಧರಿಸಿ ಹೋಗುವುದರಿಂದ ಬಿಸಿಲಿನಿಂದಾಗುವ ತಲೆನೋವು ಬರದಂತೆ ನೋಡಿಕೊಳ್ಳಬಹುದು. ಹೀಟ್ ಸ್ಟ್ರೋಕನ್ನು ತಪ್ಪಿಸಿಕೊಳ್ಳಲು ಪ್ರತಿದಿನ 2-3 ಲೀ.ಗಳಷ್ಟು ನೀರು/ಮನೆಯಲ್ಲಿ ತಯಾರಿಸಿದ ಲಿಂಬೆ, ಪುದಿನ ಪಾನಾಕ/ಹಣ್ಣಿನ ರಸ ಸೇವಿಸಬೇಕು. ಕಲ್ಲಂಗಡಿ, ಕರಬೂಜ ಮುಂತಾದ ನೀರಿನಂಶ ಜಾಸ್ತಿ ಇರುವ ಹಣ್ಣುಗಳನ್ನು ಸೇವಿಸಬೇಕು. ತೆಳುಹತ್ತಿಯ ಬಟ್ಟೆಗಳನ್ನು ಧರಿಸಬೇಕು. ತಂಪಾದ ಜಾಗದಲ್ಲಿ ಸಮಯ ಕಳೆಯಬೇಕು.
- ಬಿಸಿಲಿನಲ್ಲಿ ಹೂವಿನ ಪರಾಗಗಳು ಗಾಳಿಯಲ್ಲಿ ಹೆಚ್ಚಾಗಿರುತ್ತವೆ. ಆದ್ದರಿಂದ ಅಲರ್ಜಿ ಜಾಸ್ತಿ ಇರುವವರು ಬೇಸಿಗೆಯಲ್ಲಿ ಗಿಡಗಳ ಹತ್ತಿರ ಹೋಗದಿರುವುದು, ಹೂವು ಕೀಳದಿರುವುದು ಒಳಿತು. ಹೇ ಫೀವರ್(ಬೇಸಿಗೆ ಗೂರಲು) ಕಾಣಿಸಿಕೊಳ್ಳಬಹುದು; ಕಣ್ಣಿನ ತುರಿಕೆ, ನೀರಾಡುವುದು, ಹೆಚ್ಚು ಸೀನುವುದು ಇದರ ಲಕ್ಷಣಗಳು. ಅಲರ್ಜಿ ದೇಹದವರಲ್ಲಿ ಅಸ್ತಮಾ ತರಹದ ಲಕ್ಷಣಗಳೂ ಕಾಣಿಸಿಕೊಳ್ಳಬಹುದು. ಮನೆಯ ಹೊರಗೆ ಮಾಸ್ಕ್ ಧರಿಸಿ ಓಡಾಡಿದರೆ ಪರಾಗ ಹಾಗೂ ಕೊರೊನಾ ಎರಡರಿಂದಲೂ ರಕ್ಷಿಸಿಕೊಳ್ಳಬಹುದು.
- ಚಳಿಗಾಲದಲ್ಲಿ ಚರ್ಮ ಒಡೆಯದಂತೆ ಕಾಪಾಡಿ ಸುಸ್ತಾಗಿದ್ದಾಗಲೇ ಬೇಸಿಗೆಯ ಬಿಸಿಗೆ ಚರ್ಮ ಸುಟ್ಟುಹೋಗದಂತೆ ಕಾಪಾಡಬೇಕು. ಸನ್‌ಸ್ಕ್ರೀನ್ ಲೋಷನ್ ಅನ್ನು ಸೂರ್ಯನ ಬಿಸಿಗೆ ಚರ್ಮ ತಾಕಿಸುವ 20 ನಿಮಿಷ ಮುನ್ನ ಮುಖ, ಕೈ, ಕಾಲುಗಳಿಗೆ ಲೇಪಿಸಿಕೊಂಡು ನಂತರ ಹೊರ ಹೊರಟರೆ ಚರ್ಮಕ್ಕೆ ಮನಸ್ಸಿಗೆ ಎರಡಕ್ಕೂ ಹಿತ.
- ಬಿಸಿಲ ಬೇಗೆ ತಪ್ಪಿಸಿಕೊಳ್ಳುವ ಧಾವಂತದಲ್ಲಿ ಜಾಗ್ರತೆ ಇಲ್ಲದೆ ಈಜುಕೊಳಕ್ಕೆ ಹೋದರೆ ಅಪಾಯವೇ ಜಾಸ್ತಿ. ಜನ ಜಾಸ್ತಿಯಾದಂತೆ ಸಾರ್ವಜನಿಕ ಈಜುಕೊಳ ಬ್ಯಾಕ್ಟೀರಿಯಾಗಳ ಅಡಗುತಾಣವಾಗುತ್ತದೆ. ಈಜುವಾಗ ಗೊತ್ತಿಲ್ಲದೇ ಕುಡಿದ ನೀರುಭೇದಿ, ಹೊಟ್ಟೆನೋವು ಮುಂತಾದ ಹಲವು ಸಮಸ್ಯೆಗಳಿಗೆ ದಾರಿಮಾಡುತ್ತದೆ. ನೀರು ಕಿವಿಯೊಳಗೆ ಹೋದರೆ, ಕಿವಿಗೆ ಸೋಂಕು ತಗುಲಿ ಕಿವಿನೋವು, ಕಿವಿ ಸೋರುವುದು ಮುಂತಾದ ಸಮಸ್ಯೆಗಳು ಎದುರಾಗಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

# JAZZ POEM II

## By Carl Wendall Hines



ಇಂಗ್ಲಿಷ್

ಎಸ್ಸೆಸ್ಸೆಲ್ಸಿ

**Jazz poem II** is one of the beautiful poems written by Carl Wendall Hines. This poem gives us a description of the pathetic Jazz player. Jazz is a kind of music played in African countries.

In the beginning, the poet compares the Jazz player to a black Ancient Mariner. With the physical appearance of the Jazz player, we can easily understand that he lost interest in his life and he had a lot of sorrows in his life. His face was very old, wrinkled, rough, and unshaven. He turned his head downwards; he did not want to see the world. His eyes were also closed. He had worn an old blue shirt which turned dark with its sweat; the collar of the shirt was also frayed. His necktie dropped loosely down. His jacket was also old and torn which was used only to hold his sagging stomach.

His run-down shoes were filled with paper in them. He stood alone with the head downwards and eyes closed.

He had a musical instrument, saxophone across his chest, supported from the neck with a wire coat hanger. Slowly he lifts the saxophone and started to play the music.

Through his music, he told the whole world that he is a black man. He was sent there by God to preach the black gospel of Jazz. He told everything its screaming notes.

To the surprise we can notice that whenever the Jazz player plays the music, he feels enthusiastic, he says that he is no hunger a man, not even a black man, but he feels that he is a bird, that flies freely higher and higher. But when he stops the music, he is again a black man with lots of agony in his heart. Thus we can see dual personality in the Jazz player in this poem.



# ಗ್ಲುಕೋಸ್


(ಮುಂದುವರಿದ ಭಾಗ)

ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ

**ಗ್ಲುಕೋಸ್‌ನ್ನು** ಸರಿಯಾಗಿ D(+) ಗ್ಲುಕೋಸ್ ಎಂದು ಹೆಸರಿಸಲಾಗಿದೆ. ಗ್ಲುಕೋಸ್‌ನ ಹೆಸರಿನ ಮೊದಲು ಇರುವ D ಅಕ್ಷರವು ಸಂರಚನೆಯನ್ನು ಪ್ರತಿನಿಧಿಸುತ್ತವೆ. ಹಾಗೆಯೇ (+) ಗ್ಲುಕೋಸ್ ಅಣುವಿನ ಬಲ ಭ್ರಾಮಕ ಗುಣವನ್ನು ಪ್ರತಿನಿಧಿಸುತ್ತದೆ. D ಮತ್ತು L ಗಳು ಸಂಯುಕ್ತದ ದ್ಯುತಿ ಪಟುತ್ವದೊಡನೆ ಯಾವುದೇ ಸಂಬಂಧ ಹೊಂದಿರುವುದಿಲ್ಲ ಎನ್ನುವುದನ್ನು ನೆನಪಿಡಬಹುದು. D ಮತ್ತು L ಸಂಕೇತಗಳ ಅರ್ಥವನ್ನು ಈ ಕೆಳಗಿನಂತೆ ನೀಡಿದೆ.


D ಮತ್ತು L ಅಕ್ಷರಗಳು ಯಾವುದೇ ಸಂಯುಕ್ತಗಳ ಹೆಸರಿನ ಮೊದಲು ಇರುವುದು ನಿರ್ದಿಷ್ಟ ಸ್ಟೀರಿಯೋ ಐಸೊಮರ್‌ನ ತುಲನಾತ್ಮಕ ಸಂರಚನೆಯನ್ನು ಸೂಚಿಸುತ್ತದೆ. ಗ್ಲಿಸರಾಲ್ಡಿಹೈಡ್ ಒಂದು ಅಸಮ್ಮಿತೀಯ ಇಂಗಾಲದ ಪರಮಾಣುವನ್ನು ಹೊಂದಿರುತ್ತದೆ ಮತ್ತು ಎರಡು ಪ್ರತ್ಯಂಗಿಗಳ ರೂಪದಲ್ಲಿ ಈ ಕೆಳಗಿನಂತೆ ಅಸ್ತಿತ್ವದಲ್ಲಿರುತ್ತದೆ.





ಗ್ಲಿಸರಾಲ್ಡಿಹೈಡ್ ಗ್ಲಿಸರಾಲ್ಡಿಹೈಡ್

ಗ್ಲುಕೋಸ್‌ನ ರಚನೆ 1 ಅದರ ಬಹುತೇಕ ಗುಣಧರ್ಮಗಳನ್ನು ವಿವರಿಸುತ್ತದೆ. ಆದರೆ ಮುಂದಿನ ಪ್ರತಿಕ್ರಿಯೆ ಮತ್ತು ವಾಸ್ತವಾಂಶವನ್ನು ಈ ರಚನೆಯಿಂದ ವಿವರಿಸಲು ಸಾಧ್ಯವಿಲ್ಲ.

1. ಅಲ್ಡಿಹೈಡಿಕ್ ಗುಂಪನ್ನು ಹೊಂದಿದ್ದರೂ ಸಹ, ಗ್ಲುಕೋಸ್ ಸ್ಕಿಫ್ಸನ ಪರೀಕ್ಷೆಯನ್ನು ತೋರಿಸುವುದಿಲ್ಲ ಮತ್ತು $NaHS0_3$ ಯೊಡನೆ ವರ್ತಿಸಿ ಹೈಡ್ರೋಜನ್ ಸಲ್ಫೈಟ್‌ನ ಉತ್ಪನ್ನವನ್ನು ಉಂಟುಮಾಡುವುದಿಲ್ಲ.
2. ಗ್ಲುಕೋಸ್‌ನ ಪೆಂಟಾಲಿಸಿಟೇಟ್ ಹೈಡ್ರೋಕ್ಷಿಲಮೈನ್‌ನ ಜೊತೆ ವರ್ತಿಸದೇ ಇರುವುದು ಸ್ವತಂತ್ರ –CHO ಗುಂಪಿನ ಅನುಪಸ್ಥಿತಿಯನ್ನು ಸೂಚಿಸುತ್ತದೆ.
3. ಗ್ಲುಕೋಸ್ ಎರಡು ವಿಧದ ಸ್ಫಟಿಕ ರೂಪದಲ್ಲಿ ಇರುವುದು ಕಂಡು ಬಂದಿದ್ದು, ಅವುಗಳನ್ನು $\alpha$ and $\beta$ ಎಂದು ಹೆಸರಿಸಲಾಗಿದೆ. ಗ್ಲುಕೋಸ್‌ನ $\alpha$ ರೂಪ $(m.p. 419k)$ ವನ್ನು ಸಾರೀಕೃತ ಗ್ಲುಕೋಸ್‌ನ ದ್ರಾವಣವನ್ನು 371k ನಲ್ಲಿ ಸ್ಫಟಿಕೀಕರಣಗೊಳಿಸಿ ಪಡೆಯುವರು. ಹಾಗೆಯೇ ಗ್ಲುಕೋಸ್‌ನ ರೂಪ $(m.p. 423k)$ ವನ್ನು ಬಿಸಿ ಮತ್ತು ಗ್ಲುಕೋಸ್‌ನ ಪರ್ಯಾಪ್ತ ಜಲೀಯ ದ್ರಾವಣವನ್ನು 371k ನಲ್ಲಿ ಸ್ಫಟಿಕೀಕರಣಗೊಳಿಸಿ ಪಡೆಯುವರು.




ಈ ರೀತಿಯ ಸಮಾಂಗಿ (ಐಸೋಮರ್) ಗಳನ್ನು ಅಂದರೆ $\alpha$ and $\beta$ ರೂಪವನ್ನು ಆನೋಮರ್‌ಗಳು ಎನ್ನುವರು. ಗ್ಲುಕೋಸ್‌ನ ಇದು ಪರಮಾಣುವಿನ ಸೈಕ್ಲಿಕ್ ರಚನೆಯನ್ನು ಪೈರೆನೋಸ್ ರಚನೆ $(\alpha/\beta)$ ಎಂದು ಕರೆಯುವರು. ಗ್ಲುಕೋಸ್‌ನ ಸೈಕ್ಲಿಕ್ ರಚನೆಯನ್ನು ಈ ಕೆಳಗೆ ತೋರಿಸಿದಂತೆ ಹಾವರ್ಥನ ರಚನೆಯಲ್ಲಿ ಹೆಚ್ಚು ಸೂಕ್ತವಾಗಿ ಪ್ರತಿನಿಧಿಸಲಾಗಿದೆ.



α–D–(+) glucopyranose β–D–(+) glucopyranose

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

# ಅಭಿಮತ



**ಸುಭಾಷಿತ**

ಸಾಂಪ್ರದಾಯಿಕ ಸಮಾಜದ ವಿರುದ್ಧ ಬಂಡಾಯವೇಳದ ತರುಣರಲ್ಲಿ ತಾರುಣ್ಯವೇ ಇರಲಿಕ್ಕಿಲ್ಲವೆಂಬುದು ನನ್ನ ಭಾವನೆ.
-ಬಾಬು ಜಗಜೀವನರಾಂ

## ಕೋವಿಡ್ ಮಾರ್ಗಸೂಚಿ: ಸರ್ಕಾರದ ನಿಲುವು ಮತ್ತೆ ಮತ್ತೆ ಬದಲಾಗುವುದೇಕೆ?

**ಕೋವಿಡ್** ಮಾರ್ಗಸೂಚಿ ಜಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಾತು ಮತ್ತು ನಡವಳಿಕೆಗೆ ತಾಳಮೇಳ ಇರುವಂತೆ ಕಾಣಿಸುತ್ತಿಲ್ಲ. ಒಂದೆಡೆ ಮಾರ್ಗಸೂಚಿಯ ನಿರಂತರ ಪರಿಷ್ಕರಣೆ; ಮತ್ತೊಂದೆಡೆ, ಪ್ರಜಾಪ್ರತಿನಿಧಿಗಳಿಂದಲೇ ಮಾರ್ಗಸೂಚಿಯ ಉಲ್ಲಂಘನೆ. ಸಿನಿಮಾ ಮಂದಿರಗಳಲ್ಲಿ ಶೇ 50ರಷ್ಟು ಸೀಟುಗಳ ಭರ್ತಿಗೆ ಮಾತ್ರ ಅವಕಾಶ ಕಲ್ಪಿಸಿ ಆದೇಶ ಹೊರಡಿಸಿದ್ದ ಸರ್ಕಾರವು ಅದನ್ನು ಮರುದಿನವೇ ಪರಿಷ್ಕರಿಸಿ ಏಪ್ರಿಲ್ 7ರವರೆಗೆ ಯಥಾಸ್ಥಿತಿ ಮುಂದುವರಿಸಿದೆ. ಜಿಮ್‌ಗಳ ಕಾರ್ಯನಿರ್ವಹಣೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದ ಸರ್ಕಾರ, ಪರಿಷ್ಕೃತ ಆದೇಶದಲ್ಲಿ ಗರಿಷ್ಠ ಸಾಮರ್ಥ್ಯದ ಶೇ 50ರಷ್ಟು ಪ್ರವೇಶಕ್ಕೆ ಅನುಮತಿ ನೀಡಿದೆ. ಕೋವಿಡ್ ಮಾರ್ಗಸೂಚಿಗೆ ಸಂಬಂಧಿಸಿದಂತೆ ಸರ್ಕಾರದ ಈ ಗೊಂದಲ ಇಂದಿನದೇನೂ ಅಲ್ಲ. ಸಭಾಂಗಣದೊಳಗೆ ನಡೆಯುವ ಕಾರ್ಯಕ್ರಮಗಳಿಗೆ ಹಲವು ನಿರ್ಬಂಧಗಳನ್ನು ಹೇರಿದ್ದ ಸರ್ಕಾರ, ಹೊರಾಂಗಣ ಕಾರ್ಯಕ್ರಮಗಳ ಬಗ್ಗೆ ಉದಾರವಾಗಿತ್ತು. ಕಳೆದ ವರ್ಷ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಆರಂಭದಲ್ಲಿ ಅವಕಾಶವನ್ನು ನಿರಾಕರಿಸಿ, ನಂತರ ಷರತ್ತುಬದ್ಧ ಆಚರಣೆಗೆ ಅವಕಾಶ ಕಲ್ಪಿಸಿತ್ತು. ಮಾರ್ಗಸೂಚಿ ಜಾರಿಗೆ ಸಂಬಂಧಿಸಿದಂತೆ ಸರ್ಕಾರದ ಗೊಂದಲಗಳನ್ನು ಗಮನಿಸಿದರೆ, ಪರಿಣಾಮದ ಬಗ್ಗೆ ಯೋಚಿಸದೆ ವಿವೇಚನಾರಹಿತವಾಗಿ ನಿರ್ಧಾರ ಕೈಗೊಳ್ಳುತ್ತಿರುವಂತೆ ಕಾಣಿಸುತ್ತದೆ. ತನಗೇ ಗೊಂದಲ ಇರುವ ಮಾರ್ಗಸೂಚಿಯನ್ನು ಜನ ಪಾಲಿಸಬೇಕೆಂದು ಸರ್ಕಾರ ನಿರೀಕ್ಷಿಸುತ್ತಿದೆ. ಈ ಗೊಂದಲಗಳೊಂದಿಗೆ ಸರ್ಕಾರ ವಿಧಿಸಿದ ನಿರ್ಬಂಧಗಳನ್ನು ಜನಪ್ರತಿನಿಧಿಗಳೇ ಮುರಿಯುತ್ತಿರುವ ವಿರೋಧಾಭಾಸವನ್ನೂ ನೋಡುತ್ತಿದ್ದೇವೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭಾಗಿಯಾಗಿದ್ದ ಕಾಗಿನೆಲೆ ಕನಕಪೀಠದ ಹರಿಹರ ಬೆಳ್ಳೂಡಿ ಶಾಖಾಮಠದ ಕಾರ್ಯಕ್ರಮದಲ್ಲಿ ಕೋವಿಡ್ ಮಾರ್ಗಸೂಚಿ ಪಾಲನೆ ಆಗಿಲ್ಲದಿರುವುದನ್ನು ಮಾಧ್ಯಮಗಳಲ್ಲಿ ಪ್ರಕಟಗೊಂಡಿರುವ ಛಾಯಾಚಿತ್ರಗಳೇ ಹೇಳುವಂತಿವೆ. ಪ್ರಕರಣವೊಂದಕ್ಕೆ ಸಂಬಂಧಿಸಿದ ವಿಚಾರಣೆಯಲ್ಲಿ, ತಮ್ಮ ತಂದೆ-ತಾಯಿ ಕೊರೊನಾ ಸೋಂಕಿಗೆ ಒಳಗಾಗಿರುವುದರಿಂದ ಕ್ವಾರಂಟೈನ್‌ನಲ್ಲಿ ಇರುವುದಾಗಿ ವಕೀಲರ ಮೂಲಕ ನ್ಯಾಯಾಲಯಕ್ಕೆ ತಿಳಿಸಿದ್ದ ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅವರು ಪಕ್ಷದ ಕಾರ್ಯಕರ್ತರ ಸಭೆಯೊಂದರಲ್ಲಿ ಭಾಗವಹಿಸಿದ್ದಾರೆ. ಕೋವಿಡ್ ಮಾರ್ಗಸೂಚಿ ಅನುಸರಿಸುವ ದಿಸೆಯಲ್ಲಿ ಸಾರ್ವಜನಿಕರಿಗೆ ಮೇಲ್ಪಂಕ್ತಿಯಾಗಬೇಕಾಗಿದ್ದ ಜನಪ್ರತಿನಿಧಿಗಳೇ ಬೇಕಾಬಿಟ್ಟಿಯಾಗಿ ನಡೆದುಕೊಂಡಿರುವ ಅನೇಕ ನಿದರ್ಶನಗಳಿವೆ.



ಕೋವಿಡ್ ಮಾರ್ಗಸೂಚಿ ಅನುಸರಿಸುವ ದಿಸೆಯಲ್ಲಿ ಸಾರ್ವಜನಿಕರಿಗೆ ಮೇಲ್ಪಂಕ್ತಿಯಾಗಬೇಕಾಗಿದ್ದ ಜನಪ್ರತಿನಿಧಿಗಳೇ ಬೇಕಾಬಿಟ್ಟಿಯಾಗಿ ನಡೆದುಕೊಳ್ಳುವುದು ಅಕ್ಷಮ್ಯ

ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಹೇಳುತ್ತಲೇ ಇದ್ದಾರೆ. ಆದರೆ, ಅವರು ಭಾಗವಹಿಸಿರುವ ಕಾರ್ಯಕ್ರಮಗಳಲ್ಲೇ ಮಾಸ್ಕ್ ಧರಿಸದೆ ಇರುವವರು ಕಾಣಿಸಿಕೊಂಡಿದ್ದಾರೆ. ಮಾಸ್ಕ್ ಧರಿಸದಿರುವುದಕ್ಕೆ ಜನಸಾಮಾನ್ಯರ ಮೇಲೆ ಕ್ರಮ ಜರುಗಿಸಿರುವುದನ್ನು ಬಿಟ್ಟರೆ, ರಾಜಕಾರಣಿಗಳು ಅಥವಾ ಪ್ರಭಾವಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡ ಉದಾಹರಣೆಗಳಿಲ್ಲ. ಕೃಷಿ ಸಚಿವ ಬಿ.ಸಿ. ಪಾಟೀಲರು ತಾಲ್ಲೂಕು ಆರೋಗ್ಯಾಧಿಕಾರಿಯನ್ನು ತಮ್ಮ ಮನೆಗೆ ಕರೆಸಿಕೊಂಡು ಲಸಿಕೆ ಹಾಕಿಸಿಕೊಂಡಿದ್ದರು. ಆ ಪ್ರಕರಣದಲ್ಲಿ ಆರೋಗ್ಯಾಧಿಕಾರಿ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ಹೊರತು, ಸಚಿವರ ಮೇಲಲ್ಲ. ಪ್ರಭಾವಿಗಳಾದರೆ ತಪ್ಪು ಮಾಡಿದರೂ ಅದರಿಂದ ಪಾರಾಗಬಹುದು ಎನ್ನುವುದನ್ನು ಇಂತಹ ಪ್ರಕರಣಗಳು ಸೂಚಿಸುತ್ತವೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘನೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ರಾಜಕಾರಣಿಗಳು ಮತ್ತು ಸೆಲೆಬ್ರಿಟಿಗಳಿಗೆ ಪ್ರತ್ಯೇಕ ಕಾನೂನುಗಳಿವೆಯೇ ಎಂದು ಹೈಕೋರ್ಟ್ ಪ್ರಶ್ನಿಸಿದ ನಂತರವೂ ಕಾನೂನು ಪಾಲನೆಯಲ್ಲಿನ ತಾರತಮ್ಯ ಧೋರಣೆ ಮುಂದುವರಿಯುತ್ತಲೇ ಇದೆ. ಕೊರೊನಾದಿಂದ ಮಾತ್ರವಲ್ಲ, ಜನಪ್ರತಿನಿಧಿಗಳ ಬೇಜವಾಬ್ದಾರಿ ನಡವಳಿಕೆಯಿಂದ ಆಗಬಹುದಾದ ಅಪಾಯಗಳಿಂದಲೂ ಜನರನ್ನು ಕಾಪಾಡಬೇಕಾಗಿದೆ. ಸಾರ್ವಜನಿಕರಲ್ಲಿಯೂ ಕೆಲವರು ಕೋವಿಡ್ ಮಾರ್ಗಸೂಚಿಯನ್ನು ಗಂಭೀರವಾಗಿ ಪರಿಗಣಿಸಿದಂತಿಲ್ಲ. ಸರ್ಕಾರದ ಎಚ್ಚರಿಕೆಯ ನಡುವೆಯೂ ಕಲ್ಯಾಣ ಮಂಟಪಗಳಲ್ಲಿ ಜನ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿರುವುದು ಮಾತ್ರವಲ್ಲ; ಮಾಸ್ಕ್ ಧರಿಸುವ, ವ್ಯಕ್ತಿಗತ ಅಂತರ ಕಾಪಾಡಿಕೊಳ್ಳುವ ಪ್ರಾಥಮಿಕ ಎಚ್ಚರಿಕೆಗಳನ್ನೂ ಅನುಸರಿಸುತ್ತಿಲ್ಲ. ಮಾರುಕಟ್ಟೆ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಕಂಡುಬರುತ್ತಿರುವ ಜನಜಂಗುಳಿಗೂ ಕೊರೊನಾ ಭಯ ಇದ್ದಂತಿಲ್ಲ. ಲೋಕಸಭೆ ಹಾಗೂ ವಿಧಾನಸಭೆ ಉಪ ಚುನಾವಣೆ ಸಂದರ್ಭದಲ್ಲಿ ಹೆಚ್ಚು ಜನರು ಒಂದೆಡೆ ಸೇರದಂತೆ ನೋಡಿಕೊಳ್ಳುವುದಾಗಿ ಸರ್ಕಾರ ಹೇಳಿದೆ. ಆದರೆ, ರೋಡ್ ಶೋಗಳು ಸೇರಿದಂತೆ ಜನರನ್ನು ಸೇರಿಸುವ ಕಾರ್ಯಕ್ರಮಗಳು ನಡೆಯುತ್ತಲೇ ಇವೆ. ಈ ನಿರ್ಲಕ್ಷ್ಯ ಮುಂದುವರಿದರೆ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಹು ದೊಡ್ಡ ಅಪಾಯವನ್ನು ರಾಜ್ಯ ಎದುರಿಸಬೇಕಾಗಬಹುದು.

### ದಿನದ ಟ್ವೀಟ್

**ಭಯಾನಕ ನಿರ್ಧಾರ**



**ಚಲನಚಿತ್ರ ಶೂಟಿಂಗ್‌ಗೆ ಅನುಮತಿ ಮುಂದುವರಿಸುವ ಮಹಾರಾಷ್ಟ್ರ ಸರ್ಕಾರದ ನಿರ್ಧಾರ ಭಯಾನಕವಾಗಿದೆ. ಬಾಲಿವುಡ್‌ನ ಅನೇಕ ಜನರಲ್ಲಿ ಇಂದು ಕೊರೊನಾ ಸೋಂಕಿನ ಪ್ರಕರಣಗಳು ದೃಢಪಟ್ಟಿವೆ!**

**ಅಜಯ್ ಕಾಮತ್,** ವೈದ್ಯ

### 25 ವರ್ಷಗಳ ಹಿಂದೆ

ಶನಿವಾರ, 6-4-1996

**• ಬೆಂಗಳೂರು ಉತ್ತರ, ಕೆನರಾ, ಬಳ್ಳಾರಿ ಅಭ್ಯರ್ಥಿ ಬದಲು**

**ನವದೆಹಲಿ, ಏ. 5**– ಕರ್ನಾಟಕದ ವಿವಿಧ ಲೋಕಸಭಾ ಕ್ಷೇತ್ರಗಳಿಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಬಗ್ಗೆ ಅಸಮಾಧಾನ ವ್ಯಾಪಕವಾಗಿ ಕಂಡುಬಂದ ಹಿನ್ನೆಲೆಯಲ್ಲಿ, ಕಾಂಗ್ರೆಸ್ ಪಕ್ಷವು ಈಗ ಬೆಂಗಳೂರು ಉತ್ತರ, ಬಳ್ಳಾರಿ, ಕೆನರಾ (ಕಾರವಾರ) ಕ್ಷೇತ್ರಗಳ ಅಭ್ಯರ್ಥಿಗಳನ್ನು ಬದಲಾಯಿಸಲು ತೀರ್ಮಾನಿಸಿದೆ.

ಬೆಂಗಳೂರಿನ ಚಿಕ್ಕಪೇಟೆ ವಿಧಾನಸಭೆ ಉಪ ಚುನಾವಣೆಗೆ ಪೆರಿಕಲ್ ಮಲ್ಲಪ್ಪ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲು ನಿರ್ಧರಿಸಿದೆ. ಸ್ಥಳೀಯ ಲಿಂಗಾಯತರ ಒತ್ತಡದ ಮೇಲೆ ಬಳ್ಳಾರಿಗೆ ಕೆ.ಸಿ. ಕೊಂಡಯ್ಯ ಬದಲಿಗೆ ಮಾಜಿ ಸಂಸತ್ ಸದಸ್ಯ ಕೆ.ಎಸ್.ವೀರಭದ್ರಪ್ಪ ಮತ್ತು ಕಾರವಾರಕ್ಕೆ ಆರ್.ಎಸ್.ಭಾಗವತ ಅವರ ಬದಲಿಗೆ ಮಾಜಿ ಸಚಿವ ಆರ್.ಎನ್. ನಾಯಕ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲು ತೀರ್ಮಾನಿಸಲಾಗಿದೆ ಎಂದು ಪಕ್ಷದ ಅಧಿಕೃತ ಮೂಲಗಳು ತಿಳಿಸಿವೆ.

**• ಚುನಾವಣಾ ವೆಚ್ಚ: ಅಭ್ಯರ್ಥಿಗೆ ಆಯೋಗದಿಂದ ಎಚ್ಚರಿಕೆ**

**ನವದೆಹಲಿ, ಏ. 5 (ಯುಎನ್‌ಐ)**– ಚುನಾವಣಾ ವೆಚ್ಚ ಮಿತಿಗೆ ಸಂಬಂಧಿಸಿದಂತೆ ಹಾಲಿ ಇರುವ ಕಾನೂನಿಗೆ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಬದ್ಧರಾಗಬೇಕು ಎಂದು ಚುನಾವಣಾ ಆಯೋಗ ಎಚ್ಚರಿಕೆ ನೀಡಿದೆ.

ಲೋಕಸಭಾ ಅಭ್ಯರ್ಥಿಗೆ ಈಗ 4.51 ಲಕ್ಷ ರೂಪಾಯಿ ಚುನಾವಣಾ ವೆಚ್ಚ ಮಿತಿ ಹಾಕಿರುವುದು ಅವಾಸ್ತವ. ಈ ಮಿತಿಯನ್ನು 15 ಲಕ್ಷಕ್ಕೆ ಹೆಚ್ಚಿಸುವಂತೆ ಆಯೋಗವು ಫೆಬ್ರುವರಿಯಲ್ಲಿಯೇ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಇದುವರೆಗೆ ಯಾವ ಕ್ರಮ ಕೈಗೊಂಡಿಲ್ಲ ಎಂದು ಚುನಾವಣಾ ಕಮಿಷನರ್ ಜಿವಿಜಿ ಕೃಷ್ಣಮೂರ್ತಿ ಹೇಳಿದರು.

### 50 ವರ್ಷಗಳ ಹಿಂದೆ

ಮಂಗಳವಾರ, 6-4-1971

**• ಸಂಪುಟ ರಚನೆ ಪ್ರಯತ್ನ ಕಾಣದಿದ್ದರೆ ವಿಧಾನಸಭೆ ವಿಸರ್ಜನೆ ಖಚಿತ**

**ಬೆಂಗಳೂರು, ಏ. 5**– ಇನ್ನು ಒಂದೆರಡು ದಿನಗಳಲ್ಲಿ ಹೊಸ ಸರ್ಕಾರ ಸ್ಥಾಪಿಸುವ ಹಾದಿಯಲ್ಲಿ ರಾಜಕೀಯ ಬೆಳವಣಿಗೆ ಆಗದಿದ್ದಲ್ಲಿ ರಾಜ್ಯಪಾಲರು ವಿಧಾನಸಭೆಯನ್ನು ವಿಸರ್ಜಿಸುವಂತೆ ರಾಷ್ಟ್ರಪತಿಗೆ ಶಿಫಾರಸು ಮಾಡುವುದು ಖಚಿತವಾಗಿದೆ.

ರಾಷ್ಟ್ರಪತಿ, ವಿಧಾನಸಭೆಯನ್ನು ವಿಸರ್ಜಿಸಿ ಮರುಚುನಾವಣೆ ನಡೆಯಲು ಆಜ್ಞೆ ಮಾಡಿದರೂ ಮೇ ತಿಂಗಳಲ್ಲಿ ಚುನಾವಣೆ ನಡೆಯುವ ಸಂಭವವಿದ್ದಂತೆ ಕಾಣದು.

ಚುನಾವಣೆ ನಡೆಸಲು ಮಳೆಗಾಲ ಮುಗಿಯಬೇಕಾಗುತ್ತದೆ. ಅಂದರೆ ಅಕ್ಟೋಬರ್‌ವರೆಗೆ ರಾಷ್ಟ್ರಪತಿ ಆಡಳಿತ ಮುಂದುವರಿಯಬೇಕಾಗುತ್ತದೆ.

**• ಬಾಂಗ್ಲಾ ದೇಶದ ಪೂರ್ವವಲಯ ವಿಮೋಚನಾ ಸೇನೆಯ ವಶ**

**ಅಗರ್ತಲಾ, ಏ. 5**– ಹಿರಿಯ ಪಟ್ಟಣಗಳು ಮತ್ತು ಕೆಲವು ಮುಖ್ಯ ಯಂತ್ರಸ್ಥಾವರಗಳ ಕೆಲವು ಭಾಗಗಳ ವಿನಾ ಬಾಂಗ್ಲಾದೇಶದ ಪೂರ್ವ ವಲಯವು ಸಂಪೂರ್ಣವಾಗಿ ವಿಮೋಚನಾ ಸೇನೆಯ ವಶದಲ್ಲಿದೆ.

ಸಿಲ್ಹೆಟ್ ನಗರದ ಹೊರವಲಯದಿಂದ ಢಾಕಾ ಎಲ್ಲೆವರೆಗೆ, ಮಿಮೆನ್ ಸಿಂಗ್, ಚಿತ್ತಗಾಂಗ್‌ನ ಕೆಲವು ವಲಯಗಳೂ ಸೇನೆಯ ವಶದಲ್ಲಿವೆ.

ಓದಲಿಕ್ಕೂ ಸಮಯವಿಲ್ಲದ ಹಾಗೆ ಪರೀಕ್ಷಾ ಡ್ರಿಲ್ ನಡೆಸುವುದು ತರವೇ?

## ಅತಿಯಾದ ಪರೀಕ್ಷೆ ಅಧ್ಯಯನಕ್ಕೆ ಹಾನಿಕರ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ವಿದ್ಯಾರ್ಥಿಗಳಿಗೆ** ಶಿಕ್ಷಕರು ಶಿಕ್ಷೆಯನ್ನು ಕೊಡಬಾರದೆಂಬ ವಿಷಯದಲ್ಲಿ ಒಂದಷ್ಟು ಚರ್ಚೆಗಳು ಆಗಿವೆ, ನಿಯಂತ್ರಣ ಕ್ರಮಗಳೂ ಜಾರಿಗೊಂಡಿವೆ. ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಸ್ವಯಂಸೇವಾ ಸಂಸ್ಥೆಗಳು, ಶಿಕ್ಷಣ ಇಲಾಖೆ... ಈ ಎಲ್ಲವೂ ಸೇರಿ ಒಂದಷ್ಟು ಅರಿವನ್ನು ಮೂಡಿಸಿವೆ. ಆದರೆ, ಇದೆಲ್ಲ ಗೋಚರವಾಗುವ ದೈಹಿಕ ಶಿಕ್ಷೆಗೆ ಸಂಬಂಧಿಸಿದ ವಿಚಾರವಾಯಿತು. ನಿಜವಾಗಿ ಶೈಕ್ಷಣಿಕ ನಿರ್ವಹಣೆಯೇ ಅದರ ಸ್ವರೂಪದಲ್ಲಿ ಶಿಕ್ಷಾತ್ಮಕ ಅನುಭವವನ್ನು ಹೊಂದಿದೆ. ಉದಾಹರಣೆಗೆ, ವರ್ತಮಾನದ ಶಿಕ್ಷಣದ ಏಕೈಕ ಗುರಿ ಫಲಿತಾಂಶವೊಂದೇ.

ಪರೀಕ್ಷಾ ಫಲಿತಾಂಶವು ಸ್ವಾಭಾವಿಕವಾಗಿ ಹೆಚ್ಚು ಮಹತ್ವವನ್ನು ಹೊಂದಿರುತ್ತದೆ. ಆದರೆ ಅದಕ್ಕಾಗಿ ಮಕ್ಕಳನ್ನು ಸಿದ್ಧಪಡಿಸುವ ವ್ಯವಸ್ಥೆ ತೀರಾ ಅವೈಜ್ಞಾನಿಕವಾಗಬಾರದು. ಅವೈಜ್ಞಾನಿಕತೆ ಎಲ್ಲಿದೆ ಎಂಬುದಕ್ಕೆ ವರ್ತಮಾನದ ಉದಾಹರಣೆ ಇದೆ. ಕೊರೊನಾ ಸಂದರ್ಭದಿಂದಾಗಿ ಬೋಧನೆಗಳು ಸಹಜವಾಗಿ ನಡೆದಿಲ್ಲ. ಆನ್‌ಲೈನ್‌ನಲ್ಲಿ ಒಂದಷ್ಟು ಬೋಧನೆ-ಕಲಿಕೆಯ ಪ್ರಕ್ರಿಯೆ ನಡೆದಿದೆ. ನಂತರ ತರಗತಿಗಳು ಆರಂಭವಾದಾಗ ಕಡಿತಗೊಂಡಿದೆ ಎಂದು ಹೇಳಲಿಕ್ಕಾಗಿ ಸೀಮಿತ ಪಾಠಗಳ ಕಡಿತವೂ ಆಯಿತು. ಬಹುಮಟ್ಟಿಗೆ ಹತ್ತು ತಿಂಗಳ ಬೋಧನೆಗಾಗಿ ರಚಿಸಲ್ಪಟ್ಟ ಪಠ್ಯವನ್ನು ಐದು ತಿಂಗಳ ಅವಧಿಯಲ್ಲಿ ಬೋಧಿಸಿ ಮುಗಿಸಬೇಕು ಎನ್ನುವುದೇ ಅವೈಜ್ಞಾನಿಕವಾಗಿದೆ. ಈ ಸಮಸ್ಯೆಯು ಕೊರೊನಾರಹಿತ ವರ್ಷಗಳಲ್ಲೂ ಇದೆ. ಪಠ್ಯಪುಸ್ತಕ ಬೋಧನೆಗೆ ಕಾಲಾವಧಿಯು ಜೂನ್‌ನಿಂದ ಮಾರ್ಚ್‌ವರೆಗೆ ಇದ್ದರೆ ಡಿಸೆಂಬರ್‌ನಲ್ಲಿ ಪಾಠಗಳನ್ನು ಮುಗಿಸಿ ನಂತರ ಪರೀಕ್ಷೆಗೆ ಸಿದ್ಧಪಡಿಸಲು ಗಮನ ಕೊಡಬೇಕೆಂಬ ಒತ್ತಡ ಸೃಷ್ಟಿಯಾಗುತ್ತದೆ. ಅದೂ ಅವೈಜ್ಞಾನಿಕವೇ.

ಆದರೆ ಈಗ ನಡೆಯುತ್ತಿರುವುದು ಅದಕ್ಕಿಂತಲೂ ಹೆಚ್ಚು ಅವೈಜ್ಞಾನಿಕವಾದುದು. ಮಾರ್ಚ್, ಏಪ್ರಿಲ್, ಮೇ ತಿಂಗಳಿನಲ್ಲಿ ಬೋಧನೆ-ಕಲಿಕೆಯ ಪ್ರಕ್ರಿಯೆ ನಡೆಸಬೇಕು. ಅತ್ಯಧಿಕ ಉಷ್ಣತೆಯ ಕಾಲವಿದು. ಬಹಳ ಬೇಗ ಆಯಾಸವಾಗುತ್ತದೆ. ಜೊತೆಗೆ ಪಾಠಗಳನ್ನು ಬೇಗ ಮುಗಿಸುವ ಒತ್ತಡ ಇರುತ್ತದೆ. ಇದರ ನಡುವೆ ಪರೀಕ್ಷೆಗಳು. ಎಡೆಬಿಡದೆ ಕೆಲವು ಶಾಲಾ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯುತ್ತವೆ. ಪಾಠವನ್ನೇ ಮಾಡಿ ಮುಗಿಸದೆ ಪರೀಕ್ಷೆಯನ್ನು ಹೇಗೆ ಮಾಡಲು ಸಾಧ್ಯ ಎಂದು ಕೇಳಿದರೆ, ತಾಂತ್ರಿಕವಾಗಿ ಪಾಠ ಮುಗಿದಿದೆ ಎನ್ನಲು ಬೇಕಾದ ದಾಖಲೆ ಇರುತ್ತದೆ. ಆದರೆ ಒಂದು ಶೈಕ್ಷಣಿಕ ವರ್ಷಕ್ಕಾಗಿನ ಪಠ್ಯವನ್ನು ಶಿಕ್ಷಣ ಶಾಸ್ತ್ರವು ಹೇಳುವ ಬೋಧನಾ ಪದ್ಧತಿಯಲ್ಲಿ ಮಾಡಿ ಮುಗಿಸಲು ಒಂದೂವರೆಯಿಂದ ಎರಡು ಶೈಕ್ಷಣಿಕ ವರ್ಷಗಳು ಬೇಕಾಗುವಷ್ಟು ದೊಡ್ಡ ಗಾತ್ರದ ಪಠ್ಯಪುಸ್ತಕಗಳು ನಮಗೀಗ ಇರುವುದು. ಆ ಪಠ್ಯವನ್ನು ಸರಿಯಾದ ಬೋಧನಾ ಪದ್ಧತಿಯಲ್ಲಿ ಐದು ತಿಂಗಳುಗಳಲ್ಲಿ ತಾನು ಮಾಡಿದ್ದೇನೆ ಎಂದು ಆತ್ಮಸಾಕ್ಷಿಗನುಗುಣವಾಗಿ ಹೇಳಲು ಯಾವ ಶಿಕ್ಷಕರಿಂದಲೂ ಸಾಧ್ಯವಿಲ್ಲ. ಇದನ್ನು ದುರಿತ ಕಾಲದ ಅನಿವಾರ್ಯ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಪರೀಕ್ಷೆಗಳ ಹಾವಳಿಯನ್ನು ಹೇಗೆ ಒಪ್ಪಿಕೊಳ್ಳುವುದು?

ಮುಂಬರಲಿರುವ ಅಂತಿಮ ಪರೀಕ್ಷೆಯಲ್ಲಿ ಶೇಕಡ ನೂರು ಫಲಿತಾಂಶಕ್ಕಾಗಿ ತರಬೇತಿಯ ರೂಪದಲ್ಲಿ ನಡೆಯುವ ಪರೀಕ್ಷೆಗಳು ನಾನಾ ವಿಧಗಳಲ್ಲಿವೆ. ಒಂದಷ್ಟು ಸಂಸ್ಥೆಗಳು ಸೇರಿ ಸಾಮಾನ್ಯ ಪ್ರಶ್ನೆಪತ್ರಿಕೆ ರೂಪಿಸಿ ನಡೆಸುವ ಪರೀಕ್ಷೆಗಳು, ಒಂದೇ ಸಂಸ್ಥೆ ತನಗಾಗಿಯೇ ಪ್ರಶ್ನೆಪತ್ರಿಕೆ ರೂಪಿಸಿಕೊಂಡು ನಡೆಸುವ ಪರೀಕ್ಷೆಗಳು, ಶಿಕ್ಷಕರಿಗೇ ಎಲ್ಲವನ್ನೂ ಬಿಟ್ಟಿದ್ದು, ಪ್ರತಿದಿನ ಶಿಕ್ಷಕರು ಈ ಪಾಠವನ್ನು ಓದಿ ಬನ್ನಿ ಎಂದು ತಿಳಿಸಿ ಮರುದಿನ ಪರೀಕ್ಷೆ ನಡೆಸುವ ರೀತಿಯ ಪರೀಕ್ಷೆಗಳು. ಇವೆಲ್ಲವೂ ಅಂತಿಮ ಪರೀಕ್ಷೆಗಾಗಿ ಕವಾಯತಿನ ಮಾದರಿಯ ಪರೀಕ್ಷೆಗಳಾಗಿರುತ್ತವೆ.

ಪರೀಕ್ಷೆ ನಡೆಸಬೇಕಾದರೆ ಕಲಿಕೆ ನಡೆಯಬೇಕು. ಕಲಿಕೆ ನಡೆಯಬೇಕಾದರೆ ವಿಚಾರದ ಗ್ರಹಿಕೆ, ಗ್ರಹಿಸಿದ ವಿಚಾರವನ್ನು ಮನಸ್ಸಿನಲ್ಲಿ ದೃಢೀಕರಿಸಿಕೊಳ್ಳುವುದು, ದೃಢೀಕರಣಗೊಂಡದ್ದನ್ನು ಧಾರಣೆ ಮಾಡಿಕೊಳ್ಳುವುದು- ಈ ಮೂರು ಪ್ರಕ್ರಿಯೆಗಳು ಆಗಿರಬೇಕು. ಈ ಪ್ರಕ್ರಿಯೆಗಳು ನಡೆದಿದ್ದಾಗ ಪರೀಕ್ಷೆಯಲ್ಲಿ ಕಲಿಕಾ ಪ್ರಕ್ರಿಯೆಯ ಕೊನೆಯ ವ್ಯವಸ್ಥೆಯಾದ ಪುನರುತ್ಪತ್ತಿ ಸಾಧ್ಯ. ಮೊದಲ ಮೂರು ಹಂತಗಳು ಆಗಬೇಕಾದರೆ ವಿಚಾರದ ಮೇಲಿನ ಸಂವಾದದಿಂದ ಅಥವಾ ಬೋಧನೆಯಿಂದ ಅಥವಾ ದೃಕ್-ಶ್ರವಣ ಮಾಧ್ಯಮದಿಂದ ಮಕ್ಕಳು ತಿಳಿದಿರಬೇಕು.

ತಾತ್ವಿಕವಾಗಿ ಹೀಗೆ ತಿಳಿದುಕೊಂಡದ್ದು ಗ್ರಹಿಕೆಯಾಗಿ, ದೃಢೀಕರಣವಾಗಿ, ಧಾರಣೆಯಾಗಿದೆ ಎನ್ನುವುದನ್ನು ಶಿಕ್ಷಕರು ಮನವರಿಕೆ ಮಾಡಿಕೊಂಡ ನಂತರ ಪರೀಕ್ಷೆ ಮಾಡಬೇಕು. ಆದರೆ ಇಲ್ಲಿ ಪಾಠವನ್ನೇ ಸರಿಯಾಗಿ ಮಾಡಲು ಆಗುತ್ತಿಲ್ಲವೆಂದು ಗೊತ್ತಿರುವಾಗ ಮಕ್ಕಳಿಗೆ ಇರುವುದು ಸ್ವಯಂ ಕಲಿಕೆಯ ಅವಕಾಶವಾಗಿರುತ್ತದೆ. ಅದು ತನಗೆ ತಾನೇ ಪಾಠವನ್ನು ಓದಿಕೊಳ್ಳುವ ಮೂಲಕ ನಡೆಯಬೇಕು. ಇಲ್ಲೀಗ ಓದಲಿಕ್ಕೂ ಸಮಯವಿಲ್ಲದ ಹಾಗೆ ಪರೀಕ್ಷಾ ಡ್ರಿಲ್‌ಗಳು ನಡೆಯುತ್ತಾ ಹೋದರೆ ಓದುವುದು ಯಾವಾಗ? ಮಕ್ಕಳಿಗೆ ಓದಿಕೊಳ್ಳಲಿಕ್ಕೂ ಬಿಡದೆ ಪರೀಕ್ಷೆಗಳನ್ನು ಹೇರುವ ಶಿಕ್ಷಣದ ನಿರ್ವಹಣೆಗಿಂತ ಜಾಸ್ತಿ ಶಿಕ್ಷೆಯನ್ನು ಯಾರೂ ಕೊಡಲು ಸಾಧ್ಯವಿಲ್ಲ.

ಈ ವಿಚಾರವನ್ನು ಹೇಳಿದರೆ, ಮಕ್ಕಳಿಗೆ ಪರೀಕ್ಷೆ ಮಾಡದಿದ್ದರೆ ಅವರು ಓದುವುದಿಲ್ಲ ಎಂಬ ಉತ್ತರ ಬರುತ್ತದೆ. ಈ ವಿಚಾರದಲ್ಲಿ ಸತ್ಯಾಂಶವಿದೆ. ಪರೀಕ್ಷೆ ಇದೆ ಎಂಬ ಕಾರಣಕ್ಕಾಗಿಯೇ ಓದುವ ಮಕ್ಕಳು ಸುಮಾರು ಶೇ 10-20ರಷ್ಟು ಇರುತ್ತಾರೆ. ಅನುತ್ತೀರ್ಣತೆಯ ಸಂಭವನೀಯತೆ ಇರುವ ಮಕ್ಕಳು ಇವರು. ಇವರು ಉತ್ತೀರ್ಣರಾದರೂ ಆಗಲಿಕ್ಕಾಗಿ ಪರೀಕ್ಷಾ ಅಭ್ಯಾಸ ಅನಿವಾರ್ಯ ಎನ್ನುವುದನ್ನು ಒಪ್ಪಬಹುದು. ಆದರೆ ಈ ಮಕ್ಕಳು ಉತ್ತೀರ್ಣರಾದರೂ ಅದಕ್ಕಾಗಿ ತೆಗೆದುಕೊಳ್ಳುವ ಕ್ರಮಗಳನ್ನು ಎಲ್ಲ ವಿದ್ಯಾರ್ಥಿಗಳಿಗೂ ಅನ್ವಯಿಸಿ, ಶೇ 90ರಷ್ಟು ಅಂಕಗಳನ್ನು ಪಡೆಯಬಲ್ಲ ವಿದ್ಯಾರ್ಥಿಗಳು ಶೇ 70ರ ಮಟ್ಟಕ್ಕೆ ಬರುವ ಹಾಗೆ ಯಾಕೆ ಮಾಡಬೇಕು? ಸ್ವ ಇಚ್ಛೆಯಿಂದಲೇ ಓದಿಕೊಳ್ಳುವ ಮಕ್ಕಳಿಗೆ ನಾಳೆ ಈ ಪಾಠದ ಪರೀಕ್ಷೆಗೆ ಸಿದ್ಧರಾಗಿ ಬನ್ನಿ ಎನ್ನುವುದು ಹಿಂಸೆಯ ಅನುಭವವಾಗಿರುತ್ತದೆ. ಏಕೆಂದರೆ ಮಕ್ಕಳಿಗೆ ಓದಿಕೊಳ್ಳಲು ಇರುವ ಸ್ವಾತಂತ್ರ್ಯವನ್ನೂ ಈ ಪದ್ಧತಿಯು ಕಸಿಯುತ್ತದೆ. ಪ್ರತಿವರ್ಷ ಜಿಲ್ಲೆ ಜಿಲ್ಲೆಗಳ ನಡುವೆ ಏರ್ಪಡುವ ಫಲಿತಾಂಶ 'ಯುದ್ಧ'ಕ್ಕೆ ಈ ವರ್ಷ ಅನಧಿಕೃತ ಪರೀಕ್ಷೆಗಳೂ ಹೆಚ್ಚುವರಿಯಾಗಿ ಸೇರ್ಪಡೆಯಾಗಿವೆ.




ಇದನ್ನೆಲ್ಲ ಕಾನೂನೇ ಸರಿ ಮಾಡಲು ಆಗುವುದಿಲ್ಲ. ಎಷ್ಟು ಕಾನೂನು ಮಾಡಿದರೂ ಕಾನೂನಿನಿಂದ ಬಚಾವಾಗಲು ದಾರಿಗಳ ಹುಡುಕಾಟ ಹೆಚ್ಚುತ್ತದೆಯೇ ಹೊರತು ಉಪಯೋಗ ಆಗುವುದಿಲ್ಲ. ಇದು ಆಡಳಿತ ಮಂಡಳಿಗಳು, ಶಿಕ್ಷಕರು ಮತ್ತು ಮುಖ್ಯವಾಗಿ ಪಾಲಕರು ಶೈಕ್ಷಣಿಕ ಅರಿವಿನಿಂದ ಬೆಳೆಸಿಕೊಳ್ಳಬೇಕಾದ ತಿಳಿವಳಿಕೆಯಾಗಿದೆ. ಸ್ವಇಚ್ಛೆಯಿಂದಲೇ ಓದಿಕೊಳ್ಳುವ ಮಕ್ಕಳ ಪಾಲಕರಿಗೆ ಅತಿಯಾದ ಪರೀಕ್ಷೆಗಳು ಅವರ ಮಕ್ಕಳಿಗೆ ಸಹಜವಾಗಿ ಬರಬಹುದಾದ ಜಾಸ್ತಿ ಅಂಕಗಳನ್ನು ನಿರ್ಬಂಧಿಸಿ ಕಡಿಮೆ ಅಂಕಗಳನ್ನು ಪಡೆಯಲು ಕಾರಣವಾಗುತ್ತವೆ ಎಂದು ಗೊತ್ತಾಗಬೇಕು.

ಸಮರ್ಥ ವಿದ್ಯಾರ್ಥಿಗಳಿಗೆ ಬರೆಸುವಿಕೆ ಅತಿಯಾದಾಗ ಬರೆಯುವಿಕೆಯೇ ಹಿಂಸೆ ಎನಿಸಿ ಕ್ರಮೇಣ ಸಾಮರ್ಥ್ಯ ಕುಗ್ಗುವ ಸಂಭವನೀಯತೆ ಜಾಸ್ತಿ ಇರುತ್ತದೆ. ಏಕೆಂದರೆ 'ಓದಿಸುವುದು- ಪರೀಕ್ಷೆಗಳಿಗೆ ಬರೆಸಿ ಬರೆಸಿ ಯಾಂತ್ರಿಕ ಅಭ್ಯಾಸ ಮಾಡಿಸುವುದು' ಎಂಬ ಈ ಪ್ರಕ್ರಿಯೆಯಲ್ಲಿ ಕಲಿಕಾ ಹಿಂದುಳಿದವರಿಗೆ, ಸಾಮಾನ್ಯ ಮಟ್ಟದವರಿಗೆ, ಪ್ರತಿಭಾವಂತರಿಗೆ ಬೇರೆ ಬೇರೆ ಪದ್ಧತಿಗಳು ಬೇಕು. ಕಲಿಕಾ ಹಿಂದುಳಿದವರಿಗಾಗಿನ ಪದ್ಧತಿಯನ್ನು ಎಲ್ಲರಿಗೂ ಅನ್ವಯಿಸುವುದರಿಂದ ಪ್ರತಿಭಾವಂತರಿಗೆ ಅದು ಸತ್ಪರಿಣಾಮವನ್ನು ಉಂಟು ಮಾಡುವುದಿಲ್ಲ.

ಅದೇಕೋ ಬಹುತೇಕ ಪೋಷಕರಿಗೆ ಕಲಿಕೆಯ ಹೆಸರಿನಲ್ಲಿ ಮಕ್ಕಳಿಗೆ ಹೆಚ್ಚು ಹಿಂಸೆ ಕೊಡುತ್ತಿರುವುದು ಗಮನಕ್ಕೆ ಬಂದಷ್ಟೂ ಸಂತೋಷವಾಗುವ ಪ್ರವೃತ್ತಿ ಹೆಚ್ಚು. ಅದರಿಂದ ಮಕ್ಕಳು ಉನ್ನತ ಮಟ್ಟಕ್ಕೆ ಬೆಳೆಯುತ್ತಾರೆ ಎಂಬುದು ಅವರ ಭಾವನೆ. ಉನ್ನತ ಮಟ್ಟ ಎಂದರೇನು? ಅಮೆರಿಕದಲ್ಲಿ ದೊಡ್ಡ ಉದ್ಯೋಗ ಪಡೆಯುವುದು! ಹಿಂದೆಯೆಲ್ಲ ಅಂತಿಮ ಪರೀಕ್ಷೆಯಲ್ಲಿ ಪಕ್ಕದ ವಿದ್ಯಾರ್ಥಿಗಿಂತ ಎರಡು ಅಂಕ ಕಡಿಮೆ ಬಂದಾಗ ತಮ್ಮ ಮಕ್ಕಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಪಾಲಕರು ಈಗ ಅಭ್ಯಾಸಕ್ಕಾಗಿ ನಡೆಸುವ ಈ ರೀತಿಯ ಪರೀಕ್ಷೆಗಳಲ್ಲೂ ಎರಡು ಅಂಕಗಳು ಕಡಿಮೆ ಬಂದರೆ ತರಾಟೆಗೆ ತೆಗೆದುಕೊಳ್ಳಲು ಶುರು ಮಾಡಿದ್ದಾರೆ. ಅತಿಯಾದ ಪರೀಕ್ಷೆಗಳನ್ನು ಕಡಿತ ಮಾಡುವ ಶಕ್ತಿ ಮತ್ತು ಮಾಡಿಸಬೇಕಾದ ಜವಾಬ್ದಾರಿ ಎರಡೂ ಇರುವುದು ಪಾಲಕರಿಗೇ ಆಗಿದೆ. ಅತಿ ಪರೀಕ್ಷೆಗಳ ಹಾನಿಯು ಮೊದಲು ಅರ್ಥವಾಗಬೇಕಾದದ್ದು ಪಾಲಕರಿಗೆ.

### ಚುರುಮುರಿ



## ವ್ಯಾಕ್ಸಿನ್ ಕೈಮಸಗು

• ಲಿಂಗರಾಜು ಡಿ.ಎಸ್.

'ಸಾ, ಇಲ್ಲೀಗಂಟಾ ದೇಶದಲ್ಲಿ 7 ಕೋಟಿ ಜನ ಮಾತ್ರ ವ್ಯಾಕ್ಸಿನ್ ತಗಂಡವರಂತೆ. ಜನಕ್ಕೆ ಕಾಡಿ-ಬೇಡಿ ವ್ಯಾಕ್ಸಿನ್ ಕೊಡತುದವಿ. ಆದ್ರೂ ಜನ ಬತ್ತಿಲ್ಲ ಅಂತ ಸುದಾಕರಣ್ಣ ಬೇಜಾರು ಮಾಡಿಕ್ಯಂಡದೆ' ಅಂದೆ.

'ಒಬ್ಬೊಬ್ಬರಿಗೇ ಲಸಿಕೆ ಕೊಡತಾ ಕುತಗಂಡ್ರೆ ಹತ್ವೊರ್ಸಾಯ್ತದೆ! ಸರ್ಕಾರ ಬ್ಯಾರೇನೆ ಪ್ಲಾನ್ ಮಾಡಬೇಕು' ಅಂದರು ತುರೇಮಣೆ.

'ಉಗೀರ್ಲಾ ಮಕ್ಕೆ! 132 ಕೋಟಿ ಜನಕ್ಕೆ ವಾರೊಪ್ಪತ್ತಲ್ಲಿ ವ್ಯಾಕ್ಸಿನ್ ಹೆಂಗೆ ಕೊಟ್ಟಾರ್ಲಾ ಗೆಂಡೆಕಾಳ?' ಯಂಟಪ್ಪಣ್ಣ ಕೇಳಿತು.

'ಯಂಟಪ್ಪಣ್ಣ, ವ್ಯಾಕ್ಸಿನ್‌ನ ಜನಕ್ಕೆ ತಿಳೀದಂಗೆ ಕೈಮಸಗಿನ ಥರಾ ಕೊಡಬೇಕು. ಹ್ಯಂಗೆ ಅಂದ್ರೆ ವ್ಯಾಕ್ಸಿನನ್ನ ವಡಾ-ಪಾವ್, ಮಿಸಳ್ ಭಾಜಿ ಒಳಗೆ ಮಿಕ್ಸ್ ಮಾಡಿ ಕೊಟ್ಟರೆ ಇಡೀ ಮಹಾರಾಷ್ಟ್ರದ ಜನಕ್ಕೆ ಸಂದೇ ಒಳಗೇ ವ್ಯಾಕ್ಸಿನ್ ಆಗೋಯ್ತದೆ!' ಅಂದ್ರು.

'ಉತ್ತರ ಭಾರತದೋರಿಗೆ ಏನು ಮಾಡೀರಿ?' ಅಂದೆ.

'ಸುಲಭ ಕನೋ, ಪಾನ್ ಮಸಾಲದೊಳಿಕ್ಕೆ ವ್ಯಾಕ್ಸಿನ್ ಹಾಕಿಬುಟ್ಟರೆ ಅರ್ಧ ಭಾರತದ ಜನಕ್ಕೆ ವ್ಯಾಕ್ಸಿನ್ ಆಗೋಯ್ತದೆ. ಇನ್ನು ಬಂಗಾಳದೇಲಿ ರಸಗುಲ್ಲಾದೊಳಿಕ್ಕೆ ವ್ಯಾಕ್ಸಿನ್ ಸೇರಿಸಿದರೆ ಮದ್ಯಾನ್ನದೊತ್ತಿಗೆ ಕೆಲಸ ಮುಗೀತದೆ. ಹಿಂಗೀಯೆ ಗುಜರಾತಲ್ಲಿ ಚಿಕ್ಕಿ ಒಳಗೆ, ಹೈದರಾಬಾದಲ್ಲಿ ದಮ್ ಬಿರಿಯಾನಿ ಒಳಗೆ ಸೇರಿಸಿದರೆ ಮುಗೀತಪ್ಪಾ!' ಅಂದ್ರು.

'ಆಯ್ತು ಕನೇಳಿ ಸಾ, ನಮ್ಮ ಕರ್ನಾಟಕದೇಲಿ ಹ್ಯಂಗೆ ವ್ಯಾಕ್ಸಿನಾಕದು?' ಅಂದ ಚಂದ್ರು.

'ಮಂಗಳೂರಲ್ಲಿ ಬಂಗುಡೆ, ಬನ್ಸೊಳಗೆ, ಉತ್ತರ ಕರ್ನಾಟಕದೇಲಿ ಗಿರ್ಮಿಟ್ಟೊಳಗೆ, ಬೆಂಗಳೂರೇಲಿ ಪಾನಿಪೂರಿ, ಮಸಾಲೆದೋಸೆಗೆ ಮಿಕ್ಸ್ ಮಾಡಬೇಕು ಕನ್ರೋ. ಮುದ್ದೆ-ತಲೆ ಮಾಂಸದ ಒಳಕ್ಕಿಟ್ರೆ ಸಾಕು ಮಂಡ್ಯಾದಿಂದ ಹಾಸನದ ಗಂಟಾ ವ್ಯಾಕ್ಸಿನ್ ಆಯ್ತದೆ' ಅಂದ್ರು.

'ರಾಜಕಾರಣಿಗಳಿಗೆ ಹ್ಯಂಗೆ ಕೊಡದು?' ಅಂತ ಕೇಳಿದೆ. 'ಅವರಿಗೇನೂ ಬ್ಯಾಡ. ಈಗಲೇ ಆ್ಯಂಟಿಬಾಡಿ ಜಾಸ್ತಿ ಆಗ್ಯದೆ ಬುಡ್ಲಾ!' ಅನ್ನದಾ ಈವಯ್ಯ.

'ಈ ಮಾನಗೆಟ್ಟೋನು ಯಾವ್ಯಾವುದ ಎಲ್ಲೆಲ್ಲಿಗೋ ತಾರಾಕ್ತನೆ. ಇವನ ಮಾತು ಕೇಳದೇ ಆಸ್ಪತ್ರಿಗೋಗಿ ವ್ಯಾಕ್ಸಿನ್ ತಗಾ' ಅಂತು ಯಂಟಪ್ಪಣ್ಣ.

### ಸಂಗತ

## ಲಿಂಗತ್ವ ಸಮಾನತೆ: ಸವಾಲಿನ ಸುತ್ತ...

ಲಿಂಗತ್ವ ಸಮಾನತೆಯ ಅಸ್ತಿತ್ವವು ಮೇಲ್ನೋಟಕ್ಕೆ ಗೋಚರವಾದರೂ ಆಳದಲ್ಲಿ ವಿವಿಧ ರೀತಿಯ ಅಸಮಾನತೆಗಳು ಹುದುಗಿವೆ

• ಡಾ. ಎಚ್.ಬಿ.ಚಂದ್ರಶೇಖರ್

**ಭಾರತೀಯ** ಸೇನೆಗೆ ಇದೇ ಮೊದಲ ಬಾರಿಗೆ ಸದ್ಯದಲ್ಲೇ ಮಹಿಳಾ ಯೋಧರು ಸೇರ್ಪಡೆಯಾಗಲಿರುವುದು ಹಾಗೂ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಗ್ರಾಮದ ಹೊರವಲಯದ ಗುಡಿಸಲಿನಲ್ಲಿ ವಾಸಿಸುವ ಅಲೆಮಾರಿ ಸಮುದಾಯದ ಮಹಿಳೆ ಗುತ್ತೆವ್ವ ದುರಗಮುರಗಿ ಅವರು ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಆಯ್ಕೆಯಾದ ಸುದ್ದಿಗಳು (ಪ್ರ.ವಾ., ಏ. 2) ಮಹಿಳೆಯರ ಸಬಲೀಕರಣದಲ್ಲಿ ಸಾಧಿಸಿರುವ ಯಶಸ್ಸಿನ ಸಂಕೇತಗಳಂತೆ ಗೋಚರಿಸುತ್ತಿವೆ. ಶಿಕ್ಷಣ, ಉದ್ಯೋಗ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ ಒದಗಿಸಲಾಗಿರುವ ಮೀಸಲಾತಿಯ ಕಾರಣದಿಂದ ನಮ್ಮ ಸಮಾಜವು ಲಿಂಗತ್ವ ಸಮಾನತೆಯನ್ನು ಸಾಧಿಸುವ ದಿಸೆಯಲ್ಲಿ ಪ್ರಯತ್ನ ನಡೆಸಿದೆ. ಆದರೂ ಲಿಂಗತ್ವ ಸಮಾನತೆಯನ್ನು ಸಾಧಿಸುವ ಹಾದಿ ಇನ್ನೂ ದೀರ್ಘವಾಗಿಯೇ ಇದೆ.


ಬಾಹ್ಯ ನೋಟಕ್ಕೆ ಲಿಂಗತ್ವ ಸಮಾನತೆಯ ಅಸ್ತಿತ್ವ ಗೋಚರವಾದರೂ ಆಳದಲ್ಲಿ ವಿವಿಧ ರೀತಿಯ ಅಸಮಾನತೆಗಳು ಹುದುಗಿರುತ್ತವೆ. ಅವುಗಳನ್ನು ಗುರುತಿಸಲು ಲಿಂಗತ್ವದ ಮಸೂರವನ್ನು ಹಾಕಿಕೊಂಡು ಚಿಕಿತ್ಸಾತ್ಮಕವಾಗಿ ನೋಡಬೇಕಾಗುತ್ತದೆ. ಉದಾಹರಣೆಗೆ, ಶಿಕ್ಷಣ ಇಲಾಖೆಯ 2019-20ನೇ ಸಾಲಿನ ಅಧಿಕೃತ ಅಂಕಿ-ಅಂಶದ ಪ್ರಕಾರ, ರಾಜ್ಯದಲ್ಲಿ 1ರಿಂದ 10ನೇ ತರಗತಿಯಲ್ಲಿ ಒಟ್ಟು 54.10 ಲಕ್ಷ ಬಾಲಕರು ದಾಖಲಾಗಿದ್ದರೆ, 50.24 ಲಕ್ಷ ಬಾಲಕಿಯರು ದಾಖಲಾಗಿದ್ದಾರೆ. ಬಾಲಕರಿಗಿಂತ ಒಟ್ಟು 3.86 ಲಕ್ಷದಷ್ಟು ಬಾಲಕಿಯರ ಸಂಖ್ಯೆ ಕಡಿಮೆ ಇರುವುದನ್ನು ಗುರುತಿಸಬಹುದು.

ಯಾವುದೇ ಡೊನೇಶನ್ ಹಾಗೂ ಪ್ರವೇಶಾತಿ ಶುಲ್ಕವಿಲ್ಲದೇ ಮಕ್ಕಳನ್ನು ದಾಖಲು ಮಾಡಬಹುದಾದ ಸರ್ಕಾರಿ ಹಾಗೂ ಅನುದಾನಿತ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಬಾಲಕಿಯರ ಸಂಖ್ಯೆಯು ಬಾಲಕರ ಸಂಖ್ಯೆಗಿಂತ ಹೆಚ್ಚಿದೆ. ಸರ್ಕಾರಿ ಶಾಲೆಗಳ 1ರಿಂದ 10ನೇ ತರಗತಿಗಳಲ್ಲಿ ಒಟ್ಟು 80,633 ಬಾಲಕರು ದಾಖಲಾಗಿದ್ದರೆ, ಬಾಲಕಿಯರ ಸಂಖ್ಯೆ 88,417 ಇದೆ. ಅನುದಾನಿತ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 53,146 ಬಾಲಕರು ಹಾಗೂ 68,285 ಬಾಲಕಿಯರು ದಾಖಲಾಗಿದ್ದಾರೆ.

ಡೊನೇಶನ್, ಪ್ರವೇಶಾತಿ ಶುಲ್ಕ ಪಾವತಿ ಮಾಡಬೇಕಾದ ಇಂಗ್ಲಿಷ್ ಮಾಧ್ಯಮ ಅನುದಾನರಹಿತ ಶಾಲೆಗಳಿಗೆ ಪೋಷಕರು ಬಾಲಕಿಯರಿಗಿಂತ ಬಾಲಕರನ್ನು ಹೆಚ್ಚಾಗಿ ದಾಖಲು ಮಾಡುವುದನ್ನು ಗಮನಿಸಬಹುದಾಗಿದೆ. ಅನುದಾನರಹಿತ ಶಾಲೆಗಳ ಇಂಗ್ಲಿಷ್ ಮಾಧ್ಯಮದ 1ರಿಂದ 10ನೇ ತರಗತಿಗಳಲ್ಲಿ 20.37 ಲಕ್ಷ ಬಾಲಕರು, 16.75 ಲಕ್ಷ ಬಾಲಕಿಯರು ದಾಖಲಾಗಿದ್ದಾರೆ. ಇಲ್ಲಿ ಬಾಲಕರ ಸಂಖ್ಯೆಯು 3.62 ಲಕ್ಷದಷ್ಟು ಹೆಚ್ಚಿರುವುದನ್ನು ಗಮನಿಸಬಹುದು.

ಇದರಿಂದ ಪೋಷಕರು ಮಗಳನ್ನು ಸರ್ಕಾರಿ ಅಥವಾ ಅನುದಾನಿತ ಶಾಲೆಗಳ ಇಂಗ್ಲಿಷ್ ಮಾಧ್ಯಮ ಶಾಲೆಗೆ ಕಳುಹಿಸಿದರೆ ಮಗನನ್ನು ಇಂಗ್ಲಿಷ್ ಮಾಧ್ಯಮದ ಅನುದಾನರಹಿತ ಶಾಲೆಗಳಲ್ಲಿ ಕಲಿಯಲು ಹಣ ತೆತ್ತು ಕಳುಹಿಸುತ್ತಾರೆ ಎಂಬುದು ತಿಳಿಯುತ್ತದೆ. ಈ ಕುರಿತಂತೆ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ನಮ್ಮ ಮನೆಯ ಹತ್ತಿರದ ಸಾಮಾನ್ಯ ವರ್ಗದ ಕುಟುಂಬದಲ್ಲಿನ ಪೋಷಕರು ತಮ್ಮ ನಾಲ್ವರು ಹೆಣ್ಣುಮಕ್ಕಳನ್ನು ಸರ್ಕಾರಿ ಶಾಲೆಗೆ ಹಾಗೂ ಮಗನನ್ನು ಪ್ರತಿಷ್ಠಿತ ಖಾಸಗಿ ಶಾಲೆಗೆ ದಾಖಲಿಸಿದ್ದರು. ಈ ಕುರಿತು ಅವರನ್ನು ಪ್ರಶ್ನಿಸಿದಾಗ, ಹೆಣ್ಣುಮಕ್ಕಳಿಗೆ ಸರ್ಕಾರಿ ಶಾಲೆಯೇ ಸಾಕು ಹಾಗೂ ಮಗನು ಖಾಸಗಿ ಶಾಲೆಯಲ್ಲಿ ಓದುವುದು ಅಗತ್ಯವೆಂದೇ ಪ್ರತಿಪಾದಿಸಿದ್ದರು.

ಪಠ್ಯಪುಸ್ತಕಗಳಲ್ಲಿ ಲಿಂಗತ್ವ ಸಮಾನತೆ ಸಾಧಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳು ಆಗಿವೆ. ತರಗತಿಯ ಬೋಧನಾ ಪ್ರಕ್ರಿಯೆ, ಆಟದ ಬಯಲಿನಲ್ಲಿ, ಶಾಲೆಯ ವಿವಿಧ ರೀತಿಯ ಚಟುವಟಿಕೆಗಳಲ್ಲಿ ಬಾಲಕಿಯರ ಪಾಲ್ಗೊಳ್ಳುವಿಕೆಯಲ್ಲಿ ಲಿಂಗತ್ವ ಅಸಮಾನತೆಗಳು ಇನ್ನೂ ಅನೇಕ ಕಡೆ ಜೀವಂತವಾಗಿರುವುದನ್ನು ಪತ್ತೆಹಚ್ಚಬಹುದಾಗಿದೆ.



ಉದ್ಯೋಗಸ್ಥ ಮಹಿಳೆಯರು ಸ್ತ್ರೀ ಸಬಲೀಕರಣದ ಗುರುತುಗಳಾಗಿ ಗೋಚರಿಸಿದರೂ ಕುಟುಂಬ, ಉದ್ಯೋಗ ಹೀಗೆ ಎರಡೂ ಕಡೆ ಮಹಿಳೆ ದುಡಿದು ಹೈರಾಣಾಗುವ ಪರಿಸ್ಥಿತಿ ಹೆಚ್ಚಿನ ಕುಟುಂಬಗಳಲ್ಲಿದೆ. ಚಿಕ್ಕ ವಯಸ್ಸಿನಿಂದಲೂ ಬಾಲಕರನ್ನು ಮನೆಗೆಲಸದ ಕೌಶಲಕ್ಕೆ ತರಬೇತಿ ನೀಡದೇ ಬೆಳೆಸುವುದು ಇದಕ್ಕೆ ಪ್ರಮುಖ ಕಾರಣವೆನ್ನಬಹುದು. ಸಂಸಾರ ರಥದ ಜೋಡಿ ಚಕ್ರಗಳಾದ ಪುರುಷ, ಸ್ತ್ರೀ ಇಬ್ಬರೂ ಸಮಾನವಾಗಿ ಕೆಲಸಗಳನ್ನು ಹಂಚಿಕೊಂಡು ದುಡಿದಲ್ಲಿ ತಾರತಮ್ಯ ನಿವಾರಣೆ ಸಾಧ್ಯವಾಗುತ್ತದೆ. ಇದನ್ನು ಸಾಧ್ಯವಾಗಿಸಲು ಗಂಡುಮಕ್ಕಳನ್ನು ಕೌಟುಂಬಿಕ ಕೆಲಸ ಕಾರ್ಯಗಳಲ್ಲಿ ಚಿಕ್ಕಂದಿನಿಂದಲೇ ತೊಡಗಿಸಿಕೊಳ್ಳಲು ತಾಯಿ-ತಂದೆಯರು ಮನಸ್ಸು ಮಾಡಬೇಕು.

ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಮಹಿಳೆಯರು ಹೊಂದುವುದು ಲಿಂಗತ್ವ ಸಮಾನತೆಯ ಪ್ರಮುಖ ಸೂಚಕವಾಗಿದೆ. ಕುಟುಂಬ, ಉದ್ಯೋಗ, ಸಮಾಜದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸ್ಥಾನ ಹಾಗೂ ಸ್ವಾತಂತ್ರ್ಯವನ್ನು ಮಹಿಳೆಯರು ಹೊಂದುವಂತೆ ಮಾಡುವುದು ಪ್ರಮುಖವಾಗಿದೆ.

ರಾಜ್ಯಗಳ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದೆ. ಸಮಾನ ಪ್ರಾತಿನಿಧ್ಯ ನೀಡುವ ದಿಸೆಯಲ್ಲಿ ಪ್ರಮುಖ ಪ್ರಯತ್ನಗಳಾಗಬೇಕು. ಒಟ್ಟಿನಲ್ಲಿ ಸಮಾಜದಲ್ಲಿ ಬೇರೂರಿರುವ ಲಿಂಗತ್ವ ಅಸಮಾನತೆಗಳನ್ನು ತೊಡೆದುಹಾಕಲು ಇನ್ನಷ್ಟು ಶ್ರಮವಹಿಸಬೇಕಾದ ಅಗತ್ಯ ಇದೆ.

### ವಾಚಕರ ವಾಣಿ

## ಆತ್ಮಸಾಕ್ಷಿಯ ಪಿಸುಮಾತಿಗೆ ಕಿವಿಗೊಡೋಣ

'...ಆತ್ಮಸಾಕ್ಷಿಯ ಪಿಸುಮಾತು' (ಸಂಗತ, ಏ. 5) ಎಂಬ ಡಾ. ಜ್ಯೋತಿ ಅವರ ಲೇಖನ ಅರ್ಥಪೂರ್ಣವಾಗಿದೆ. ಇಂದು ಆತ್ಮಸಾಕ್ಷಿಯನ್ನು ಗಾಳಿಗೆ ತೂರಿದವರೇ ಹೆಚ್ಚು ಮಂದಿ. ಹಲವರು ಅದರ ಪಿಸುಮಾತನ್ನು ಕೇಳಿಸಿಕೊಳ್ಳದ ಜಾಣಕಿವುಡರಾಗಿದ್ದಾರೆ. ಯಾವುದಾದರೂ ವಿಷಯದಲ್ಲಿ ಸಂದೇಹ ಉಂಟಾದಾಗ, ತನ್ನ ಅಂತರಂಗದ ಪಿಸುಮಾತೇ ಪ್ರಮಾಣವೆಂದು ಕಾಳಿದಾಸನು 'ಶಾಕುಂತಲ' ನಾಟಕದಲ್ಲಿ ಹೇಳಿರುವುದು ಮನನೀಯವಾಗಿದೆ. ಹಾಗೆ ನೋಡಿದರೆ ಈಗಲೂ ಹಳ್ಳಿಗಳಲ್ಲಿ ಕಡುಬಡವರು, ದೈವದ ಬಗ್ಗೆ ಹೆದರುವವರು ಈ ಆತ್ಮಸಾಕ್ಷಿಯ ಪಿಸುಮಾತಿಗೆ ಓಗೊಡುತ್ತಿದ್ದಾರೆ ಎಂಬುದು ಸ್ವಲ್ಪಮಟ್ಟಿಗೆ ಸಮಾಧಾನದ ಸಂಗತಿ.

ಗೋಳಗುಮ್ಮಟದಲ್ಲಿ ನಾವು ಯಾವುದೇ ಮೂಲೆಯಿಂದ ಸಣ್ಣಧ್ವನಿಯಲ್ಲಿ ಮಾತನಾಡಿದರೂ ಅದರ ಪಿಸುಮಾತಿನ ಪ್ರತಿಧ್ವನಿಯು ಎಲ್ಲ ಮೂಲೆಗಳಿಂದಲೂ ಹೊರಹೊಮ್ಮುತ್ತದೆ. ಈ ತತ್ವವನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. 'ಅಂತರಂಗದ ಕದವನ್ನು ತೆಗೆದು ನೋಡಣ್ಣ' ಎಂದು ಶರಣರು ಹೇಳಿದರು. ಶಾಂತಿ, ನೆಮ್ಮದಿ, ಸೌಹಾರ್ದದ ಮರುಸ್ಥಾಪನೆ ಆಗಬೇಕೆಂದರೆ, ಆತ್ಮಸಾಕ್ಷಿಯ ಪಿಸುಮಾತಿಗೆ ನಾವು ಕಿವಿಗೊಡಬೇಕು. ಇಂತಹ ಬದಲಾವಣೆಯು ವ್ಯಕ್ತಿಯಿಂದಲೇ ಆರಂಭಗೊಳ್ಳಬೇಕು.

**ಸೌದಾಮಿನಿ ಪ್ರಭಾಕರ,** ಮೈಸೂರು

## ಬಿಸಿಲಿನ ಝಳ: ಮುಂಜಾಗ್ರತಾ ಕ್ರಮ ಅಗತ್ಯ

ಅರಣ್ಯ ಪ್ರದೇಶ ಕಡಿಮೆ ಇರುವ ರಾಯಚೂರಿನಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವ ಉಷ್ಣಾಂಶವು ತೀವ್ರ ಬಿಸಿಗಾಳಿಗೆ ಕಾರಣವಾಗಿದೆ. ಆದರೆ, ಇದರಿಂದ ಸಾರ್ವಜನಿಕರನ್ನು ಪಾರು ಮಾಡಲು ಸರ್ಕಾರ ಮಾತ್ರ ಯಾವುದೇ ಉಪಕ್ರಮಗಳನ್ನು ಪ್ರಕಟಿಸಿಲ್ಲ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ನಿಯಮದ ಅನ್ವಯ, ಉಷ್ಣಾಂಶದಿಂದ ಸಂಭವಿಸಬಹುದಾದ ದುಷ್ಪರಿಣಾಮಗಳ ತಡೆಗೆ ತುರ್ತಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಆಡಳಿತದ ಹೊಣೆಗಾರಿಕೆ. ಆಸ್ಪತ್ರೆಗಳಲ್ಲಿ ಅಗತ್ಯ ಔಷಧ ಸಂಗ್ರಹ, ಸೂಕ್ತ ಚಿಕಿತ್ಸೆ ಸೌಲಭ್ಯ ಒದಗಿಸಬೇಕು. ಸಾರ್ವಜನಿಕ ಸ್ಥಳ, ಬಸ್, ರೈಲು ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ದಾನಿಗಳು, ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು. ನೀರಿನ ಕಿಯೋಸ್ಕ್ ಆರಂಭಿಸಲು ಕ್ರಮ ಕೈಗೊಳ್ಳಬೇಕು.

ಕೆಲಸದ ಸ್ಥಳದಲ್ಲಿ ಕುಡಿಯುವ ನೀರು, ಒಆರ್‌ಎಸ್ ಪೊಟ್ಟಣ ಪೂರೈಕೆ, ನೆರಳಿನ ಶೆಡ್ ನಿರ್ಮಾಣ, ಶಾಲೆ, ಕಾಲೇಜು, ಸರ್ಕಾರಿ ಕಚೇರಿಗಳು ಮತ್ತು ಕಾರ್ಮಿಕರ ಕೆಲಸದ ವೇಳಾಪಟ್ಟಿ ಬದಲಾವಣೆಗೆ ಅವಕಾಶ ಇದೆ. ಹವಾಮಾನ ಇಲಾಖೆಯ ಮುನ್ಸೂಚನೆ ಕುರಿತು ಕಂದಾಯ ಇಲಾಖೆಯಿಂದ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಬಿಸಿಲಿನ ತಾಪದಿಂದ ಜನ, ಜಾನುವಾರು ಸಾವು, ನೋವು ಸಂಭವಿಸದಂತೆ ಎಚ್ಚರ ವಹಿಸಬೇಕು. ರೋಗ ರುಜಿನಗಳು ಹರಡದಂತೆ ನೋಡಿಕೊಳ್ಳಬೇಕು. ಈಗಿನ ಪರಿಸ್ಥಿತಿ ಮುಂದುವರಿದರೆ ಜನರಲ್ಲಿ ಅನಾರೋಗ್ಯ ಹೆಚ್ಚಾಗಬಹುದು. ಆದಕಾರಣ ಸರ್ಕಾರ ತಡಮಾಡದೆ ಕೂಡಲೇ ಕ್ರಮ ಕೈಗೊಳ್ಳಬೇಕು.

**ವಿಜಯಕುಮಾರ್ ಎಚ್.ಕೆ.,** ರಾಯಚೂರು

## ಇಲ್ಲೇ ಇದ್ದಾರೆ ಮಾನವರೂಪಿ ರಾಕ್ಷಸರು

ಭೂಕುಸಿತದಂತಹ ಮಹಾದುರಂತಗಳಿಗೆ ನಿಖರ ಕಾರಣ ಪತ್ತೆಹಚ್ಚುವಂತೆ ಹಾಗೂ ವಿಕೋಪಗಳನ್ನು ಪ್ರತಿಬಂಧಿಸುವ ಕ್ರಮಗಳನ್ನು ಸೂಚಿಸುವಂತೆ ಸರ್ಕಾರ ರಚಿಸಿದ್ದ ವಿಜ್ಞಾನಿಗಳು ಹಾಗೂ ಪರಿಸರತಜ್ಞರ ಸಮಿತಿಯು ಸಲ್ಲಿಸಿರುವ ವರದಿಯ ಹಿನ್ನೆಲೆಯಲ್ಲಿ ಬರೆದಿರುವ ಸಂಪಾದಕೀಯ (ಪ್ರ.ವಾ., ಏ. 5) ಅತ್ಯಂತ ಯೋಗ್ಯವಾಗಿದೆ. ಪ್ರಕೃತಿಯ ಕಿರುಕೋಪ ಸಹ ಎಂತಹ ನಾಶವನ್ನು ತಂದೊಡ್ಡುತ್ತದೆ ಎಂಬುದಕ್ಕೆ ಈಗಾಗಲೇ ಉತ್ತರ ಕರ್ನಾಟಕ, ಕೊಡಗು, ಕೇರಳ ಸಾಕ್ಷಿಯಾಗಿರುವುದನ್ನು ಅರಿಯಬೇಕು. ನಗರೀಕರಣ ಎಂಬ ವಿದೇಶಿ ಮಾದರಿಯನ್ನು ಭಾರತದಲ್ಲಿ ಕುರುಡಾಗಿ ಅನುಸರಿಸುತ್ತಿರುವುದರಿಂದ ಜನಪದ ಸಂಸ್ಕೃತಿ, ಕೂಡುಕುಟುಂಬ, ಸಮನ್ವಯಭಾವ, ಪ್ರಕೃತಿಯ ಆರಾಧನೆ, ಮಾನವೀಯ ಮೌಲ್ಯ ಇತ್ಯಾದಿಗಳನ್ನು ಗಾಳಿಗೆ ತೂರಿದ್ದಾಗಿದೆ.

ಭೂಮಿ, ಗಿಡ, ಮರ, ನದಿ, ಸಮುದ್ರ, ಪರ್ವತ ಇವೆಲ್ಲವೂ ಪ್ರತ್ಯಕ್ಷ ದೈವ ಎಂಬ ಪೂಜ್ಯ ನಂಬಿಕೆಯನ್ನು ನಮ್ಮ ಹಿರಿಯರು ನಮ್ಮಲ್ಲಿ ಬೆಳೆಸಿದ್ದರು. ಆದರೆ ಇಂದು ಅಂತಹ ದೈವವನ್ನೇ ಮಾನವನು ಭಕ್ಷಿಸುತ್ತಿದ್ದಾನೆ. ರಾಕ್ಷಸರ ಬಗ್ಗೆ ಪುರಾಣಗಳಲ್ಲಿ ಕಥೆ ಕೇಳಿದ್ದೇವೆ. ಇಂದು ಇಂತಹ ಮಾನವರೂಪಿ ರಾಕ್ಷಸರು ನಮ್ಮೆದುರಿಗೇ ಇದ್ದಾರೆ. ಆದರೂ ನಾವೇನೂ ಮಾಡಲಾರದಂತಹ ಸ್ಥಿತಿ ಇದೆ.

**ಟಿ.ಪಿ.ಸುಭಾಷಿಣಿ,** ಮೈಸೂರು

## ಶ್ರಮದ ಕೆಲಸ: ವಿಚಾರವಂತರು ಚಿಂತಿಸಲಿ

'ಪುರುಷರು- ಸ್ತ್ರೀಯರ ನಡುವೆ ವೇತನ ತಾರತಮ್ಯ ಏಕೆ?' ಎಂದು ಲೇಖಕಿ ಎಚ್.ಎಸ್.ಅನುಪಮ ಕೇಳಿದ್ದಾರೆ (ಪ್ರ.ವಾ., ಮಾರ್ಚ್ 29). ಖಂಡಿತ ಇಂತಹ ತಾರತಮ್ಯ ಇರಬಾರದು. ನನಗೆ ತಿಳಿದಂತೆ ಶಿಕ್ಷಕ ವೃತ್ತಿಯಲ್ಲಿ, ಎಂಜಿನಿಯರಿಂಗ್‌ನಲ್ಲಿ ಈ ತರಹ ತಾರತಮ್ಯ ಇಲ್ಲ. ಆದರೆ ಅನುಪಮ ಅವರು 'ಕೂಲಿ ಕೆಲಸದವರಲ್ಲೂ ಅದು ಇರಬಾರದು, ಇದು ಅನ್ಯಾಯ' ಎಂದಿದ್ದಾರೆ. ಇದು ಏಕೆ ಹೀಗೆ ಎಂಬ ವಿಚಾರ ನನ್ನ ಮನಸ್ಸಿನಲ್ಲಿ ಬಂದು, ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿರುವ ಒಂದು ಜಾಗಕ್ಕೆ ಹೋಗಿ ನೋಡಿದೆ.

ಅಲ್ಲಿ ಏಳೆಂಟು ಪುರುಷರು ಮತ್ತು ಮೂರ್ನಾಲ್ಕು ಸ್ತ್ರೀಯರು ಕೆಲಸ ಮಾಡುತ್ತಿದ್ದರು. ದಿನಕ್ಕೆ ಪುರುಷರಿಗೆ ₹ 600, ಸ್ತ್ರೀಯರಿಗೆ ₹ 500 ಕೂಲಿ ಎಂದು ತಿಳಿಯಿತು. ಏಕೆ ಈ ತಾರತಮ್ಯ ಎಂದು ಅಲ್ಲೇ ಇದ್ದ ಕಟ್ಟಡ ಕಂಟ್ರಾಕ್ಟರ್‌ನನ್ನು ಕೇಳಿದ್ದಕ್ಕೆ ಅವರು 'ನೀವು ಹೇಳಿದಂತೆ ಮಾಡಿದರೆ ನಾವು ಪಾಪರ್ ಆಗ್ತೀವಿ. ನೀವೇ ನೋಡಿ ಅವರ ಕೆಲಸಗಳನ್ನು' ಎಂದರು. ಸ್ವಲ್ಪ ಹೊತ್ತು ಅಲ್ಲೇ ಕುಳಿತು ಅವರ ಕೆಲಸವನ್ನು ವೀಕ್ಷಿಸಿದೆ. ಅವರು ಕಾಂಕ್ರೀಟ್ ಸಾಗಿಸುತ್ತಿದ್ದರು. ಪುರುಷರು ಎರಡೂವರೆ ಸೆನಕೆ ಬಾಂಡ್ಲಿಯಲ್ಲಿ ಹಾಕಿಸಿಕೊಂಡರೆ, ಸ್ತ್ರೀಯರು ಒಂದೂವರೆ ಸೆನಕೆ ಮಾತ್ರ. ಏಣಿ ಮೇಲೆ ಹತ್ತಿ ಬಾಂಡ್ಲಿ ಅಂದಿಸುವ ಕೆಲಸ ಪುರುಷನಿಗೆ ಮಾತ್ರ. ಆಗ ನನಗೆ ಅನಿಸಿತು, ಇಂತಹ ಶ್ರಮಪೂರಿತ ಕೆಲಸಗಳನ್ನು ಪುರುಷರ ಸಮನಾಗಿ ಸ್ತ್ರೀಯರು ಮಾಡಲಾರರು. ಭಗವಂತನು ಈ ಸೃಷ್ಟಿಯಲ್ಲಿ ಇಂತಹ ತಾರತಮ್ಯ ಏಕೆ ಮಾಡಿಹನೋ ತಿಳಿಯದು.

ಶ್ರಮವಹಿಸಿ ಮಾಡುವ ಕೆಲಸಗಳಿಗೆ ಸ್ತ್ರೀಯರಿಗಿಂತ ಪುರುಷರಿಗೆ ಹೆಚ್ಚು ವೇತನ ಕೊಡುವುದು ಸಹಜವಾಗಿದೆ. ವಿಚಾರವಾದಿಗಳು ಈ ಕುರಿತು ವಿಚಾರ ಮಾಡಬೇಕು.


**ಜಿ.ಎಚ್.ವೆಂಕಟೇಶ್ ಮೂರ್ತಿ,** ಚಿಂತಾಮಣಿ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ‘ನದಿ ಜೋಡಣೆ ವಿರುದ್ಧ ಸೊಲ್ಲೆತ್ತದ ಮೂರ್ಖ ಸಂಸದರು’

• ಎಂ.ಎನ್.ಯೋಗೇಶ್

ಪ್ರಜಾವಾಣಿ ಸಂದರ್ಶನ



**ಜಿ.ಮಾದೇಗೌಡ**, ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ

**ಕಾವೇರಿ** ನದಿ ನೀರಿನ ವಿಚಾರದಲ್ಲಿ ತಮಿಳುನಾಡು ಸರ್ಕಾರ ತನ್ನ ಬ್ಲ್ಯಾಕ್‌ಮೇಲ್ ತಂತ್ರ ಮುಂದುವರಿಸಿದೆ. ಚುನಾವಣೆ ಹೊಸ್ತಿಲಲ್ಲಿದ್ದಾಗ ಪ್ರಧಾನಮಂತ್ರಿಯನ್ನು ಆಹ್ವಾನಿಸಿ ನದಿ ಜೋಡಣೆ ಯೋಜನೆಗೆ ಚಾಲನೆ ಕೊಡಿಸಿರುವುದು ಸಂಪೂರ್ಣ ರಾಜಕಾರಣ. ಪ್ರಧಾನಿ ಕೂಡ ತಮ್ಮ ಪಕ್ಷದ ಲಾಭಕ್ಕಾಗಿ ವಿವಾದಾತ್ಮಕ ಯೋಜನೆ ಬ್ಯಾಕ್‌ಯಾರ್ಡ್ ಎಂಬುದು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ, ಮಾಜಿ ಸಂಸದ ಜಿ.ಮಾದೇಗೌಡ ಅವರ ಸ್ಪಷ್ಟೋಕ್ತಿ. ನದಿ ಜೋಡಣೆ ಯೋಜನೆಯಿಂದ ಸದ್ಯಕ್ಕೆ ಕರ್ನಾಟಕಕ್ಕೆ ತೊಂದರೆ ಇಲ್ಲದಿರಬಹುದು, ಆದರೆ ಮುಂದೆ ದೊಡ್ಡ ಅಪಾಯ ಸೃಷ್ಟಿಯಾಗಬಹುದು. ಕಾವೇರಿ ನಮ್ಮ ಜೀವನದಿ ಎಂಬ ವಾದ ಕೇವಲ ಮಾತಿಗೆ ಸೀಮಿತವಾಗಬಾರದು; ಕೃತಿಯಲ್ಲೂ ಕಾಣಬೇಕು. ಈ ವಿಚಾರದಲ್ಲಿ ನಮ್ಮ ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕು ಎಂದು ಅವರು ‘ಪ್ರಜಾವಾಣಿ’ ಸಂದರ್ಶನದಲ್ಲಿ ಒತ್ತಾಯಿಸಿದರು.

**• ಸುಪ್ರೀಂ ಕೋರ್ಟ್ ತೀರ್ಪಿನಿಂದ ಸಿಕ್ಕ 14.75 ಟಿಎಂಸಿ ಅಡಿ ಹೆಚ್ಚುವರಿ ನೀರಿನಿಂದ ತೃಪ್ತಿಪಟ್ಟುಕೊಂಡ ಕರ್ನಾಟಕ ಸರ್ಕಾರ, ನದಿ ಜೋಡಣೆ ಯೋಜನೆಗೆ ಆಕ್ಷೇಪ ಸಲ್ಲಿಸುವಲ್ಲಿ ಸೋತ ಹಾಗಿದೆಯೇ?**

ಕಾವೇರಿ ವಿಚಾರದಲ್ಲಿ ತಮಿಳುನಾಡು ಸರ್ಕಾರ, ಅಲ್ಲಿಯ ಹೋರಾಟಗಾರರು ಹಾಗೂ ವಿರೋಧ ಪಕ್ಷಗಳು ಏಕ ನಿಲುವು ಹೊಂದಿವೆ. ಆದರೆ ನಮ್ಮಲ್ಲಿ ಆ ರೀತಿಯ ಪರಿಸ್ಥಿತಿ ಇಲ್ಲ. ಹೋರಾಟಗಾರರ ಮೇಲೆ ಸರ್ಕಾರಕ್ಕೆ ವಿಶ್ವಾಸವೇ ಇಲ್ಲ. ತಮಿಳುನಾಡಿನಲ್ಲಿ ನದಿ ಜೋಡಣೆ ಕಾಮಗಾರಿಗೆ ಚಾಲನೆ ದೊರೆಯುವವರೆಗೂ ನಮ್ಮ ಸರ್ಕಾರಕ್ಕೆ ಈ ವಿಚಾರ ಗೊತ್ತೇ ಇರಲಿಲ್ಲ. ನೀರಾವರಿ ಇಲಾಖೆಯ ‘ಕಾವೇರಿ ಸೆಲ್’ ಏನು ಮಾಡುತ್ತಿತ್ತು, ಗುಪ್ತಚರ ಇಲಾಖೆಯ ವರದಿ ಇರಲಿಲ್ಲವೇ, ಸರ್ಕಾರದ ಯೋಜನಾ ಸಮಿತಿ ಎಲ್ಲಿತ್ತು? ಕಾಮಗಾರಿ ಚಾಲನೆಯಾಗುವುದಕ್ಕೆ ಮುನ್ನವೇ ಆಕ್ಷೇಪ ಎತ್ತಬೇಕಾಗಿತ್ತು. ನಾಡು, ನುಡಿ, ಜಲದ ರಕ್ಷಣೆ ವಿಚಾರದಲ್ಲಿ ಬಿಜೆಪಿ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ. ಜಾಣ ಪೆದ್ದನ ರೀತಿ ನಡೆದುಕೊಳ್ಳುತ್ತಿದೆ.

**• ನಮ್ಮ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಮೇಕೆದಾಟು ಯೋಜನೆಗೆ ಅನುಮೋದನೆ ಪಡೆಯಬಹುದಲ್ಲವೇ?**

ಅನುಮೋದನೆ ಮಾತು ಹಾಗಿರಲಿ, ಈ ಮೂರ್ಖ ಸಂಸದರು ನದಿ ಜೋಡಣೆ ವಿಚಾರದಲ್ಲೇ ಸೊಲ್ಲೆತ್ತಿಲ್ಲ. ಕಾಮಗಾರಿಗೆ ಪ್ರಧಾನಿ ಚಾಲನೆ ಕೊಟ್ಟ ನಂತರ ಚಳಿಗಾಲದ ಲೋಕಸಭಾ ಅಧಿವೇಶನ ನಡೆಯಿತು. ಯಾರಾದರೂ ಒಬ್ಬರು ಈ ವಿಚಾರ ಪ್ರಸ್ತಾಪ ಮಾಡಿದರಾ? ಎಲ್ಲರೂ ಬೇಡ, ಕಾವೇರಿ ಕಣಿವೆಯ 8 ಜಿಲ್ಲೆಯ ಸಂಸದರಾದರೂ ಧ್ವನಿ ಎತ್ತಬೇಕಾಗಿತ್ತು. ಕೊನೆ ಪಕ್ಷ ಮಂಡ್ಯ ಸಂಸದರು ಸುಮಲತಾ ಅವರಾದರೂ ಮಾತನಾಡಬೇಕಾಗಿತ್ತು. 1996ರಲ್ಲಿ ಕಾವೇರಿ ಹೋರಾಟ ತೀವ್ರಗೊಂಡಿದ್ದಾಗ ನಮ್ಮದೇ ಕಾಂಗ್ರೆಸ್ ಸರ್ಕಾರವಿತ್ತು, ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದರು. ನಾನು ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಬಿಸಾಡಿ ಬಂದು ಹೋರಾಟಕ್ಕೆ ಧುಮುಕಿದೆ.

**• ಇಷ್ಟು ದಿನ ಪಾಲಿನ ನೀರಿಗಾಗಿ ಹೋರಾಡುತ್ತಿದ್ದೆವು, ಈಗ ಹೆಚ್ಚುವರಿ ನೀರಿಗಾಗಿ ಹೋರಾಟ ನಡೆಸಬೇಕಾ?**

ಹೋರಾಟ ಕರ್ನಾಟಕದ ಕರ್ಮ, ಇತಿಹಾಸವೇ ನಮಗೆ ಮೋಸ ಮಾಡಿದೆ. ಅನ್ಯಾಯದ ವಿರುದ್ಧ ಹೋರಾಟ ಅನಿವಾರ್ಯ. ಇನ್ನು ಮುಂದೆಯಾದರೂ ಪರ್ಯಾಯ ಹೋರಾಟಗಳಿಗೆ ಕಡಿವಾಣ ಬೀಳಬೇಕು. ಸರ್ಕಾರ, ವಿರೋಧ ಪಕ್ಷಗಳು, ಹೋರಾಟಗಾರರು ಒಂದೇ ದಾರಿಯಲ್ಲಿ ನಡೆದು ನಮ್ಮ ನೀರಿನ ಹಕ್ಕನ್ನು ಉಳಿಸಿಕೊಳ್ಳಬೇಕು.

**• ನದಿ ಜೋಡಣೆ ವಿಚಾರದಲ್ಲಿ ರೈತರ ನಿಲುವೇನು?**

ಹೋರಾಟವೇ ರೈತರ ನಿಲುವು. ಮೇಕೆದಾಟು ಯೋಜನೆಗೆ ಕೂಡಲೇ ಅನುಮೋದನೆ ಪಡೆದು ಕಾಮಗಾರಿ ಆರಂಭಿಸಬೇಕು. ಕೇಂದ್ರ ಸರ್ಕಾರ ನೀರಿನ ವಿಷಯದಲ್ಲಿ ರಾಜಕಾರಣ ಮಾಡುವುದನ್ನು ಬಿಡಬೇಕು. ಒಂದು ರಾಜ್ಯದ ಪರವಾಗಿ ನಿಲ್ಲುವ ವಿಚಾರಕ್ಕೆ ನಮ್ಮ ಧಿಕ್ಕಾರವಿದೆ.

**• ಕೆರೆ, ಕಟ್ಟೆ, ಒಡ್ಡು ಕಟ್ಟಿದರೂ ತಮಿಳುನಾಡು ಕ್ಯಾತೆ ತೆಗೆಯುತ್ತದಲ್ಲ?**

ಅದಕ್ಕೆ ನಮ್ಮ ಸರ್ಕಾರಗಳ ನಿರ್ಲಕ್ಷ್ಯವೇ ಕಾರಣ, ತಮಿಳುನಾಡು ಕ್ಯಾತೆ ವಿರುದ್ಧ ಹೋರಾಡುವ ಧೈರ್ಯ ಪ್ರದರ್ಶಿಸುವ ಕೆಲಸವಾಗಿಲ್ಲ. ಹಲವು ದಶಕದಿಂದ ನಮ್ಮ ರಾಜ್ಯದಲ್ಲಿ ಕಾವೇರಿ ನೀರು ಸದುಪಯೋಗ ಮಾಡಿಕೊಳ್ಳುವಂತಹ ಯಾವುದೇ ನೀರಾವರಿ ಯೋಜನೆಗಳು ನಡೆದಿಲ್ಲ. ಇದಕ್ಕೆ ತಮಿಳುನಾಡಿನ ಕ್ಯಾತೆ ಭಯವೂ ಒಂದು ಪ್ರಮುಖ ಕಾರಣ.

**• ಮಂಡ್ಯ, ಮೈಸೂರು ಭಾಗದಲ್ಲಿ ರೈತರು ನೀರನ್ನು ಪೋಲು ಮಾಡುತ್ತಾರೆ ಎಂಬ ಆರೋಪವಿದೆಯಲ್ಲಾ?**

ಹಳೆಯ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಕೇವಲ ಕಬ್ಬು, ಭತ್ತಕ್ಕೆ ಜೋತು ಬಿದ್ದಿದ್ದರು. ಹೀಗಾಗಿ ನೀರು ವ್ಯರ್ಥವಾಗುತ್ತಿದೆ ಎಂಬ ಅಭಿಪ್ರಾಯವಿತ್ತು. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ಜನರಲ್ಲಿ ಜಲಸಾಕ್ಷರತೆ ಬಂದಿದೆ. ತರಕಾರಿ, ತೋಟಗಾರಿಕೆ, ಹೂವು, ಹಣ್ಣು ಬೆಳೆಯುವ ಮೂಲಕ ನೀರನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ.

**• ಮಳೆ ಕುಗ್ಗುತ್ತಿದೆ, ನದಿ ನೀರಿನ ಇಳುವರಿ ಕಡಿಮೆಯಾಗುತ್ತಿದೆ, ಹೊಸ ಯೋಜನೆಗಳು ಸಾಕಾರಗೊಳ್ಳುವವೇ?**

ಇರುವ ನೀರನ್ನು ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಸಮರೋಪಾದಿ ಕಾರ್ಯಕ್ರಮ ರೂಪಿಸಬೇಕು. ಅಂತರ್ಜಲ ಹೆಚ್ಚಿಸುವ ಕೆಲಸ ಮಾಡಬೇಕು. ಕೆರೆಕಟ್ಟೆ ಒತ್ತುವರಿ ತೆರವುಗೊಳಿಸಿ ನೀರು ತುಂಬಿಸುವ ಕೆಲಸದಲ್ಲಿ ಸಣ್ಣ ನೀರಾವರಿ ಇಲಾಖೆಯ ಪಾತ್ರ ದೊಡ್ಡದಿದೆ. ನಾಲೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿಗೊಳಿಸಿ ಕೊನೆ ಭಾಗಕ್ಕೂ ನೀರು ತಲುಪಿಸಬೇಕು. ಸಣ್ಣ ಸಣ್ಣ ನೀರಾವರಿ ಯೋಜನೆಗಳಿಂದ ರೈತರಿಗೆ ದೊಡ್ಡ ಲಾಭವಿದೆ.

## ರಾಜ್ಯಕ್ಕೆ ಅನ್ಯಾಯ



ಮೇಕೆದಾಟು ಯೋಜನೆಗೆ ಒಪ್ಪಿಗೆ ಪಡೆಯಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ಸೋತಿದೆ. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು ಲೋಕಸಭೆಯಲ್ಲಿ ಸಮರ್ಥವಾಗಿ ವಿಷಯ ಪ್ರತಿಪಾದನೆ ಮಾಡುತ್ತಿಲ್ಲ. ಇದರಿಂದಾಗಿ ರಾಜ್ಯಕ್ಕೆ ಅನ್ಯಾಯವಾಗಿದೆ. ಈ ಯೋಜನೆ ಸಾಕಾರಗೊಳಿಸಲು ಪ್ರಯತ್ನ ಮುಂದುವರಿಸಬೇಕು.

**ಡಿ.ಎಂ.ರವಿ ದೊಡ್ಡಪಾಳ್ಯ,** ಶ್ರೀರಂಗಪಟ್ಟಣ

## ಅಭಿಮಾನದ ಕೊರತೆ



ನಮ್ಮ ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿಯ ಕೊರತೆ ಇದೆ. ನಮ್ಮ ರಾಜ್ಯದ ಜನರಲ್ಲೂ ನಾಡು, ನುಡಿ, ಜಲದ ಬಗ್ಗೆ ಅಭಿಮಾನ ಕಡಿಮೆಯಾಗಿದೆ. ಅಭಿಮಾನದ ಕೊರತೆಯಿಂದ ರಾಜ್ಯಕ್ಕೆ ಪದೇಪದೇ ಅನ್ಯಾಯವಾಗುತ್ತಿದೆ. ನದಿ ನೀರಿನ ವಿಚಾರದಲ್ಲಿ ಸಮರ್ಥವಾಗಿ ಹೋರಾಟ ನಡೆಸುವವರು ರಾಜ್ಯದಲ್ಲಿ ಇಲ್ಲವಾಗಿದ್ದಾರೆ. ತಮಿಳುನಾಡು ಆಗಾಗ ಕ್ಯಾತೆ ತೆಗೆದು ರಾಜ್ಯಕ್ಕೆ ಅನ್ಯಾಯವಾಗುವಂತಹ ವಾತಾವರಣ ಸೃಷ್ಟಿಸುತ್ತಿದೆ.

**ಮಹಾದೇವು,** ಮಳವಳ್ಳಿ

## ಕೇಂದ್ರದ ಮೃದು ಧೋರಣೆ



ತಮಿಳುನಾಡಿನಲ್ಲಿ ಕಾವೇರಿ ನದಿಯ ಹೆಚ್ಚುವರಿ ನೀರು ಬಳಸಿಕೊಳ್ಳಲು ನದಿ ಜೋಡಣೆ ಕಾರ್ಯ ಆರಂಭವಾಗಿರುವುದು ಆ ರಾಜ್ಯದ ಆಳುವ ಜನರ ಇಚ್ಛಾಶಕ್ತಿಯನ್ನು ತೋರುತ್ತದೆ. ಆ ಬದ್ಧತೆ ನಮ್ಮ ಜನಪ್ರತಿನಿಧಿಗಳಿಗೆ ಇಲ್ಲದೇ ಇರುವುದು ವಿಪರ್ಯಾಸ. ಕೇಂದ್ರ ಸರ್ಕಾರ ಕೂಡ ತಮಿಳುನಾಡಿನ ಬಗ್ಗೆ ಮೃದು ಧೋರಣೆ ಹೊಂದಿದೆ. ಈ ಬಗ್ಗೆ ಜನರೇ ಗಟ್ಟಿ ದನಿ ಎತ್ತುವ ಅನಿವಾರ್ಯತೆ ಇದೆ.

**ಶೀಲಾ,** ಗಂಜಾಂ

## ತಮಿಳುನಾಡು ಲಾಭ ಪಡೆದುಕೊಂಡಿದೆ



ತಮಿಳುನಾಡು ಸರ್ಕಾರ ಪ್ರತಿಬಾರಿಯೂ ನೀರಾವರಿ ವಿಚಾರದಲ್ಲಿ ಕರ್ನಾಟಕದ ಮೃದು ಧೋರಣೆಯ ಲಾಭ ಪಡೆದುಕೊಳ್ಳುತ್ತಿದೆ. ತಮಿಳುನಾಡಿಗೆ ಬಿಡಬೇಕಾದ ನೀರನ್ನು ಬಿಟ್ಟರೂ ತಗಾದೆ ತೆಗೆಯುತ್ತಲೇ ಇರುತ್ತದೆ. ಬಿಟ್ಟ ನೀರಿನ ಅಳತೆಯನ್ನು ಇಟ್ಟುಕೊಂಡರೆ ಒಳ್ಳೆಯದು. ಇದೀಗ ಮೇಕೆದಾಟು ವಿಚಾರದಲ್ಲೂ ತಗಾದೆ ತೆಗೆದಿದೆ. ಈ ಬಾರಿ ರಾಜ್ಯಕ್ಕೆ ಹೆಚ್ಚಿನ ಅನುಕೂಲವಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ರೈತರು ಬೀದಿಗಿಳಿಯುತ್ತಾರೆ. ಎಚ್ಚರಿಕೆಯ ನಡೆ ಅವಶ್ಯಕ.

**ಚೇತನ್,** ಯುವ ರೈತ, ಗೌಡನಕಟ್ಟೆ, ತುಮಕೂರು ಜಿಲ್ಲೆ

# ಮೇಕೆದಾಟುವಿಗೆ ಅಡ್ಡಗಾಲು, ನದಿ ಜೋಡಣೆಗೆ ಅಡಿಗಲ್ಲು

• ಬೃಜೇಶ್ ಕಾಳಪ್ಪ



ಕಾವೇರಿ ಜಲ ವಿವಾದ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಕಾವೇರಿ ನ್ಯಾಯಮಂಡಳಿ ರಚನೆ ಆದಂದಿನಿಂದ ನೀರಿನ ಹಂಚಿಕೆಯಲ್ಲಿ ಕೊರತೆ ಬಗ್ಗೆ ಅಪಸ್ವರ ಎತ್ತುತ್ತಲೇ ಬಂದಿರುವ ತಮಿಳುನಾಡು ರಾಜ್ಯ, ಇದೀಗ ಕೊಳ್ಳದ ‘ಹೆಚ್ಚುವರಿ’ ನೀರು ಬಳಸಿಕೊಳ್ಳಲು ಯೋಜನೆ ಕೈಗೆತ್ತಿಕೊಂಡಿದೆ. ಆ ಮೂಲಕ, ಕಾವೇರಿ ನೀರು ಹಂಚಿಕೆ ಬಿಕ್ಕಟ್ಟಿಗೆ ಮತ್ತೊಂದು ಆಯಾಮ ನೀಡಲು ಮುಂದಾಗಿದೆ.

ಬ್ರಿಟಿಷ್ ಆಡಳಿತದಲ್ಲಿ ಮಾಡಿಕೊಂಡ ಒಪ್ಪಂದಗಳಿಂದಾಗಿ (1892 ಮತ್ತು 1924) ಕಾವೇರಿಯಿಂದ ಸಂಗ್ರಹವಾಗುವ 740 ಟಿಎಂಸಿ ಅಡಿ ನೀರಿನ ಪೈಕಿ ಸಿಂಹಪಾಲು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಸ್ವಾತಂತ್ರ್ಯಪೂರ್ವದ ಈ ಒಪ್ಪಂದಗಳಿಂದಾಗಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಈ ಒಪ್ಪಂದಗಳನ್ನು ನಾವು ವಿರೋಧಿಸುತ್ತ ಬಂದಿದ್ದೇವೆ. ರದ್ದುಪಡಿಸುವಂತೆಯೂ ಕೋರಿದ್ದೇವೆ. ಅದೇ ಸಂದರ್ಭದಲ್ಲಿ ಕಾಲಕಾಲಕ್ಕೆ ನ್ಯಾಯಾಲಯ ನೀಡಿದ ಆದೇಶಗಳನ್ನು ಪಾಲಿಸುತ್ತ ಬಂದಿದ್ದೇವೆ. 50 ವರ್ಷಗಳ ಬಳಿಕ ಒಪ್ಪಂದಗಳು ರದ್ದಾಗುತ್ತವೆ. ಅವಧಿ ಮುಗಿದ ಬಳಿಕವೂ ಆ ಒಪ್ಪಂದವನ್ನು ರದ್ದುಪಡಿಸಲು ಸಾಧ್ಯವಾಗದೇ ಇರುವುದು ನಮ್ಮಿಂದ ಆಗಿರುವ ಪ್ರಮಾದ. ಈ ಅತಾರ್ಕಿಕ ಒಪ್ಪಂದಗಳಿಂದಾಗಿ ತಮಿಳುನಾಡಿನ ವಾದಕ್ಕೇ ನ್ಯಾಯಮಂಡಳಿಯಲ್ಲಿ ಹೆಚ್ಚು ಪುಷ್ಟಿ ದೊರೆತಿದೆ.

ನಾಗರಿಕತೆಯ ಹಿನ್ನೆಲೆ ಗಮನಿಸಿದರೆ, ನದಿಪಾತ್ರದ ಕೊನೆಯ ಭಾಗದಲ್ಲಿ ಜನ ಮೊದಲು ನೆಲೆ ಕಂಡುಕೊಳ್ಳುತ್ತಾರೆ. ಹೀಗಾಗಿ, ಕಾವೇರಿ ಅಚ್ಚುಕಟ್ಟು ಪ್ರದೇಶದ ಕೊನೆಯಲ್ಲಿರುವವರು ನೀರಿನ ಹಳೆಯ ಬಳಕೆದಾರರು. ಈ ಅರ್ಥದಲ್ಲಿ ತಮಿಳುನಾಡು ಮೊದಲ ಬಳಕೆದಾರರ. ಬಳಿಕ ಕರ್ನಾಟಕ ಬಳಕೆ ಮಾಡಬೇಕು. ಈಗ ಕರ್ನಾಟಕದಲ್ಲಿರುವ ಕಾವೇರಿ ನದಿಪಾತ್ರದಲ್ಲಿ ಜನಸಂಖ್ಯೆ ವಿಪರೀತವಾಗಿ ಹೆಚ್ಚಿದೆ. ಹೀಗಾಗಿ, ನೀರಿನ ಬಳಕೆ ಪ್ರಮಾಣ ಕೂಡಾ ಹೆಚ್ಚು. 1991ರಲ್ಲಿ, ತಮಿಳುನಾಡಿಗೆ 205 ಟಿಎಂಸಿ ಅಡಿ ನೀರು ಬಿಡುವಂತೆ ಕಾವೇರಿ ನ್ಯಾಯಮಂಡಳಿ ಮಧ್ಯಂತರ ತೀರ್ಪು ನೀಡಿತ್ತು. ಆಗ ನೀರಿನ ಮಾಪಕ ಮೆಟ್ಟೂರಿನಲ್ಲಿತ್ತು. ಅಲ್ಲಿಂದ ಹರಿಯುವ ನೀರಿನ ಪ್ರಮಾಣ ನಮಗೆ (ಕರ್ನಾಟಕಕ್ಕೆ) ಸರಿಯಾಗಿ ಸಿಗುತ್ತಿರಲಿಲ್ಲ. ತಮಿಳುನಾಡಿನಲ್ಲಿ ಮಾಪನ ಇದ್ದುದರಿಂದ ಅಂದಾಜು 25 ಟಿಎಂಸಿ ಅಡಿಯಷ್ಟು ನೀರು ಆ ರಾಜ್ಯಕ್ಕೆ ಹೆಚ್ಚು ಹರಿದು ಹೋಗುತ್ತಿತ್ತು. ಅದರಿಂದ ಮೋಸ ಆಗುತ್ತಿತ್ತು.

ನೀರು ಹಂಚಿಕೆ ವಿಷಯ ಬಂದಾಗ, ನದಿ ನೀರನ್ನು ಬಟ್ಟಲಲ್ಲಿ ಇದ್ದಂತೆ ಯೋಚನೆ ಮಾಡುತ್ತೇವೆ. ಕಾವೇರಿ ನ್ಯಾಯಮಂಡಳಿ 2007ರಲ್ಲಿ ನೀಡಿದ ಅಂತಿಮ ತೀರ್ಪಿನಂತೆ ಬಿಳಿಗುಂಡ್ಲು ಮಾಪನ ಕೇಂದ್ರದಿಂದ ಜಲ ವರ್ಷವೊಂದರಲ್ಲಿ (ಜೂನ್‌ನಿಂದ ಮೇ) 192 ಟಿಎಂಸಿ ಅಡಿ ನೀರು ತಮಿಳುನಾಡಿಗೆ ಬಿಡಬೇಕಿತ್ತು. ಬಿಳಿಗುಂಡ್ಲುವಿನಲ್ಲಿ ಕೇಂದ್ರ ಮಾಪನ ಆರಂಭಿಸಿದ ಬಳಿಕ ತಮಿಳುನಾಡಿಗೆ ಹರಿದು ಹೋಗುವ ನೀರಿನ ಪ್ರಮಾಣವನ್ನು ನಿಖರವಾಗಿ ತಿಳಿಯಲು ಸಾಧ್ಯವಾಗಿದೆ. ಈ ತೀರ್ಪಿನಿಂದಾಗಿ ತಮಿಳುನಾಡಿಗೆ ಹಂಚಿಕೆ ಮಾಡಬೇಕಾದ ನೀರಿನ ಪ್ರಮಾಣ ಕಡಿಮೆ ಆಯಿತು. ರಾಜ್ಯ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ವಿಚಾರಣೆ ನಡೆಸಿ 2018ರ ಫೆಬ್ರುವರಿಯಲ್ಲಿ ನ್ಯಾಯಮಂಡಳಿ ನೀಡಿದ ತೀರ್ಪಿನಿಂದ ತಮಿಳುನಾಡಿಗೆ ಹರಿಸುವ ನೀರಿನಲ್ಲಿ 14.5 ಟಿಎಂಸಿ ಅಡಿ ಮತ್ತೆ ಕಡಿತಗೊಂಡಿತ್ತು. ಪರಿಣಾಮ, ಕರ್ನಾಟಕಕ್ಕೆ 14.75 ಟಿಎಂಸಿ ಅಡಿ ಹೆಚ್ಚುವರಿ ನೀರು ಬಳಕೆಗೆ ಅವಕಾಶ ಕಲ್ಪಿಸಿತ್ತು. ಹೀಗಾಗಿ, ತಮಿಳುನಾಡಿಗೆ 192 ಟಿಎಂಸಿ ಅಡಿಯ ಬದಲು 177 ಟಿಎಂಸಿ ಅಡಿ ನೀರು ಕರ್ನಾಟಕ ಹರಿಸಬೇಕು.

ಹೀಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ನೀರಿನ ಸಮಾನಾಂತರ ಹಂಚಿಕೆ ತತ್ವವನ್ನು ನ್ಯಾಯಮಂಡಳಿ ರೂಪಿಸಿದೆ. ಆ ಮೂಲಕ, ನಮಗೆ ನೀರಿನ ಕೊರತೆ ಕಡಿಮೆ ಆಗುತ್ತಲೇ ಬಂತು. ಕಾವೇರಿ ಕೊಳ್ಳದ ನೀರಿನ ಬಳಕೆ ಪ್ರಮಾಣವನ್ನು ರಾಜ್ಯ ಹೆಚ್ಚಿಸಿಕೊಳ್ಳಲು ನಮ್ಮ ರಾಜಕೀಯ ಇಚ್ಛಾಶಕ್ತಿ ಒಂದು ಕಾರಣವಾದರೆ, ಫಾಲಿ ನರಿಮನ್ ನೇತೃತ್ವದ ನಮ್ಮ ಪರಿಣತ ತಂಡದ ಕಾನೂನು ಹೋರಾಟ ಮತ್ತೊಂದು ಕಾರಣ.

ನ್ಯಾಯಮಂಡಳಿಯ ತೀರ್ಪಿನಂತೆ ಕರ್ನಾಟಕ ನಿಗದಿತ ಪ್ರಮಾಣದ ನೀರನ್ನು ತಮಿಳುನಾಡಿಗೆ ಹರಿಸಿರುವುದಕ್ಕೆ ಅಂಕಿಅಂಶ, ಸಾಕ್ಷ್ಯಾಧಾರಗಳು ಲಭ್ಯವಿವೆ. ಆದರೂ ಈ ವಿಚಾರದಲ್ಲಿ ತಮಿಳುನಾಡು ಆಕ್ಷೇಪ ವ್ಯಕ್ತಪಡಿಸುತ್ತಲೇ ಇರುತ್ತದೆ. ಉತ್ತಮವಾಗಿ ಮಳೆಯಾದ ವರ್ಷಗಳಲ್ಲೂ ಹಂಚಿಕೆಯಾದ ನೀರಿನ ಪ್ರಮಾಣದ ಬಗ್ಗೆ ತಮಿಳುನಾಡು ಅಪಸ್ವರ ಎತ್ತುತ್ತಲೇ ಬಂದಿದೆ.



ತಮಿಳುನಾಡಿಗೆ ನೀರು ಹರಿಸುವುದನ್ನು ಖಂಡಿಸಿ ರೈತರು ಕಾವೇರಿ ನೀರಿಗಿಳಿದು ಕೆಲ ವರ್ಷಗಳ ಹಿಂದೆ ನಡೆಸಿದ ಪ್ರತಿಭಟನೆ

ಕೃಷ್ಣರಾಜಸಾಗರ ಜಲಾಶಯದ ಕೆಳಭಾಗದಿಂದ ತಮಿಳುನಾಡಿನ ಗಡಿ ವರೆಗೆ ಕಾವೇರಿ ನದಿಯ ಜಲಾನಯನ ಪ್ರದೇಶದಲ್ಲಿ ಗಣನೀಯ ಪ್ರಮಾಣದ ಬಸಿ ನೀರು ಉತ್ಪತ್ತಿಯಾಗುತ್ತಿದೆ. ಇದು ಸಹ ಕಾವೇರಿ ನದಿಯೊಂದಿಗೆ ತಮಿಳುನಾಡನ್ನು ಸೇರುತ್ತದೆ. ಈ ಹರಿವಿನ ಮೇಲೂ ಕರ್ನಾಟಕಕ್ಕೆ ಯಾವುದೇ ನಿಯಂತ್ರಣ ಇಲ್ಲದಿರುವುದರಿಂದ, ನ್ಯಾಯ ಮಂಡಳಿಯಿಂದ ನಿಗದಿಯಾದ ಪ್ರಮಾಣಕ್ಕಿಂತಲೂ ಹೆಚ್ಚಿನ ನೀರು ತಮಿಳುನಾಡಿಗೆ ದೊರೆಯುತ್ತದೆ. ಆ ಉದ್ದೇಶದಿಂದ ಮೇಕೆದಾಟುವಿನಲ್ಲಿ ಸಂಗ್ರಹ ಜಲಾಶಯ ನಿರ್ಮಾಣಕ್ಕೆ ಕರ್ನಾಟಕ ಮುಂದಾಗಿದೆ. ಆದರೆ, ತಮಿಳುನಾಡು ಈ ಅಣೆಕಟ್ಟಿನ ವಿರುದ್ಧ ಕೇಂದ್ರ ಸರ್ಕಾರ ಮತ್ತು ನ್ಯಾಯಾಲಯಕ್ಕೆ ದೂರು ತೆಗೆದುಕೊಂಡು ಹೋಗಿದೆ.

ನೀರಿನ ಕೊರತೆ ಬಗ್ಗೆಯೇ ಮಾತನಾಡುತ್ತಿದ್ದ ತಮಿಳುನಾಡು ಈಗ ಕಾವೇರಿ ಕಣಿವೆಯ ಹೆಚ್ಚುವರಿ ನೀರಿನ ಬಳಕೆಗೆ ‘ಕಾವೇರಿ–ವೆಲ್ಲಾರ್’ ಯೋಜನೆ ಕೈಗೊಂಡಿದೆ. ತಮಿಳುನಾಡು ರಾಜ್ಯದ ನಿಲುವು ಈಗ ಸಂಪೂರ್ಣ ಬದಲಾಗಿದೆ. ಅಷ್ಟೇ ಅಲ್ಲ, ಕರ್ನಾಟಕದ ಮೇಕೆದಾಟು ಯೋಜನೆಗೆ ಅಡ್ಡಗಾಲು ಹಾಕಿ, ತನ್ನ ಹೊಸ ಯೋಜನೆಗೆ ಅಡಿಗಲ್ಲು ಕೂಡಾ ಹಾಕಿದೆ. ‘ಸಮುದ್ರ ಸೇರುವ ಕಾವೇರಿಯ ಹೆಚ್ಚುವರಿ ನೀರು ಬಳಸಿಕೊಳ್ಳುತ್ತಿದ್ದೇವೆ’ ಎನ್ನುವುದು ತಮಿಳುನಾಡಿನ ವಾದ. ಆ ಮೂಲಕ, ಅದರದ್ದು ಚಾಣಕ್ಯ ನಡೆ. ಆದರೆ, ಈ ಹೊಸ ಯೋಜನೆ ಕಾವೇರಿ ನ್ಯಾಯಮಂಡಳಿ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಈ ಯೋಜನೆ ಕೈಗೆತ್ತಿಕೊಳ್ಳುವುದನ್ನು ತಡೆಯಬೇಕಿದೆ. ಈ ವಿಚಾರದಲ್ಲಿ ನಮಗೆ (ಕರ್ನಾಟಕಕ್ಕೆ) ನಮ್ಮ ಹಿತಾಸಕ್ತಿ ಮುಖ್ಯವೇ ಹೊರತು ರಾಜಕೀಯ ಅಲ್ಲ.

ಲೇಖಕ: ಸುಪ್ರೀಂ ಕೋರ್ಟ್‌ನ ವಕೀಲ

**ನಿರೂಪಣೆ: ರಾಜೇಶ್ ರೈ ಚಟ್ಲ**

## ‘ವಕೀಲರ ತಂಡ ಬದಲು ಅಪಾಯಕಾರಿ ನಡೆ’

ನೆಲ, ಜಲ ವಿಷಯದಲ್ಲಿ ಎಂದೂ ರಾಜಕೀಯ, ಪಕ್ಷ ಭೇದ ಅಡ್ಡ ಬಂದಿಲ್ಲ. ಆದರೆ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಂತರರಾಜ್ಯ ಜಲ ವಿವಾದಗಳಲ್ಲಿ ರಾಜ್ಯದ ಪರ ವಾದ ಮಂಡಿಸುವ ವಕೀಲರ ತಂಡವನ್ನು ಬದಲಿಸಿ, ಹೊಸಬರ ತಂಡ ರಚಿಸಿದೆ. ಹೊಸಬರ ತಂಡ ರಚನೆಗೆ ವಿರೋಧವಿಲ್ಲ. ಆದರೆ, ಇಂಥ ವಿಚಾರಗಳಲ್ಲಿ (ನದಿ ನೀರು ವಿವಾದ) ವಾದ ಮಂಡನೆ ವೇಳೆ ವಿಷಯದ ಆಳ– ಅಗಲ ಗೊತ್ತಿರಬೇಕಿದೆ. ಹಳೆ ಕಾನೂನು ತಂಡದಲ್ಲಿದ್ದ ಫಾಲಿ ನರಿಮನ್ ಅವರನ್ನು ಹೊರಗಿಡಲಾಗಿದೆ. ಮಹದಾಯಿ, ಕೃಷ್ಣಾದಿಂದ ಎಸ್.ಎಸ್. ಜವಳಿ ಅವರನ್ನು ಸರ್ಕಾರ ಬಿಟ್ಟಿದೆ. ಮಹದಾಯಿ, ಕಾವೇರಿ, ಕೃಷ್ಣಾ ಈ ಮೂರರಿಂದಲೂ ನನ್ನನ್ನು ಕೈ ಬಿಡಲಾಗಿದೆ. ಮೋಹನ್ ಕಾತರಕಿ ಜೊತೆ ಎರಡು ವರ್ಷ ಸಭೆಯನ್ನೇ ನಡೆಸದೆ, ಇದೀಗ ಸಭೆ ನಡೆಸುತ್ತಿದೆ. ಸರ್ಕಾರದ ಈ ನಡೆ ಅಪಾಯಕಾರಿ. ಇದರಿಂದ ರಾಜ್ಯಕ್ಕೆ ಹಾನಿ ಆಗಲಿದೆ. ಬೇರೆ ರಾಜ್ಯಗಳು ಆಗಾಗ ವಕೀಲರ ತಂಡವನ್ನು ಬದಲಿಸಿದೆ. ಆದರೆ ನಾವು ಎಂದೂ ಬದಲಿಸಿಲ್ಲ. ಅದು ಕೂಡಾ ನಮ್ಮ ಯಶಸ್ಸಿಗೆ ಕಾರಣ. ನಾನು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ವಕ್ತಾರನಾಗಿದ್ದರೂ, ಕಾನೂನು ವಿಷಯ ಬಂದಾಗ ರಾಜ್ಯದಲ್ಲಿ ಯಾವ ಪಕ್ಷ ಆಡಳಿತದಲ್ಲಿದೆ ಎನ್ನುವುದನ್ನು ನೋಡುವುದಿಲ್ಲ. ಕರ್ನಾಟಕದ ಪರವಾಗಿ ಮಾತನಾಡಿದ್ದೇನೆ. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಗೆ ಕಾನೂನು ಸಲಹೆಗಾರ ಹುದ್ದೆಯಲ್ಲಿ ಸಂಪುಟ ದರ್ಜೆ ಸ್ಥಾನಮಾನ ಹೊಂದಿದ್ದ ಸಂದರ್ಭದಲ್ಲಿಯೂ ಕಾವೇರಿ ಜಲ ವಿವಾದದಲ್ಲಿ ವಾದ ಮಂಡಿಸುವ ಉದ್ದೇಶದಿಂದ ಆ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆ. ಕಾನೂನು ತಂಡ ಪುನರ್ ರಚಿಸುವ ವಿಷಯದಲ್ಲಿ ಬಿಜೆಪಿ ಸರ್ಕಾರ ದೊಡ್ಡ ತಪ್ಪು ಮಾಡಿದೆ. ಅದನ್ನು ಸರಿಪಡಿಸಿಕೊಳ್ಳಬೇಕು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ವಿದ್ಯಾರ್ಥಿಯೊಬ್ಬನಿಗೆ ಮಾಸ್ಕ್ ವಿತರಿಸುತ್ತಿರುವ ಚಿತ್ರ ಇದೀಗ ಸಾಕಷ್ಟು ಸದ್ದು ಮಾಡುತ್ತಿದೆ. ವಿಶೇಷವೆಂದರೆ, ಮಾಸ್ಕ್ ಧರಿಸುವ ವಿಧಾನ ಹೇಳಿಕೊಡುತ್ತಿರುವ ಇವರಾರೂ ಮಾಸ್ಕ್ ಧರಿಸಿಲ್ಲ ಎಂಬುದು ನೆಟ್ಟಿಗರ ಆರೋಪ. ಸ್ವತಃ ಮಾಸ್ಕ್ ಧರಿಸಿ, ಇನ್ನೊಬ್ಬರಿಗೆ ಪಾಠ ಮಾಡಬೇಕು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.




ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ಚಿತ್ರದ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿದೆ. ರಿವರ್ಸ್ ಇಮೇಜ್‌ನಲ್ಲಿ ಪರಿಶೀಲಿಸಿದಾಗ, ಈ ಚಿತ್ರವು 2019ರ ನವೆಂಬರ್ ಅವಧಿಯದ್ದು ಎಂಬುದು ಕಂಡುಬಂದಿದೆ. ಆಗ ಇನ್ನೂ ಕೊರೊನಾ ವೈರಸ್ ದೇಶಕ್ಕೆ ಕಾಲಿರಿಸಿರಲಿಲ್ಲ. ದೆಹಲಿಯಲ್ಲಿ ತೀವ್ರ ಮಟ್ಟದಲ್ಲಿ ಹೆಚ್ಚಾಗಿದ್ದ ವಾಯುಮಾಲಿನ್ಯದಿಂದ ಪಾರಾಗಲು ವಿದ್ಯಾರ್ಥಿಗಳಿಗೆ ಮಾಸ್ಕ್ ವಿತರಿಸುವ ಕಾರ್ಯಕ್ರಮದಲ್ಲಿ ಈ ಚಿತ್ರ ತೆಗೆಯಲಾಗಿತ್ತು ಎಂದು ವೆಬ್‌ಸೈಟ್ ಮಾಹಿತಿ ನೀಡಿದೆ.

## ಗುಂಡಣ್ಣ




## ದಿನ ಭವಿಷ್ಯ

ಮಂಗಳವಾರ 6 ಏಪ್ರಿಲ್ 2021

**ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೇವತಿ ದಶಮೀ ಗಂ. 56-14 (ರಾ. 4-49) ಮಂಗಳವಾರ ನಿತ್ಯ ನಕ್ಷತ್ರ ಶ್ರವಣ ಗಂ. 57-05 (ಬೆ.ಝಾ. 5-08) ಸಿದ್ಧ ನಾಮ ಯೋಗ ಗಂ 30-7 ವಣಿಜ ಕರಣ ಗಂ. 27-31 ವಿಷ ಗಂ. 7-50 ಅಮೃತ ಗಂ. 31-36 ರಾಹುಕಾಲ:** ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-18 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 1 9

**ಮೇಷ:** ನಿರುದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ನಿರೀಕ್ಷೆಗಿಂತಲೂ ಅಧಿವಾದ ಯಶಸ್ಸು. ವಿವಾಹಾಕಾಂಕ್ಷಿಗಳಿಗೆ ಶುಭ ವಾರ್ತೆ. ಆದಾಯದಲ್ಲಿ ತಕ್ಕ ಮಟ್ಟಿನ ಹೆಚ್ಚಳ.

**ವೃಷಭ:** ಯಾವುದೇ ವಿಷಯದಲ್ಲಿ ದುಡುಕಕ್ಕೆ ಎಡೆ ಮಾಡಿಕೊಡುವುದು ಉತ್ತಮವಲ್ಲ. ತಾಳ್ಮೆ ನಿಮಗೆ ನೆಮ್ಮದಿ ತಂದುಕೊಡುವುದು. ದಿನದ ಮಟ್ಟಿಗೆ ವಿವಾಹಾದಿ ಕಾರ್ಯಗಳಿಗೆ ಹಿನ್ನಡೆ ಉಂಟಾದೀತು.

**ಮಿಥುನ:** ಸ್ನೇಹಿತರ ಸಹಕಾರದಿಂದ ನಿಮ್ಮ ಕಾರ್ಯಸಾಧನೆ ಅತ್ಯಂತ ಯಶ ಕಾಣುವುದು. ಸಮಸ್ಯೆಗಳು ಎದುರಾದಲ್ಲಿ ನಿಧಾನ ಚಿಂತಿಸಿ ಪರಿಹರಿಸಿಕೊಳ್ಳಿ. ಸಂಗಾತಿಯ ತಾಳ್ಮೆಯಿಂದ ಕೂಡಿದ ವರ್ತನೆಯಿಂದ ನೆಮ್ಮದಿ.

**ಕರ್ಕಾಟಕ:** ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಮುನ್ನಡೆ ಕಾಣಬಹುದು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷ ಧನ ಹೊಂದಾಣಿಕೆ ಮಾಡಬೇಕಾದೀತು. ಸರ್ಕಾರಿ ನೌಕರಸ್ಥರಿಗೆ ಸಹೋದ್ಯೋಗಿಗಳಿಂದ ಕಿರಿಕಿರಿ ಉಂಟಾದೀತು.

**ಸಿಂಹ:** ನಿಮ್ಮ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ಸಾಗುವವು. ಎದುರಾದ ಸಮಸ್ಯೆಗಳನ್ನು ಆತ್ಮವಿಶ್ವಾಸದಿಂದ ನಿಭಾಯಿಸುವಿರಿ. ಭೂಮಿಗೆ ಸಂಬಂಧಿಸಿದಂತೆ ಧನವ್ಯಯ.

**ಕನ್ಯಾ:** ದೂರಪ್ರಯಾಣದ ಯೋಗ. ಮಹಿಳೆಯರಿಗೆ ಬಂಧು ಬಾಂಧವರೊಂದಿಗೆ ಸಂತಸದ ದಿನವಾಗಿ ಪರಿಣಮಿಸುವುದು. ಹೊಸ ಯೋಜನೆಗೆ ಸಕಾಲವಲ್ಲ.

**ತುಲಾ:** ದಾಯಾದಿಗಳ ನಡುವಿನ ವೈಮನಸ್ಸು ದೂರ. ಜನ ಪ್ರತಿನಿಧಿಗಳಿಗೆ, ರಾಜಕಾರಣಿಗಳಿಗೆ ಸರ್ಕಾರಿ ನೌಕರ ವರ್ಗದವರಿಂದಿ ಕಿರಿಕಿರಿ ಅನುಭವಿಸ ಬೇಕಾದೀತು. ಸಾರ್ವಜನಿಕ ಕ್ಷೇತ್ರದಲ್ಲಿ ನಿಂದನೆಗಳನ್ನು ಎದುರಿಸಬೇಕಾದೀತು.

**ವೃಶ್ಚಿಕ:** ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಧನೆಗೆ ಅನುಕೂಲ ವಾತಾವರಣ. ವ್ಯವಹಾರಸ್ಥರಿಗೆ ಸಾಧಾರಣ ಲಾಭ. ಉನ್ನತ ಸ್ಥಾನದಲ್ಲಿರುವವರಿಗೆ ಗೌರವಕ್ಕೆ ಕುತ್ತುಂಟಾಗುವ ಸಾಧ್ಯತೆ ಕಂಡುಬರುತ್ತಿದೆ.

**ಧನು:** ಸಾಂಸಾರಿಕ ನೆಮ್ಮದಿ ನಿಮ್ಮದಾಗಲಿದೆ. ಉದ್ಯೋಗಾಕಾಂಕ್ಷಿಗಳಿಗೆ ತಾತ್ಕಾಲಿಕ ನೆಮ್ಮದಿ. ಉದ್ಯೋಗದಲ್ಲಿರುವವರು ಶಿಸ್ತು ಸಂಯಮ ಕಾಪಾಡಿಕೊಳ್ಳುವುದು ಅವಶ್ಯ.

**ಮಕರ:** ಮದುವೆ ಮುಂಜಿ ಮುಂತಾದ ಮಂಗಳ ಕಾರ್ಯಗಳು ನಿಶ್ಚಯಗೊಂಡು ನಿರ್ವಿಘ್ನವಾಗಿ ಸಾಗುವವು. ಸರ್ಕಾರಿ ನೌಕರಿಯಲ್ಲಿರುವವರಿಗೆ ಅತಿಯಾದ ಕಾರ್ಯ ಬಾಹುಳ್ಯ.

**ಕುಂಭ:** ಮಹಿಳೆಯರು ಸಂತಸ ಸಂಭ್ರಮದೊಂದಿಗೆ ದಿನವನ್ನು ಕಳೆಯುವಿರಿ. ಕಲಾವಿದರು, ಪತ್ರಕರ್ತರಿಗೆ ಎಲ್ಲಿಲ್ಲದ ತುರುಸು ಕೆಲಸಗಳೊಂದಿಗೆ ವಾದ ವಿವಾದಗಳು ಏರ್ಪಟ್ಟು ಮಾನಸಿಕ ನೆಮ್ಮದಿಗೆ ಕುತ್ತಾದೀತು.

**ಮೀನ:** ಮಕ್ಕಳೊಂದಿಗೆ ಸಂತಸದ ದಿನವನ್ನಾಗಿಸಿಕೊಳ್ಳುವಿರಿ. ವಿಶೇಷವಾಗಿ ಮಹಿಳೆಯರು ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸುವುದು ಅಗತ್ಯ.

**ನಿಮ್ಮ ಜನ್ಮದಿನ 6-ಏಪ್ರಿಲ್** ಈ ದಿನವು ಅತ್ಯಂತ ಶುಭಕರವಾಗಿದ್ದು, ನಿಮ್ಮದು ದೃಢತೆಯನ್ನು ಹೊಂದಿದ ಮನಸ್ಸಾದುದರಿಂದ ವಿಚಲಿತರಾಗದೆ ಎಲ್ಲ ಕೆಲಸ ಕಾರ್ಯಗಳನ್ನು ನಿಭಾಯಿಸುವಿರಿ. ಆತ್ಮವಿಶ್ವಾಸ ನಿಮ್ಮಲ್ಲಿ ಎದ್ದು ಕಾಣುವುದಲ್ಲದೇ ಸಮಾಜಮುಖಿ ಕೆಲಸಗಳಿಂದಾಗಿ ಜನನಾಯಕರಾಗುವ ಎಲ್ಲ ಲಕ್ಷಣಗಳು ಕಂಡುಬರುತ್ತಿದೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ


## ಮತ್ತೆರಡು ಪ್ರಶ್ನೆಗಳು

**ಮಹೋಷಧಕುಮಾರನ** ಉತ್ತರದಿಂದ ಪ್ರೀತನಾದ ರಾಜ ಅವನಿಗೆ ಸತ್ಕಾರ ಮಾಡಿದ್ದನ್ನು ಕಂಡು ಸೇನಕ ಮತ್ತು ಅವನ ಗುಂಪಿನ ಪಂಡಿತರಿಗೆ ಬಹಳ ಸಂಕಟವಾಯಿತು. ‘ಇದೇನು ದೊಡ್ಡ ಉತ್ತರ. ಅದನ್ನು ನಾವು ದಿನನಿತ್ಯ ಗಮನಿಸುತ್ತೇವೆ. ಅದರಲ್ಲಿ ಯಾವ ವಿಶೇಷವೂ ಇಲ್ಲ. ಅಂಥ ಸಣ್ಣದಾದ ಮತ್ತು ಕ್ಷುಲ್ಲಕ ಉತ್ತರವನ್ನು ಕೊಡಬಾರದೆಂದು ಸುಮ್ಮನಿದ್ದೆವು’ ಎಂದು ಬೊಬ್ಬೆ ಹಾಕತೊಡಗಿದರು. ಆ ಗದ್ದಲವನ್ನು ಕೇಳಿ ದೇವಿ ಮತ್ತೆ ಹೊರಗೆ ಬಂದು, ‘ಸದ್ದು, ಪಾಂಡಿತ್ಯ ಇರುವಲ್ಲಿ ಸದ್ದು ಇರುವುದಿಲ್ಲ. ನಿಮಗೆ ಆ ಪ್ರಶ್ನೆ ಅತೀ ಕ್ಷುಲ್ಲಕ ಎನ್ನಿಸಿದರೆ, ಮತ್ತೆರಡು ಪ್ರಶ್ನೆಗಳನ್ನು ಕೇಳುತ್ತೇನೆ. ಅವುಗಳಿಗಾದರೂ ನೀವು ಉತ್ತರ ಕೊಡುತ್ತೀರೋ ಎಂದು ನೋಡುತ್ತೇನೆ’ ಎಂದಳು. ‘ಆಯ್ತು, ನಾವು ಸಿದ್ಧರಾಗಿದ್ದೇವೆ’ ಎಂದು ಕುಳಿತರು ಪಂಡಿತರು. ದೇವಿ ಹೇಳಿದಳು, ‘ಮೊದಲನೆಯ ಪ್ರಶ್ನೆ, ಯಥೇಚ್ಛವಾಗಿ ಬೈಗಳು ಬರುತ್ತವೆ, ಮನೆಗೆ ಬರುವುದೇ ಬೇಡವೆನ್ನಿಸುತ್ತದೆ. ಆದರೂ ಅದೊಂದು ಪ್ರಿಯವಾದ ದೃಶ್ಯ. ಅದು ಯಾವುದು?’. ಎರಡನೆಯ ಪ್ರಶ್ನೆ, ‘ಸುಳ್ಳು ಹೇಳುತ್ತಾರೆ, ಸುಳ್ಳು ಆರೋಪವನ್ನು ಹೊರಿಸಲಾಗುತ್ತದೆ. ಆದರೆ ಅತ್ಯಂತ ಪ್ರಿಯವಾಗುತ್ತದೆ. ಯಾವುದು ಆ ದೃಶ್ಯ?’. ಮತ್ತೆ ಪಂಡಿತರ ತಲೆ ಕೆಟ್ಟು ಹೋಯಿತು. ಯಾರಾದರೂ ಬೈದರೆ, ಮನೆಗೆ ಬರಬೇಡವೆಂದರೆ ಪ್ರಿಯವಾಗುವುದು ಹೇಗೆ? ಸುಳ್ಳು ಆರೋಪಗಳನ್ನು ಮಾಡುವ ಕ್ರಿಯೆ ಹೇಗೆ ಸಂತೋಷ ಕೊಟ್ಟೀತು? ಇಂಥ ವಿರೋಧಾಭಾಸದ ಪ್ರಶ್ನೆಗಳಿಗೆ ಏನರ್ಥವಿದ್ದೀತು? ಈ ಪಂಡಿತರಿಗೆ ಉತ್ತರಗಳು ಹೊಳೆಯಲಿಲ್ಲವೆಂದು ತಿಳಿದಾಗ ರಾಜ ಮಹೋಷಧಕುಮಾರನನ್ನು ಕೇಳಿದ.

ಮಹೋಷಧಕುಮಾರ ನಕ್ಕು ಹೇಳಿದ, ‘ಮಹಾಪ್ರಭು, ಇವೆರಡೂ ಕೂಡ ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಬರುವಂಥವುಗಳು. ಮೊದಲನೆಯ ಪ್ರಶ್ನೆಯ ದೃಶ್ಯ ಹೀಗಿದೆ. ಮಗನಿಗೆ ಏಳೆಂಟು ವರ್ಷವಾದಾಗ ತಾಯಿ, ಕೆಲವು ಕೆಲಸಗಳನ್ನು ಹೇಳುತ್ತಾಳೆ. ‘ಅಂಗಡಿಗೆ ಹೋಗಿ ಈ ಸಾಮಾನು ತೆಗೆದುಕೊಂಡು ಬಾ, ಹೊಲಕ್ಕೆ ಹೋಗಿ ತಂದೆಗೆ ಊಟಕೊಟ್ಟು ಬಾ’. ಆದರೆ ಆಟದಲ್ಲಿ ಮಗ್ನವಾದ ಹುಡುಗ ಆಲಸ್ಯದಿಂದ ಏನೇನೋ ನೆಪ ಹೇಳಿ ತಪ್ಪಿಸಿಕೊಳ್ಳಲು ನೋಡುತ್ತಾನೆ. ಮೊದಲೇ ಮುಗಿಯದ ಕೆಲಸಗಳಲ್ಲಿ ತೊಡಗಿಹೋದ ತಾಯಿಗೆ ಕೋಪ ಬಂದು ಹೊಡೆಯಲು ಹೋಗುತ್ತಾಳೆ. ಹುಡುಗ ತಪ್ಪಿಸಿಕೊಂಡು ಮನೆಯಿಂದ ಓಡಿ ಹೋಗುತ್ತಾನೆ. ಆಗ ಆಕೆ ಕೋಪದಿಂದ ಅವನನ್ನು ಸಿಕ್ಕಾಪಟ್ಟೆ ಬೈಯುತ್ತಾಳೆ. ನೀನು ಮನೆಗೇ ಬರಬೇಡ ಎನ್ನುತ್ತಾಳೆ. ಆದರೆ ಆತ ಮಧ್ಯಾಹ್ನ ಊಟದ ವೇಳೆಗೂ ಮನೆಗೆ ಬರದಿದ್ದಾಗ ತಾನೇ ಮನೆಮನೆಗಳಿಗೆ ಹೋಗಿ ಅವನನ್ನು ಹುಡುಕಿ ಕರೆತರುತ್ತಾಳೆ. ಬರುವಾಗ ಅವನನ್ನು ಪ್ರೀತಿಯಿಂದ ಅಪ್ಪಿ ಮುದ್ದಾಡುತ್ತಾಳೆ. ಆಕೆ ಅವನಿಗೆ ಬಯ್ದರೂ ದ್ವೇಷವಿಲ್ಲ, ಅನನ್ಯವಾದ ಪ್ರೀತಿ ಇದೆ. ಇದೇ ಅಪೂರ್ವ ದೃಶ್ಯ’. ‘ಎರಡನೆಯದೂ ಸುಂದರ ದೃಶ್ಯ. ಹೊಸದಾಗಿ ಮದುವೆಯಾದ ಗಂಡ-ಹೆಂಡತಿಯರು ಏಕಾಂತದಲ್ಲಿ ಕ್ರೀಡಿಸುವಾಗ ಪರಸ್ಪರ ಆರೋಪ ಮಾಡುತ್ತಾರೆ. ‘ನನಗೆ ಗೊತ್ತು, ನಿಮಗೆ ನನ್ನ ಮೇಲೆ ಪ್ರೀತಿ ಇಲ್ಲ, ಮತ್ತೆ ಯಾರನ್ನೋ ಪ್ರೀತಿಸುತ್ತೀರಿ’ ಎಂದು ಆಕೆ ಹೇಳಿದರೆ, ‘ನನಗೂ ಗೊತ್ತು, ನೀನು ಬೇರೆ ಯಾರನ್ನೋ ಮದುವೆಯಾಗಬೇಕೆಂದಿದ್ದೆ’ ಎಂದು ಆತ ಹೇಳುತ್ತಾನೆ. ಇವು ಪ್ರೀತಿಯ, ಸಲುಗೆಯ ಮಾತುಗಳು. ಮೇಲ್ನೋಟಕ್ಕೆ ಸುಳ್ಳು ಆರೋಪಗಳೆನ್ನಿಸಿದರೂ, ಅವು ಪ್ರೀತಿಯನ್ನು, ಒಲವನ್ನು ಗಟ್ಟಿ ಮಾಡುವ ಬಂಧಗಳು. ಅದಕ್ಕೆ ಅದೊಂದು ಸುಂದರ ದೃಶ್ಯ’ ಎಂದು ಹೇಳಿದ. ಸಭಿಕರು ಜೈಕಾರ ಮಾಡಿದರು. ದೇವಿ ತನ್ನ ಸಹಮತವನ್ನು ಸೂಚಿಸಿದಳು. ❖

## ಪದಬಂಧ 4559

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಗಟ್ಟಿಯಾದ ಕೂಗಿದು (3)
5.ಈಕೆ ದುಷ್ಟಸ್ವಭಾವದ ಹೆಂಗಸು (3)
6.ಕಾರು ಇದ್ದಾಗ ಹಬ್ಬಿದ ಗಾಳಿ ಸುದ್ದಿ (3)
7.ನೀರಾಗಿ ಕಲಸಿದ ಮಣ್ಣು (3)
9.ಮಂಕರಿ ಹೊತ್ತಿರುವವನಿಗೆ ಒಂಚೂರೂ ಬುದ್ಧಿಯಿಲ್ಲ! (2)
10.ನಾಯಕ ತೋರಿಸಿದ ಸ್ವರ್ಗ (2)
12.ಸೀರೆಯ ಹೊದೆಯುವ ಭಾಗ (3)
14.ಪದ ಹೇಳಿ ಪಡೆದ ಬಿಲ್ಲೆ (3)
15.ಹೊಟ್ಟೆ ಇಲ್ಲಿ ಕಾಣುತ್ತಿದೆ (3)
16.ಕೋಟೆಯ ಸುತ್ತಣ ಮೇಲು ಗೋಡೆ (3)
17.ಸಾಯುವ ಸಮಯವಿದು (5)

**ಮೇಲಿಂದ ಕೆಳಕ್ಕೆ**

1. ಸ್ಥಾನವನ್ನು ಕಳೆದುಕೊಂಡವ (4)
2.ವಿದ್ಯಾರ್ಥಿಗಳಿಗೆ ಓದಲು ಗೊತ್ತುಪಡಿಸಿದ ಪುಸ್ತಕ (5)
3.ಗುರುಗುಟ್ಟುತ್ತಿರುವ ಗಂಡುಕುರಿ (3)
4.ಗಳಿಗೆಯಲ್ಲೇ ಇಷ್ಟು ಸಂಪಾದನೆ! (3)
8.ಸಭೆಯಲ್ಲಿ ಕುಳಿತಿರುವವನು (3)
9.ಜನ ಹೊಕ್ಕಿರುವ ಗುಡಿ (3)
10.ಹೆಸರಿಡುವ ಶಾಸ್ತ್ರ (5)
11.ಅವನತಿಯ ಸಮಯ (4)
13.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
14.ಶ್ರೇಷ್ಠ ಎಂದು ಹೀಗೂ ಹೇಳಬಹುದು (3)

### 4558ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಇತಿಹಾಸ 3.ಚಿರಸ್ಥಾಯಿ 4.ಮೀಸಲು 5.ಅಪರೂಪ 7.ಕಣ್ಣೀರು 9.ರವ 10.ನಾಟ 11.ಬಿಕ್ಕಲಂ 13.ಮರಕತ 14.ಗಗನ 15.ತಾರುಮಾರು 16.ವಿಧ್ವಂಸಕ

**ಮೇಲಿಂದ ಕೆಳಕ್ಕೆ:** 2.ಸಮೀಪ 3.ಚಿಲುಕ 6.ಪರಾವಲಂಬಿ 8.ರುದ್ರನಾಟಕ 12.ಲಂಗರು 13.ಮನವಿ

## ಸುಡೊಕು 4945

| | | | | | | | | |
|---|---|---|---|---|---|---|---|---|
| | | | | | | | 5 | |
| | 6 | | 4 | | 9 | 8 | | 7 |
| 5 | | 8 | | | | | 6 | |
| | | 6 | 5 | | | 7 | | 9 |
| 7 | | | | 6 | 1 | | 4 | |
| | 5 | | 8 | | | 3 | | 6 |
| | | | 3 | | | 4 | | 2 |
| | 9 | | | | | | | |
| 6 | | 4 | | 9 | 5 | 1 | | 3 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4944 ಸುಡೊಕು

| | | | | | | | | |
|---|---|---|---|---|---|---|---|---|
| 7 | 1 | 5 | 9 | 4 | 6 | 3 | 2 | 8 |
| 3 | 4 | 6 | 5 | 8 | 2 | 7 | 9 | 1 |
| 2 | 8 | 9 | 3 | 7 | 1 | 5 | 6 | 4 |
| 9 | 6 | 4 | 1 | 3 | 7 | 8 | 5 | 2 |
| 5 | 2 | 8 | 4 | 6 | 9 | 1 | 3 | 7 |
| 1 | 3 | 7 | 8 | 2 | 5 | 9 | 4 | 6 |
| 4 | 9 | 3 | 2 | 1 | 8 | 6 | 7 | 5 |
| 6 | 5 | 1 | 7 | 9 | 4 | 2 | 8 | 3 |
| 8 | 7 | 2 | 6 | 5 | 3 | 4 | 1 | 9 |

# ಬ್ಯಾಡಗಿ ಮೆಣಸಿನಕಾಯಿ ಆವಕದಲ್ಲಿ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬ್ಯಾಡಗಿ:** ಇಲ್ಲಿಯ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಸೋಮವಾರ 2.60 ಲಕ್ಷ ಚೀಲ (64,878 ಕ್ವಿಂಟಲ್) ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಪ್ರಸಕ್ತ ಹಂಗಾಮಿನಲ್ಲಿ 9ನೇ ಬಾರಿಗೆ ಒಂದೇ ದಿನದಲ್ಲಿ ಎರಡು ಲಕ್ಷಕ್ಕಿಂತ ಹೆಚ್ಚು ಚೀಲ ಆವಕವಾದಂತಾಗಿದೆ.

ಡಬ್ಬಿ ಮೆಣಸಿನಕಾಯಿ ಪ್ರತಿ ಕ್ವಿಂಟಲ್‌ಗೆ ₹27,786ರಂತೆ ಮಾರಾಟವಾಗಿದ್ದು, ಕಳೆದ ವಾರ ಕ್ವಿಂಟಲ್‌ಗೆ ₹32,999ರಂತೆ ಮಾರಾಟವಾಗಿತ್ತು. ಪ್ರತಿ ಕ್ವಿಂಟಲ್ ಕಡ್ಡಿ ಮೆಣಸಿನಕಾಯಿಗೆ ₹1,700 ಹಾಗೂ ಡಬ್ಬಿ ಮೆಣಸಿನಕಾಯಿಗೆ ಗರಿಷ್ಠ ಬೆಲೆಯಲ್ಲಿ ₹5,000 ಇಳಿಕೆಯಾಗಿದೆ. ಗುಂಟೂರು ತಳಿ ಮೆಣಸಿನಕಾಯಿ ಕನಿಷ್ಠ ಹಾಗೂ ಗರಿಷ್ಠ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡಿದೆ.

**ಸೋಮವಾರದ ದರ ಪ್ರತಿ ಕ್ವಿಂಟಲ್‌ಗೆ**

| | ಕನಿಷ್ಠ | ಗರಿಷ್ಠ |
|---|---|---|
| ಬ್ಯಾಡಗಿ ಕಡ್ಡಿ | ₹989 | ₹22,989 |
| ಬ್ಯಾಡಗಿ ಡಬ್ಬಿ | ₹1,399 | ₹27,786 |
| ಗುಂಟೂರು ತಳಿ | ₹700 | ₹10,299 |

# ಗೃಹ ಸಾಲ: ಬಡ್ಡಿ ಹೆಚ್ಚಿಸಿದ ಎಸ್‌ಬಿಐ




**ನವದೆಹಲಿ (ಪಿಟಿಐ):** ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ಗೃಹ ಸಾಲದ ಮೇಲಿನ ಬಡ್ಡಿಯನ್ನು ಶೇಕಡ 6.95ಕ್ಕೆ ಹೆಚ್ಚಿಸಿದೆ. ಇದರೊಂದಿಗೆ, ಅತ್ಯಂತ ಕಡಿಮೆ ಬಡ್ಡಿ ದರಕ್ಕೆ (ಶೇ 6.70) ಗೃಹ ಸಾಲ ನೀಡುವ ಕೊಡುಗೆಯು ಮಾರ್ಚ್ 31ಕ್ಕೆ ಕೊನೆಗೊಂಡಂತೆ ಆಗಿದೆ.

ಸೀಮಿತ ಅವಧಿಗೆ ಅನ್ವಯ ಆಗುವಂತೆ ಎಸ್‌ಬಿಐ ₹ 75 ಲಕ್ಷದವರೆಗಿನ ಗೃಹ ಸಾಲವನ್ನು ಶೇ 6.70ರ ಬಡ್ಡಿ ದರದಲ್ಲಿ ವಿತರಿಸಿತ್ತು. ₹ 75 ಲಕ್ಷಕ್ಕಿಂತ ಹೆಚ್ಚಿನ ₹ 5 ಕೋಟಿಗಿಂತ ಕಡಿಮೆಯ ಗೃಹಸಾಲಕ್ಕೆ ಬ್ಯಾಂಕ್ ಶೇ 6.75ರಷ್ಟು ಬಡ್ಡಿ ನಿಗದಿ ಮಾಡಿತ್ತು.

ಸೀಮಿತ ಅವಧಿಯ ಬಡ್ಡಿ ದರಕ್ಕೆ ಹೋಲಿಸಿದರೆ ಈಗಿನ ಬಡ್ಡಿ ದರವು ಶೇ 0.25ರಷ್ಟು ಜಾಸ್ತಿ ಇದೆ. ಎಸ್‌ಬಿಐ ಈಗ ಬಡ್ಡಿ ದರ ಹೆಚ್ಚಿಸಿರುವ ಕಾರಣ ಇತರ ಬ್ಯಾಂಕ್‌ಗಳೂ ಬಡ್ಡಿ ದರದಲ್ಲಿ ಹೆಚ್ಚಳ ಮಾಡುವ ಸಾಧ್ಯತೆ ಇದೆ.

**ಷೇರುಪೇಟೆ ವಹಿವಾಟು** 871




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 14,867 |
| ಇಂದಿನ ಅಂತ್ಯ | 14,638 |
| ▼ | 229 |
| ದಿನದ ಕನಿಷ್ಠ | 14,459 |

**ವಿನಿಮಯ ದರ**

| | |
|---|---|
| $ ಡಾಲರ್ | 73.30 |
| £ ಪೌಂಡ್ | 101.54 |
| € ಯುರೊ | 86.05 |
| ¥ ಯೆನ್ (100ಕ್ಕೆ) | 67 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹435 |
| 12 ಮೊಟ್ಟೆಗೆ | ₹56 |
| ಮೈಸೂರು | |
| 100 ಮೊಟ್ಟೆಗೆ | ₹440 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1600 (1570) |
| ಸೋಯಾ (ರಿಫೈನ್ಡ್) | ₹1280 (1285) |
| ಸೂರ್ಯಕಾಂತಿ (ರಿಫೈನ್ಡ್) | ₹1710 (1710) |
| ಪಾಮೋಲಿನ್ | ₹1235 (1220) |

### ಮಾರಾಟದ ಒತ್ತಡ: ಸೂಚ್ಯಂಕ 870 ಅಂಶ ಕುಸಿತ • ಕರಗಿತು ₹ 2.16 ಲಕ್ಷ ಕೋಟಿ

# ಷೇರುಪೇಟೆಗೆ ಕೋವಿಡ್ ಆತಂಕ

**ಮುಂಬೈ (ಪಿಟಿಐ):** ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ಸೋಮವಾರ ಒಂದೇ ದಿನ ಒಂದು ಲಕ್ಷವನ್ನು ದಾಟಿದ್ದು ಹೂಡಿಕೆದಾರರನ್ನು ಆತಂಕಕ್ಕೆ ದೂಡಿತು. ಇದರಿಂದಾಗಿ ಷೇರುಪೇಟೆಗಳಲ್ಲಿ ಅತಿಯಾದ ಮಾರಾಟದ ಒತ್ತಡ ಸೃಷ್ಟಿಯಾಗಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ದಿನದ ವಹಿವಾಟಿನ ಒಂದು ಹಂತದಲ್ಲಿ 1,400 ಅಂಶಗಳಷ್ಟು ಕುಸಿದಿತ್ತು. ಆ ಬಳಿಕ ಮಾರಾಟದ ಒತ್ತಡ ತುಸು ತಗ್ಗಿದ್ದರಿಂದ ಸೂಚ್ಯಂಕದ ಇಳಿಕೆಯು 870 ಅಂಶಗಳಷ್ಟಾಯಿತು. 49,159 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇಕಡ 1.13ರವರೆಗೂ ಇಳಿಕೆ ಕಂಡವು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 229 ಅಂಶ ಇಳಿಕೆ ಕಂಡು 14,638 ಅಂಶಗಳಿಗೆ ತಲುಪಿತು.

**ಮುಖ್ಯಾಂಶಗಳು**

- ಅತಿಯಾದ ಮಾರಾಟದ ಒತ್ತಡ
- ಬಜಾಜ್ ಫೈನಾನ್ಸ್ ಷೇರು ಶೇ 5.81ರಷ್ಟು ಇಳಿಕೆ
- ಟಿಸಿಎಸ್, ಇನ್ಫೊಸಿಸ್, ಏರ್‌ಟೆಲ್, ಎಚ್‌ಸಿಎಲ್ ಟೆಕ್ ಷೇರುಗಳ ಗಳಿಕೆ

ಬಜಾಜ್ ಫೈನಾನ್ಸ್ ಷೇರು ಶೇ 5.81ರಷ್ಟು ನಷ್ಟ ಕಂಡಿತು. ಇಂಡಸ್‌ಇಂಡ್ ಬ್ಯಾಂಕ್, ಎಸ್‌ಬಿಐ, ಮಹೀಂದ್ರ ಆ್ಯಂಡ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್, ಬಜಾಜ್ ಆಟೊ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳ ಮೌಲ್ಯವೂ ಇಳಿಕೆ ಆಯಿತು.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯು ನಿರೀಕ್ಷೆಗಿಂತಲೂ ಹೆಚ್ಚು ಅಪಾಯಕಾರಿ ಆಗಿದ್ದು, ಆರ್ಥಿಕ ಚೇತರಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಇದರಿಂದಾಗಿ ಷೇರುಪೇಟೆಯಲ್ಲಿ ಅತಿಯಾದ ಮಾರಾಟದ ಒತ್ತಡ ಕಂಡುಬಂದಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ನಿರ್ಧಾರಗಳು ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಗಳ ಗಳಿಕೆಯು ಮುಂದಿನ ದಿನಗಳಲ್ಲಿ ಷೇರುಪೇಟೆಯ ಚಂಚಲತೆಯನ್ನು ನಿರ್ಧರಿಸಲಿವೆ ಎಂದೂ ಹೇಳಿದ್ದಾರೆ. ಎಂಪಿಸಿಯು ಬುಧವಾರ ತನ್ನ ಹಣಕಾಸು ನೀತಿಯ ನಿರ್ಧಾರವನ್ನು ಪ್ರಕಟಿಸಲಿದೆ.

**ಕರಗಿತು ₹ 2.16 ಲಕ್ಷ ಕೋಟಿ:** ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಸೋಮವಾರ ₹ 2.16 ಲಕ್ಷ ಕೋಟಿಗಳಷ್ಟು ಕರಗಿತು. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯ ₹ 205.09 ಲಕ್ಷ ಕೋಟಿಗಳಿಗೆ ತಲುಪಿದೆ.

## ರೂಪಾಯಿ ಮೌಲ್ಯ 18 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 18 ಪೈಸೆ ಇಳಿಕೆಯಾಗಿದ್ದು, ಒಂದು ಡಾಲರ್‌ಗೆ ₹ 73.30ರಂತೆ ವಿನಿಮಯಗೊಂಡಿತು.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿನ ಭಾರಿ ಏರಿಕೆಯು ರೂಪಾಯಿ ವಹಿವಾಟಿನ ಮೇಲೆ ಪರಿಣಾಮ ಬೀರಿತು ಎಂದು ತಜ್ಞರು ಹೇಳಿದ್ದಾರೆ. 'ಡಾಲರ್ ಮೌಲ್ಯ ವೃದ್ಧಿ ಮತ್ತು ದೇಶಿ ಷೇರುಪೇಟೆಗಳ ಇಳಿಮುಖ ವಹಿವಾಟಿನಿಂದಾಗಿ ರೂಪಾಯಿ ಮೌಲ್ಯ ಇಳಿಕೆ ಕಾಣುವಂತಾಗಿದೆ' ಎಂದು ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕರ ಸೈಫ್ ಮುಕದ್ದಮ್ ಹೇಳಿದ್ದಾರೆ.

## ಕಚ್ಚಾ ತೈಲ ದರ ಇಳಿಕೆ

ಕಚ್ಚಾತೈಲ ಉತ್ಪಾದನೆಯನ್ನು ಕ್ರಮೇಣ ಹೆಚ್ಚಿಸಲು ಒಪೆಕ್ ಮತ್ತು ಅದರ ಮಿತ್ರರಾಷ್ಟ್ರಗಳು ಒಪ್ಪಿರುವುದರಿಂದ ಸೋಮವಾರ ಕಚ್ಚಾ ತೈಲ ದರದಲ್ಲಿ ಇಳಿಕೆ ಕಂಡುಬಂತು. ಬ್ರೆಂಟ್ ತೈಲ ದರ ಶೇ 2.20ರಷ್ಟು ಇಳಿಕೆ ಆಗಿದ್ದು, ಒಂದು ಬ್ಯಾರಲ್‌ಗೆ 63.43 ಡಾಲರ್‌ಗಳಿಗೆ ತಲುಪಿದೆ.

## OBITUARY



DOB : 8.5.1938

DOD : 4.4.2021

**Sri A. ASWATHA RAMAIAH**

Deputy Commissioner of Police (Retd.)

*Your life was a blessing, your memory a treasure...*
*You are loved beyond words and missed beyond measure...*

Deeply mourned by : Smt. and Sri V.A. Kariyappa
Dr. Shashi and Dr. C. Chandrashekaraiah
Smt. Roopa and Sri V. Venu | Dr. Manju and Dr. M. Jayranganath
Smt. Chaya and Sri Vinay Shankarkumar
Ph. 98442 98175, 98867 27710



# 'ಎರಡನೆಯ ಅಲೆ ಎದುರಿಸಲು ಸಜ್ಜು'

**ನವದೆಹಲಿ (ಪಿಟಿಐ):** ಕೊರೊನಾ ವೈರಾಣುವಿನ ಎರಡನೆಯ ಅಲೆಯನ್ನು ಎದುರಿಸಲು ಭಾರತವು ಸಜ್ಜಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿಯೊಂದು ಹೇಳಿದೆ.

'2020–21ನೇ ಹಣಕಾಸು ವರ್ಷದಲ್ಲಿ ಐತಿಹಾಸಿಕ ಸಾಂಕ್ರಾಮಿಕವೊಂದನ್ನು ಎದುರಿಸಿದ ನಂತರ, ಭಾರತದ ಅರ್ಥ ವ್ಯವಸ್ಥೆಯು ಇನ್ನಷ್ಟು ಉತ್ತಮವಾಗಿ, ಇನ್ನಷ್ಟು ಗಟ್ಟಿಯಾಗಿ ರೂಪುಗೊಳ್ಳಲು ಸಜ್ಜಾಗಿ ನಿಂತಿದೆ. ಹಲವು ಸೂಚ್ಯಂಕಗಳು ಈ ಮಾತಿಗೆ ಆಧಾರವಾಗಿವೆ' ಎಂದು ವರದಿಯಲ್ಲಿ ಹೇಳಲಾಗಿದೆ.

'ಹೂಡಿಕೆಯ ಪ್ರಮಾಣ ಹೆಚ್ಚಾಗುತ್ತಿರುವುದು, ಆತ್ಮನಿರ್ಭರ ಯೋಜನೆ, ಮೂಲಸೌಕರ್ಯ ಹಾಗೂ ಬಂಡವಾಳ ವೆಚ್ಚಕ್ಕೆ ಭಾರಿ ಆದ್ಯತೆ ನೀಡಿರುವುದು ಈ ಚೇತರಿಕೆಗೆ ಕಾರಣವಾಗಿವೆ' ಎಂದು ಅದು ಉಲ್ಲೇಖಿಸಿದೆ.

ಫೆಬ್ರುವರಿಯ ನಂತರ ಪ್ರತಿದಿನ ವರದಿಯಾಗುತ್ತಿರುವ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಆಗುತ್ತಿರುವುದು ಎರಡನೆಯ ಅಲೆ ಶುರುವಾಗಿರುವುದರ ಸೂಚನೆ. ಆದರೆ, ಭಾರತವು ಎರಡನೆಯ ಅಲೆ ಶುರುವಾಗುವುದನ್ನು ವಿಳಂಬಿಸುವುದರಲ್ಲಿ ಯಶಸ್ವಿಯಾಗಿದೆ. ಭಾರತದಲ್ಲಿ ಮೊದಲ ಅಲೆಯು ಅತ್ಯಂತ ತೀವ್ರವಾಗಿದ್ದ ಹೊತ್ತಿಗೂ ಎರಡನೆಯ ಅಲೆ ಶುರುವಾಗಿದ್ದಕ್ಕೂ ನಡುವೆ 151 ದಿನಗಳ ಅಂತರವಿದೆ. ಇತರ ದೇಶಗಳಲ್ಲಿ ಈ ಅಂತರ ಇನ್ನೂ ಕಡಿಮೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

### 7 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿತ: ಐಎಚ್‌ಎಸ್ ಮರ್ಕಿಟ್

# ತಗ್ಗಿದ ತಯಾರಿಕಾ ಚಟುವಟಿಕೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ತಯಾರಿಕಾ ವಲಯದ ಚಟುವಟಿಕೆಗಳು ಮಾರ್ಚ್‌ನಲ್ಲಿ ಇಳಿಕೆ ಕಂಡಿವೆ. ಐಎಚ್‌ಎಸ್ ಮರ್ಕಿಟ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಫೆಬ್ರುವರಿಯಲ್ಲಿ 57.5ರಷ್ಟಿತ್ತು. ಮಾರ್ಚ್‌ನಲ್ಲಿ ಇದು 55.4ಕ್ಕೆ ಇಳಿಕೆಯಾಗಿದೆ. ಏಳು ತಿಂಗಳ ಕನಿಷ್ಠ ಮಟ್ಟದ ಬೆಳವಣಿಗೆ ಇದಾಗಿದೆ.

ಕೊರೊನಾ ಸೋಂಕು ಹರಡುವಿಕೆ ಮತ್ತೆ ಹೆಚ್ಚಾಗುತ್ತಿರುವುದರಿಂದ ಬೇಡಿಕೆ ಮೇಲೆ ಪರಿಣಾಮ ಉಂಟಾಗಿದೆ. ಇದರಿಂದಾಗಿ ತಯಾರಿಕಾ ವಲಯದ ಬೆಳವಣಿಗೆ ಕುಸಿಯುವಂತಾಗಿದೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ತಿಳಿಸಿದೆ. ಹೀಗಿದ್ದರೂ 50ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇರುವುದರಿಂದ ಬೆಳವಣಿಗೆಯು ಸಕಾರಾತ್ಮಕ ಮಟ್ಟದಲ್ಲಿ ಇದೆ ಎಂದು ಅದು ಹೇಳಿದೆ.



ಕೋವಿಡ್–19ಕ್ಕೆ ಸಂಬಂಧಿಸಿದ ನಿರ್ಬಂಧಗಳ ವಿಸ್ತರಣೆ ಹಾಗೂ ಹಲವು ರಾಜ್ಯಗಳಲ್ಲಿ ಲಾಕ್‌ಡೌನ್ ಕ್ರಮಗಳು ಮತ್ತೆ ಜಾರಿಗೆ ಬಂದಿರುವುದರಿಂದ ಭಾರತದ ತಯಾರಕರು ಏಪ್ರಿಲ್‌ನಲ್ಲಿ ಇನ್ನಷ್ಟು ಸವಾಲುಗಳನ್ನು ಎದುರಿಸಬೇಕಾಗಲಿದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ ಲಿಮಾ ತಿಳಿಸಿದ್ದಾರೆ.

ವ್ಯಾಪಾರ ನಡೆಸುವುದಕ್ಕೆ ಸಂಬಂಧಿಸಿದ ವಿಶ್ವಾಸವು ಮಾರ್ಚ್‌ನಲ್ಲಿ ಕುಗ್ಗಿದೆ. 12 ತಿಂಗಳುಗಳಲ್ಲಿ ಉತ್ಪಾದನೆಯಲ್ಲಿ ಬೆಳವಣಿಗೆ ಕಾಣಲಿದೆ ಎಂದು ಕೆಲವು ಕಂಪನಿಗಳು ಅಂದಾಜು ಮಾಡಿದ್ದರೆ, ಸದ್ಯ ಇರುವ ಮಟ್ಟದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ಹೆಚ್ಚಿನ ಕಂಪನಿಗಳು ಅಭಿಪ್ರಾಯಪಟ್ಟಿವೆ.


# ಪಿ. ಸಾಯಿನಾಥ್‌ಗೆ ಬೋಧಿವೃಕ್ಷ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಾ. ಅಂಬೇಡ್ಕರ್ ಸ್ಫೂರ್ತಿಧಾಮ ಸಂಸ್ಥೆ ನೀಡುವ 2021ನೇ ಸಾಲಿನ 'ಬೋಧಿವೃಕ್ಷ' ರಾಷ್ಟ್ರ ಮಟ್ಟದ ಪ್ರಶಸ್ತಿಗೆ ಪತ್ರಕರ್ತ ಪಿ. ಸಾಯಿನಾಥ್ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಫಲಕ ಒಳಗೊಂಡಿದೆ. ಬೋಧಿವರ್ಧನ ಪ್ರಶಸ್ತಿಗೆ ಸಿಎಎ ವಿರುದ್ಧದ ಹೋರಾಟದಲ್ಲಿ ಶಾಹಿನ್ ಬಾಗ್ ದಾದಿ ಎಂದೇ ಹೆಸರಾದ ಬಿಲ್ಕಿಸ್ ಬಾನೊ, ರೈತ ಹೋರಾಟಗಾರ ಜೆ.ಎಂ. ವೀರಸಂಗಯ್ಯ, ಸಾಮಾಜಿಕ ಹೋರಾಟಗಾರ ವಿ. ನಾಗರಾಜ್, ಅಲೆಮಾರಿ ಸಮುದಾಯ ಮತ್ತು ಕೂಲಿ ಕಾರ್ಮಿಕರ ಪರ ಕೆಲಸ ಮಾಡುತ್ತಿರುವ ಶಾರದಾ ಮಾಳಗಿ ಮತ್ತು ಜೀವಪರ ಕಾಳಜಿಯೊಂದಿಗೆ ದುಡಿಯುತ್ತಿರುವ 'ಮರ್ಸಿ ಏಂಜೆಲ್ಸ್' ಸ್ವಯಂ ಸೇವಕರ ಗುಂಪನ್ನು ಆಯ್ಕೆ ಮಾಡಲಾಗಿದೆ. ಬೋಧಿವರ್ಧನ ಪ್ರಶಸ್ತಿಯು ತಲಾ ₹20 ಸಾವಿರ ನಗದು ಒಳಗೊಂಡಿದೆ.

ಇದೇ 8ರಿಂದ ಅಂಬೇಡ್ಕರ್ ಹಬ್ಬ ಆರಂಭವಾಗಲಿದೆ. ಪ್ರತಿದಿನ ಸಂಜೆ 6 ಗಂಟೆಗೆ ವಿಶೇಷ ವೆಬಿನಾರ್ ಉಪನ್ಯಾಸ ಸರಣಿ ನಡೆಯಲಿದ್ದು, 1 4ರಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರು ಪ್ರಶಸ್ತಿ ಪ್ರದಾನ ಮಾಡುವರು. 'ಸ್ಫೂರ್ತಿಧಾಮ' ಸಂಸ್ಥೆ ಅಧ್ಯಕ್ಷ ಎಸ್. ಮರಿಸ್ವಾಮಿ ಅಧ್ಯಕ್ಷತೆ ವಹಿಸಲಿದ್ದು, ಚಿಂತಕ ಪ್ರೊ. ರವಿವರ್ಮ ಕುಮಾರ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.



ಸಾಯಿನಾಥ್



ಬಿಲ್ಕಿಸ್ ಬಾನೊ



ವೀರಸಂಗಯ್ಯ



ಶಾರದಾ ಮಾಳಗಿ



ವಿ.ನಾಗರಾಜ್

# ಷೇರು ಹೂಡಿಕೆಯಿಂದ ನಷ್ಟವಾದಾಗ ತೆರಿಗೆ ಲೆಕ್ಕಾಚಾರ ಹೇಗೆ?


**ಷೇರು ಮಾತು**

ಶರತ್ ಎಂ.ಎಸ್.



ಷೇರುಪೇಟೆಯಲ್ಲಿ ಹೂಡಿಕೆ ಮಾಡುವಾಗ ಎಲ್ಲ ಬಾರಿಯೂ ಲಾಭವೇ ಆಗುತ್ತದೆ ಎಂದಿಲ್ಲ, ನಷ್ಟವೂ ಆಗಬಹುದು. ಇದಕ್ಕಾಗೇ ತೆರಿಗೆ ನಿಯಮಗಳಲ್ಲಿ ಕೆಲವು ಅನುಕೂಲಗಳನ್ನು ಒದಗಿಸಲಾಗಿದೆ. ಷೇರುಪೇಟೆಯಲ್ಲಿ ವ್ಯವಹರಿಸುವ ಮುನ್ನ ಈ ವಿಚಾರಗಳನ್ನು ಅರಿತು ಮುನ್ನಡೆಯಬೇಕು.

- **ನಷ್ಟವನ್ನು ಸರಿದೂಗಿಸುವುದು ಎಂದರೇನು?:** ನಷ್ಟವನ್ನು ಸರಿದೂಗಿಸುವುದು (Set off of losses) ಅಂದರೆ ನಿರ್ದಿಷ್ಟ ವರ್ಷದಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದಾಗ ಆದ ಲಾಭ ಮತ್ತು ನಷ್ಟವನ್ನು ಹೊಂದಾಣಿಕೆ ಮಾಡುವ ಪ್ರಕ್ರಿಯೆ. ಉದಾಹರಣೆಗೆ, ನೀವು ನಿರ್ದಿಷ್ಟ ವರ್ಷದಲ್ಲಿ ಷೇರು ಮಾರುಕಟ್ಟೆ ವಹಿವಾಟು ನಡೆಸಿದಾಗ ಒಮ್ಮೆ ₹ 40 ಸಾವಿರ ಲಾಭವಾಗುತ್ತದೆ. ಮತ್ತೊಮ್ಮೆ ₹ 10 ಸಾವಿರ ನಷ್ಟವಾಗುತ್ತದೆ ಎಂದು ಭಾವಿಸೋಣ. ಈ ಲಾಭ-ನಷ್ಟವನ್ನು ಹೊಂದಿಸಿಕೊಳ್ಳುವ ಪ್ರಕ್ರಿಯೆಯನ್ನು ನಷ್ಟ ಸರಿದೂಗಿಸುವುದು (Set off of losses) ಎನ್ನಬಹುದು.
- **ನಷ್ಟ ಮುಂದಕ್ಕೊಯ್ಯುವುದು ಎಂದರೇನು?:** ಒಂದೊಮ್ಮೆ ನಿಮಗೆ ನಿರ್ದಿಷ್ಟ ವರ್ಷದಲ್ಲಿ ಷೇರು ಹೂಡಿಕೆಯಿಂದ ಲಾಭಕ್ಕಿಂತ ನಷ್ಟವೇ ಜಾಸ್ತಿ ಇದ್ದರೆ, ಆ ನಷ್ಟದ ಮೊತ್ತವನ್ನು ನೀವು ಮುಂದಿನ ವರ್ಷಕ್ಕೆ ಪರಿಗಣಿಸಿ ಮುಂದಕ್ಕೊಯ್ದು (Carry Forward) ಸರಿದೂಗಿಸಿಕೊಳ್ಳಬಹುದು. ಇದೇ ರೀತಿ ಎಂಟು ವರ್ಷಗಳ ಅವಧಿಗೆ ನಷ್ಟವನ್ನು ಮುಂದಕ್ಕೊಯ್ಯುವ ಅವಕಾಶವಿದೆ. ಆದರೆ ನಿಗದಿತ ದಿನಾಂಕದೊಳಗೆ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದರೆ ಮಾತ್ರ ಈ ಅನುಕೂಲ ಸಿಗುತ್ತದೆ.
- **ಯಾವ ನಷ್ಟವನ್ನು ಯಾವುದರ ಜತೆ ಸರಿದೂಗಿಸಬಹುದು?:** ದೀರ್ಘಾವಧಿ ಬಂಡವಾಳ ನಷ್ಟ (LTCL- Long Term Capital Loss) ಆದಾಗ ಅದನ್ನು ದೀರ್ಘಾವಧಿ ಬಂಡವಾಳ ಗಳಿಕೆ (LTCG) ಜತೆ ಮಾತ್ರ ಸರಿದೂಗಿಸಬಹುದು. ಆದರೆ, ಅಲ್ಪಾವಧಿ ಬಂಡವಾಳ ನಷ್ಟ (STCL – Short Term Capital Loss) ಉಂಟಾದಾಗ ಅದನ್ನು ಅಲ್ಪಾವಧಿ ಬಂಡವಾಳ ಗಳಿಕೆ (STCG) ಅಥವಾ ದೀರ್ಘಾವಧಿ ಬಂಡವಾಳ ಗಳಿಕೆ (LTCG) ಜತೆ ಹೊಂದಿಸಬಹುದು.
- **ನಷ್ಟ ಸರಿದೂಗಿಸುವುದು ಹೇಗೆ? ಉದಾಹರಣೆ- 1:** ನೀವು ಒಂದು ವರ್ಷದಲ್ಲಿ 10 ಬಾರಿ ಷೇರುಗಳ ಮಾರಾಟ ಮಾಡಿದ್ದು, ಅದರಲ್ಲಿ ಎಂಟು ಬಾರಿ ಲಾಭ, ಎರಡು ಬಾರಿ ನಷ್ಟ ಅನುಭವಿಸಿದ್ದೀರಿ ಎಂದಿಟ್ಟುಕೊಳ್ಳಿ. ಎಂಟು ಬಾರಿ ಷೇರುಗಳನ್ನು ಮಾರಾಟ ಮಾಡಿದಾಗ ಒಟ್ಟು ₹ 60 ಸಾವಿರ ಲಾಭವಾಗಿದೆ ಎಂದು ಭಾವಿಸೋಣ. ಇನ್ನುಳಿದ ಎರಡು ಬಾರಿ ಷೇರುಗಳನ್ನು ಮಾರಾಟ ಮಾಡಿದಾಗ ₹ 50 ಸಾವಿರ ನಷ್ಟವಾಗಿದೆ ಎಂದುಕೊಳ್ಳೋಣ. ಈ ಸಂದರ್ಭದಲ್ಲಿ ನೀವು ₹ 60 ಸಾವಿರ ಲಾಭದ ಮೇಲೆ ತೆರಿಗೆ ಕಟ್ಟಬೇಕಿಲ್ಲ. ₹ 60 ಸಾವಿರದಲ್ಲಿ ₹ 50 ಸಾವಿರವನ್ನು ಕಳೆದು ₹ 10 ಸಾವಿರದ ಗಳಿಕೆ ಮೇಲೆ ಮಾತ್ರ ತೆರಿಗೆ ಕಟ್ಟಬೇಕಾಗುತ್ತದೆ.



- **ನಷ್ಟ ಸರಿದೂಗಿಸುವುದು ಹೇಗೆ? ಉದಾಹರಣೆ- 2:** ನೀವು 2021ರಲ್ಲಿ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ವೇಳೆ ಷೇರು ಖರೀದಿಸಿ, ಕೂಡಲೇ ಮಾರಾಟ ಮಾಡಿ ₹ 5 ಸಾವಿರ ನಷ್ಟ ಮಾಡಿಕೊಂಡಿದ್ದೀರಿ ಎಂದುಕೊಳ್ಳೋಣ. ಇದೇ ವೇಳೆ ನೀವು 2018-19 ರಲ್ಲಿ ಖರೀದಿಸಿದ್ದ ಷೇರುಗಳನ್ನು 2021ರಲ್ಲಿ ಮಾರಾಟ ಮಾಡಿ ₹ 50 ಸಾವಿರ ಲಾಭ ಗಳಿಸಿದ್ದೀರಿ ಎಂದು ಭಾವಿಸೋಣ. ಇಂತಹ ಸಂದರ್ಭದಲ್ಲಿ ₹ 5 ಸಾವಿರದ ನಷ್ಟ ಕಳೆದು ₹ 45 ಸಾವಿರದ ಮೇಲೆ (50,000- 5,000 = 45,000) ಮಾತ್ರ ಶೇ 10ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆ ಕಟ್ಟಬೇಕಾಗುತ್ತದೆ.

**ಸಂಕ್ಷಿಪ್ತ ಸುದ್ದಿ**

## ಇಸ್ರೇಲ್ ಪ್ರಧಾನಿ ವಿಚಾರಣೆ ಪುನರಾರಂಭ

**ಜೆರುಸಲೇಂ (ಎಪಿ):** ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ವಿಚಾರಣೆ ಪುನರಾರಂಭಗೊಂಡಿದೆ.

ಸೋಮವಾರ ಜೆರುಸಲೇಂ ಜಿಲ್ಲಾ ನ್ಯಾಯಾಲಯಕ್ಕೆ ಹಾಜರಾದ ನೆತನ್ಯಾಹು ವಿಚಾರಣೆ ಎದುರಿಸಿದರು. ಅವರು ವಂಚನೆ, ನಂಬಿಕೆ ದ್ರೋಹ ಮತ್ತು ಲಂಚ ಪಡೆದ ಆರೋಪ ಎದುರಿಸುತ್ತಿದ್ದಾರೆ. ಆದರೆ, ಈ ಆರೋಪಗಳನ್ನು ಅವರು ತಳ್ಳಿ ಹಾಕಿದ್ದಾರೆ.

**ಬಹುಮತ ಇಲ್ಲ:** ಮಾರ್ಚ್ 23ರಂದು ಇಸ್ರೇಲ್ ಸಂಸತ್‌ಗೆ ನಡೆದ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆತಿಲ್ಲ. ಈ ಚುನಾವಣೆ ನೆತನ್ಯಾಹು ಅವರ ನಾಯಕತ್ವದ ಜನಮತಗಣನೆ ಎಂದು ಪರಿಗಣಿಸಲಾಗಿತ್ತು. ಆದರೆ, ನೆತನ್ಯಾಹು ನಾಯಕತ್ವದ ಮೈತ್ರಿಕೂಟದ ಸೇರಿದಂತೆ ಯಾವುದೇ ಮೈತ್ರಿಕೂಟ ಬಹುಮತ ಗಳಿಸಿಲ್ಲ.

## ಇಂಡೊನೇಷ್ಯಾ ಪ್ರವಾಹ: 75 ಮಂದಿ ಸಾವು

**ಜಕಾರ್ತ:** ಇಂಡೊನೇಷ್ಯಾ ಮತ್ತು ನೆರೆಯ ಪೂರ್ವ ಟಿಮೋರ್‌ನಲ್ಲಿ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಿಂದಾಗಿ 75ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹದಿಂದಾಗಿ ಇಂಡೊನೇಷ್ಯಾದ ಫ್ಲೋರ್ಸ್ ದ್ವೀಪದಿಂದ ಪೂರ್ವ ಟಿಮೋರ್‌ವರೆಗೆ ವ್ಯಾಪಿಸಿರುವ ದ್ವೀಪಗಳಲ್ಲಿ ತೀವ್ರ ಹಾನಿಯಾಗಿದ್ದು, ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 900-9050 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1550 |
| ಹೆರಕಿದ್ದು | 1900-2000 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |
| ಕಾಳು ಮೆಣಸು | 390 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-41000 |
| ಹಳತು | 42500-50500 |
| **ಕುಮಟ** | |
| ಚಿಪ್ಪು | 26589-30269 |
| ಕೋಕ | 18569-27099 |
| ಫ್ಯಾಕ್ಟರಿ | 14189-17669 |
| ಹಳೆಚಾಲಿ | 39869-41319 |
| ಹೊಸಚಾಲಿ | 34899-38139 |
| **ಸಿದ್ದಾಪುರ** | |
| ಬಿಳಿಗೋಟು | 24208-31099 |
| ಚಾಲಿ | 34899-38009 |
| ಕೋಕ | 20119-31499 |
| ಕೆಂಪುಗೋಟು | 24869-29369 |
| ರಾಶಿ | 38899-41399 |
| ತಟ್ಟಿಬೆಟ್ಟೆ | 30089-41399 |
| **ಯಲ್ಲಾಪುರ** | |
| ಬಿಳಿಗೋಟು | 24211-31812 |
| ಚಾಲಿ | 32369-39333 |
| ಕೋಕ | 18899-29012 |
| ಕೆಂಪುಗೋಟು | 28099-32969 |
| ರಾಶಿ | 39990-44519 |
| ತಟ್ಟಿಬೆಟ್ಟೆ | 33899-39699 |
| **ಶಿವಮೊಗ್ಗ ಎಪಿಎಂಸಿ** | |
| ಬೆಟ್ಟೆ | 40559-44000 |
| ಗೊರಬಲು | 17009-30009 |
| ರಾಶಿ | 411539-43059 |
| ಸರಕು | 47899-68896 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 9750 | 9600 | 9650 | --- ಸೆಂಟ್ಸ್ |
| ಎಸಿ | 3920 | 3700 | 3675 | |
| ಆರ್‌ಪಿ | 5100 | 5050 | 5025 | |
| ಆರ್‌ಸಿ | 2900 | 2900 | 2825 | --- ಡಾಲರ್ಸ್ |

**ಮುಂಬೈ ಧಾರಣೆ**

**ಶೇಂಗಾ**

5-4-2021

| | |
|---|---|
| ಜಾವಾ 70/80(ಹೊಸ) | 11000-11050 |
| ಜಾವಾ 80/90(ಹೊಸ) | 10500-10550 |
| ದಪ್ಪ ಮಧ್ಯಪ್ರದೇಶ(ಹೊಸ) | 9900-10000 |
| ದಪ್ಪ ಗುಜರಾತ್(ಹೊಸ) | 9200-9300 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1610 (1580) |
| ಒಂದು ವಾರದ ಡೆಲಿವರಿ | 1605 (1575) |
| ಸೋಯಾ ಕಚ್ಚಾ | 1280 (1267) |
| ಪಾಮ್ ವಾರದ ಡೆಲಿವರಿ | 1233 (1218) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1650 (1650) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ 45,050 (45,175)
ಬೆಳ್ಳಿ ಕೆ.ಜಿ 64,950 (65,300)

ಆವರಣದಲ್ಲಿ ಶನಿವಾರದ ಧಾರಣೆ

ತಮಿಳುನಾಡು, ಕೇರಳ, ಪುದುಚೇರಿಯಲ್ಲಿ ಒಂದೇ ಹಂತದಲ್ಲಿ ಪೂರ್ಣ: ಪಶ್ಚಿಮ ಬಂಗಾಳದಲ್ಲಿ ಇನ್ನೂ 5 ಹಂತಗಳು ಬಾಕಿ

# ಮೂರನೇ ಹಂತದ ಮತದಾನ ಇಂದು

ತಿರುವನಂತಪುರ/ಚೆನ್ನೈ/ಪುದುಚೇರಿ (ಪಿಟಿಐ): ಕೇರಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗೆ ಸೋಮವಾರ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಭಾರಿ ವಾಕ್ಸಮರಕ್ಕೆ ಕಾರಣವಾಗಿದ್ದ ಬಹಿರಂಗ ಪ್ರಚಾರ ಸಭೆಗಳು ಭಾನುವಾರಕ್ಕೆ ಅಂತ್ಯವಾಗಿವೆ. ಆದರೆ ಕೊನೆಯ ಕ್ಷಣದವರೆಗೂ ಮತದಾರರನ್ನು ಓಲೈಸಲು ಪಕ್ಷಗಳು ಮತ್ತು ಅಭ್ಯರ್ಥಿಗಳ ಯತ್ನ ಮುಂದುವರಿದಿದೆ.

ಕೇರಳ, ತಮಿಳುನಾಡು ಮತ್ತು ಪುದುಚೇರಿಯಲ್ಲಿ ಒಂದೇ ಹಂತದಲ್ಲಿ ಮತದಾನ ಮುಗಿಯಲಿದೆ. ಕೇರಳ ಮತ್ತು ತಮಿಳುನಾಡಿನಲ್ಲಿ ಆಡಳಿತ ಪಕ್ಷಗಳು ಮತ್ತು ವಿರೋಧ ಪಕ್ಷಗಳು ಬಿರುಸಿನ ಪ್ರಚಾರ ನಡೆಸಿವೆ. ಎರಡೂ ರಾಜ್ಯಗಳು ಭಾರಿ ವಾಕ್ಸಮರಕ್ಕೆ ಸಾಕ್ಷಿಯಾಗಿವೆ.

ಅಸ್ಸಾಂ ವಿಧಾನಸಭೆಗೆ ಸೋಮವಾರ ಮೂರನೇ ಮತ್ತು ಕೊನೆಯ ಹಂತದ ಮತದಾನ ನಡೆಯಲಿದೆ. ಅಸ್ಸಾಂನ ಪರ್ವತ ಪ್ರದೇಶ ಮತ್ತು ಬೋಡೋ ಜನರ ಪ್ರಾಬಲ್ಯವಿರುವ ಬೋಡೋಲ್ಯಾಂಡ್ ಪ್ರದೇಶದಲ್ಲಿ ಸೋಮವಾರ ಮತದಾನ ನಡೆಯಲಿದೆ. ಇಲ್ಲಿ ಎನ್‌ಡಿಎ ಮತ್ತು ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿರುವ ಬೋಡೋ ಪೀಪಲ್ಸ್ ಫ್ರಂಟ್ ಮಧ್ಯೆ ನೇರ ಸ್ಪರ್ಧೆ ಇದೆ. ಸೋಮವಾರವೇ ಮತದಾನ ಪ್ರಕ್ರಿಯೆ ಪೂರ್ಣಗೊಂಡರೂ, ಫಲಿತಾಂಶಕ್ಕಾಗಿ ಸುಮಾರು ಒಂದು ತಿಂಗಳು ಕಾಯಬೇಕಿದೆ.

ಪಶ್ಚಿಮ ಬಂಗಾಳದಲ್ಲೂ ಸೋಮವಾರ ಮೂರನೇ ಹಂತದ ಮತದಾನ ನಡೆಯಲಿದೆ. ಆದರೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಐದು ಹಂತದಲ್ಲಿ ಮತದಾನ ನಡೆಯಬೇಕಿದೆ. ಆ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯ ಬಿರುಸಿನಿಂದ ನಡೆಯುತ್ತಿದೆ.

## ಕೇರಳದಲ್ಲಿ ತ್ರಿಕೋನ ಸ್ಪರ್ಧೆ

**140** ಕ್ಷೇತ್ರಗಳು **957** ಅಭ್ಯರ್ಥಿಗಳು
**2.78** ಕೋಟಿ ಮತದಾರರು

- ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಿರೀಕ್ಷಿತ ಸಾಧನೆ ಮಾಡದ ಬಿಜೆಪಿ, ಈ ಭಾರಿ ತನ್ನ ಸ್ಥಾನವನ್ನು ಉತ್ತಮಪಡಿಸಿಕೊಳ್ಳುವ ಗುರಿ ಹೊಂದಿದೆ. ಮೆಟ್ರೊಮ್ಯಾನ್ ಇ.ಶ್ರೀಧರನ್ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದೆ
- ಎಲ್‌ಡಿಎಫ್ ಸರ್ಕಾರ ಭ್ರಷ್ಟಾಚಾರ ನಡೆಸಿದೆ ಎಂಬುದು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನ ಮುಖ್ಯ ಪ್ರಚಾರ ವಿಷಯವಾಗಿತ್ತು. ಒಂದೆಡೆ ಎಲ್‌ಡಿಎಫ್ ನೇತೃತ್ವದ ಎಡರಂಗ ಮತ್ತು ಮತ್ತೊಂದೆಡೆ ಬಿಜೆಪಿಯನ್ನು ಕಾಂಗ್ರೆಸ್ ಎದುರಿಸಬೇಕಿದೆ. ಎಲ್‌ಡಿಎಫ್‌ಯೇತರ ಮತಗಳು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಹಂಚಿಹೋಗುವ ಸಾಧ್ಯತೆ ಇದೆ
- ಸತತ ಪ್ರವಾಹಗಳ ನಿರ್ವಹಣೆ, ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಕೈಗೊಂಡ ಸಾಮಾಜಿಕ ಭದ್ರತಾ ಯೋಜನೆಗಳು ಎಲ್‌ಡಿಎಫ್ ವಿರುದ್ಧ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗುವುದನ್ನು ತಡೆದಿವೆ. ಇಂತಹ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಎಲ್‌ಡಿಎಫ್, ಚುನಾವಣೆಯನ್ನು ಎದುರಿಸುತ್ತಿದೆ

## ತಮಿಳುನಾಡು

**234** ಕ್ಷೇತ್ರಗಳು **3,998** ಅಭ್ಯರ್ಥಿಗಳು **6.28** ಕೋಟಿ ಮತದಾರರು

- ಆಡಳಿತಾರೂಢ ಎಐಎಡಿಎಂಕೆ ಮತ್ತು ಡಿಎಂಕೆ ಮಧ್ಯೆ ಹಲವು ಕ್ಷೇತ್ರಗಳಲ್ಲಿ ನೇರ ಸ್ಪರ್ಧೆ ಇದೆ. ಮತದಾರರನ್ನು ಸೆಳೆಯಲು ಎರಡೂ ಪಕ್ಷಗಳು ಭಾರಿ ಪ್ರಚಾರ ನಡೆಸಿವೆ
- ಎಐಎಡಿಎಂಕೆ ಜತೆ ಮೈತ್ರಿಮಾಡಿಕೊಂಡಿರುವ ಬಿಜೆಪಿ ತಮಿಳುನಾಡಿನಲ್ಲಿ ತನ್ನ ಅದೃಷ್ಟ ಪರೀಕ್ಷೆಗೆ ಇಳಿದಿದೆ. ‘ಕೇಂದ್ರ ಸರ್ಕಾರದ ತಮಿಳು ವಿರೋಧಿ ನೀತಿ’ಯ ಬಗೆಗಿನ ಅಸಮಾಧಾನದ ಮಧ್ಯೆಯೂ ಬಿಜೆಪಿ ನೆಲೆ ಕಂಡುಕೊಳ್ಳುತ್ತದೆಯೇ ಎಂಬುದು ಕುತೂಹಲದ ಸಂಗತಿ
- ಡಿಎಂಕೆ ಜತೆ ಮೈತ್ರಿಮಾಡಿಕೊಂಡಿರುವ ಕಾಂಗ್ರೆಸ್, ತನ್ನ ನೆಲೆಯನ್ನು ಉಳಿಸಿಕೊಳ್ಳಲು ಶತಾಯಗತಾಯ ಹೋರಾಡುತ್ತಿದೆ. ಚುನಾವಣೆಯ ಹೊಸ್ತಿಲಲ್ಲಿ ಪಕ್ಷದ ಹಲವು ನಾಯಕರು ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದ್ದು ದೊಡ್ಡ ಹಿನ್ನಡೆಯಾಗಿದೆ
- ಕಮಲ್ ಹಾಸನ್ ನೇತೃತ್ವದ ಮಕ್ಕಳ ನೀಧಿ ಮಯ್ಯಂ ಹಲವು ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸುವ ನಿರೀಕ್ಷೆ ಇದೆ. ಡಿಎಂಕೆ ಮತ್ತು ಎಐಎಡಿಎಂಕೆಯ ಹೊಸತಲೆಮಾರಿನ ನಾಯಕರು ಇದೇ ಮೊದಲ ಬಾರಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ

## ಅಸ್ಸಾಂ: ಬೋಡೋ ಜನರ ಮಧ್ಯೆ ಪೈಪೋಟಿ

**40** ಕ್ಷೇತ್ರಗಳು **337** ಅಭ್ಯರ್ಥಿಗಳು **79.19** ಲಕ್ಷ ಮತದಾರರು

- ಮೂರು ಮತ್ತು ಕೊನೆಯ ಹಂತದ ಮತದಾನ
- ಬೋಡೋಲ್ಯಾಂಡ್ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ. ಬಿಜೆಪಿಯ ಮಿತ್ರಪಕ್ಷ ಯುಪಿಪಿಎಲ್ ಮತ್ತು ಕಾಂಗ್ರೆಸ್‌ನ ಮಿತ್ರಪಕ್ಷ ಬಿಪಿಎಫ್ ಮಧ್ಯೆ ಇಲ್ಲಿ ನೇರ ಹಣಾಹಣಿ ಇದೆ. ಎರಡೂ ಪಕ್ಷಗಳು ಸಮಾನ ಬಲ ಹೊಂದಿವೆ.
- ಬೋಡೋಲ್ಯಾಂಡ್ ಹೊರತುಪಡಿಸಿದ ಕ್ಷೇತ್ರಗಳಲ್ಲಿ ಅಸ್ಸಾಂ ಗಣ ಪರಿಷತ್ ಪ್ರಾಬಲ್ಯ ಹೊಂದಿದೆ. ಆದರೆ ಕಾಂಗ್ರೆಸ್ ನೇತೃತ್ವದಲ್ಲಿ ಎಐಯುಡಿಎಫ್ ಮತ್ತು ಬಿಪಿಎಫ್ ಮೈತ್ರಿ ಮಾಡಿಕೊಂಡಿರುವ ಕಾರಣ ಎನ್‌ಡಿಎ ತನ್ನ ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ

## ಪುದುಚೇರಿಯಲ್ಲಿ ಕಾಂಗ್ರೆಸ್ ವರ್ಸಸ್ ಕಾಂಗ್ರೆಸ್

**30** ಕ್ಷೇತ್ರಗಳು
**324** ಅಭ್ಯರ್ಥಿಗಳು
**10.03** ಲಕ್ಷ ಮತದಾರರು

- ಪುದುಚೇರಿಯಲ್ಲಿ ಈ ಬಾರಿ ಸ್ಪರ್ಧೆ ಏಕಮುಖವಾಗುವ ಸಾಧ್ಯತೆ ಅತ್ಯಧಿಕವಾಗಿದೆ. ಕಾಂಗ್ರೆಸ್ ಮತ್ತು ಡಿಎಂಕೆಯ ಹಲವು ಪ್ರಮುಖ ನಾಯಕರು ತಮ್ಮ ಪಕ್ಷಗಳನ್ನು ತೊರೆದು ಬಿಜೆಪಿ ಸೇರಿದ್ದಾರೆ. ಈ ನಾಯಕರಿಗೇ ಬಿಜೆಪಿ ಟಿಕೆಟ್ ನೀಡಿದೆ. ಇವರ ಮೂಲಕವೇ ಪುದುಚೇರಿಯಲ್ಲಿ ಸರ್ಕಾರ ರಚಿಸಲು ಬಿಜೆಪಿ ಸಿದ್ಧತೆ ನಡೆಸಿದೆ. ಹೀಗಾಗಿ ಈ ಚುನಾವಣೆಯನ್ನು ಕಾಂಗ್ರೆಸ್ ವರ್ಸಸ್ ಕಾಂಗ್ರೆಸ್ ಮತ್ತು ಡಿಎಂಕೆ ವರ್ಸಸ್ ಡಿಎಂಕೆ ಎಂದು ಕರೆಯಲಾಗಿದೆ. ಬಿಜೆಪಿ ಗೆಲ್ಲುವ ಸಾಧ್ಯತೆ ಹೆಚ್ಚು ಎಂಬ ವಿಶ್ಲೇಷಣೆ ಇದೆ.

## ಪಶ್ಚಿಮ ಬಂಗಾಳ

**31** ಕ್ಷೇತ್ರಗಳು **205** ಅಭ್ಯರ್ಥಿಗಳು
**75.8** ಲಕ್ಷ ಮತದಾರರು

- ಪಶ್ಚಿಮ ಬಂಗಾಳದಲ್ಲಿ ಮೂರನೇ ಹಂತದಲ್ಲಿ ಮತದಾನ ನಡೆಯುವ ಜಿಲ್ಲೆಗಳಲ್ಲಿ ದಕ್ಷಿಣ 24 ಪರಗಣ ಜಿಲ್ಲೆಯೂ ಒಂದು. ಟಿಎಂಸಿ ಭದ್ರಕೋಟೆಯಾಗಿರುವ ಈ ಜಿಲ್ಲೆಯಲ್ಲಿ ಬಿಜೆಪಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದೆ. ಇಲ್ಲಿ ಈಗ ಟಿಎಂಸಿ-ಬಿಜೆಪಿ-ಎಡರಂಗದ ಅಭ್ಯರ್ಥಿಗಳ ಮಧ್ಯೆ ತ್ರಿಕೋನ ಸ್ಪರ್ಧೆ ಇದೆ. ಪಶ್ಚಿಮ ಬಂಗಾಳ ವಿಧಾನಸಭೆಗೆ 31 ಶಾಸಕರನ್ನು ಆಯ್ಕೆ ಮಾಡಿ ಕಳುಹಿಸುವ ಈ ಜಿಲ್ಲೆಯಿಂದ ಬಿಜೆಪಿ ಮತ್ತು ಟಿಎಂಸಿ ಬಿರುಸಿನ ಪ್ರಚಾರ ನಡೆಸಿವೆ
- ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಎಡರಂಗ ಮೈತ್ರಿಕೂಟದ ಐಎಸ್‌ಎಫ್ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದೆ. ಐಎಸ್‌ಎಫ್ ಅಭ್ಯರ್ಥಿಗಳು ಟಿಎಂಸಿಯ ಮುಸ್ಲಿಂ ಮತಗಳನ್ನು ಸೆಳೆಯುವ ಸಾಧ್ಯತೆ ಅತ್ಯಧಿಕವಾಗಿದೆ. ಇದು ಬಿಜೆಪಿಗೆ ವರವಾಗಲಿದೆ ಎಂದು ನಿರೀಕ್ಷಿಸಲಾಗಿದೆ

## ಸಂಕ್ಷಿಪ್ತ ಸುದ್ದಿ

### ವೋಟು ಕೇಳಿ ನೋಟು ಪಡೆಯುತ್ತಿರುವ ಎಂಇಎಸ್!

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಮತ್ತು ಶಿವಸೇನಾ ಬೆಂಬಲಿತ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಶುಭಂ ಸೆಳಕೆ ಅವರು ಮರಾಠಿ ಭಾಷಿಗರು ಹೆಚ್ಚಿರುವ ಪ್ರದೇಶಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ್ದಾರೆ.

ಮತ ಯಾಚನೆ ವೇಳೆ ಅವರು ಪ್ರಚೋದನಕಾರಿ ಭಾಷಣವನ್ನೂ ಮಾಡುತ್ತಿದ್ದಾರೆ ಎನ್ನಲಾಗುತ್ತಿದೆ. ಮತ ಕೇಳಿ ನೋಟನ್ನೂ ಪಡೆದುಕೊಳ್ಳುತ್ತಿದ್ದಾರೆ. ಚುನಾವಣೆ ಖರ್ಚಿಗಾಗಿ ದೇಣಿಗೆ ನೀಡುವವರಿಗೆ ರಸೀದಿ ಕೊಡಲಾಗುತ್ತಿದೆ ಎಂದು ತಿಳಿದುಬಂದಿದೆ.

### ಮುಳೆಗೆ ಮರಾಠರ ಇನ್ನೊಂದು ಬಣ ಬೆಂಬಲ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಎನ್‌ಸಿಪಿಯಿಂದ ಸ್ಪರ್ಧಿಸಿ ನಾಮಪತ್ರ ಹಿಂದಕ್ಕೆ ಪಡೆದು ಬಿಜೆಪಿ ಬೆಂಬಲಿಸಿರುವ ಮಾಜಿ ಶಾಸಕ ಮಾರುತಿರಾವ್ ಮುಳೆ ಅವರ ಭಾವಚಿತ್ರಕ್ಕೆ ಶಿವಾಜಿ ಪಾರ್ಕ್‌ನಲ್ಲಿ ಸೋಮವಾರ ಮರಾಠಾ ಸಮಾಜದ ಇನ್ನೊಂದು ಬಣದವರು ಕ್ಷೀರಾಭಿಷೇಕ ಮಾಡಿದರು.

‘ಮುಳೆ ಅವರು ಬಿಜೆಪಿ ಬೆಂಬಲಿಸಿದ್ದನ್ನು ವಿರೋಧಿಸಿ ಕೆಲವರು ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಅವಮಾನ ಮಾಡಿದ್ದರು. ಹೀಗಾಗಿ ಕ್ಷೀರಾಭಿಷೇಕ ನಡೆಸಲಾಯಿತು’ ಎಂದು ಮರಾಠಾ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ವಿ.ಟಿ.ಶಿಂಧೆ ತಿಳಿಸಿದರು.

ಮುಳೆ ಬೆಂಬಲಿಗರ ಸಭೆಯಲ್ಲಿ ಮುಖಂಡರಾದ ತಾತೇರಾವ್ ಪಾಟೀಲ, ಜ್ಞಾನೇಶ್ವರ ಮುಳೆ, ಸಂಭಾಜಿ ಜಗತಾಪ, ರಾಜೀವ್ ಭೋಸ್ಲೆ, ವಿಶ್ವನಾಥ ಪಾಟೀಲ ಲಾಡವಂತಿ, ಬಾಲು ಪಾಟೀಲ ಹೊನ್ನಳ್ಳಿ, ಬಾಳಾ ಅಷ್ಟೆ, ದೀಪಕ ನಾಗದೆ, ವಿನಯಕುಮಾರ ಮಾತನಾಡಿದರು.

### ಕಳವು ಪ್ರಕರಣ: ಚುನಾವಣಾಧಿಕಾರಿ ಅಮಾನತು

ಬರಪೇಟಾ (ಅಸ್ಸಾಂ) (ಪಿಟಿಐ): ಕಚೇರಿಯಲ್ಲಿ ₹55 ಲಕ್ಷ ನಗದು ಕಳವಾದ ಪ್ರಕರಣದಲ್ಲಿ ಬರಪೇಟಾ ಚುನಾವಣಾ ಅಧಿಕಾರಿ ಶಶಿಕುಮಾರ್ ದೇಕಾ ಅವರನ್ನು ಅಮಾನತು ಮಾಡಲಾಗಿದೆ.

ಚುನಾವಣಾ ಕಚೇರಿಯಿಂದ ಹಣ ಕಳ್ಳತನ ಮಾಡಿದ ಆರೋಪದ ಮೇಲೆ ಇಬ್ಬರು ಸರ್ಕಾರಿ ಅಧಿಕಾರಿಗಳನ್ನು ಭಾನುವಾರ ಬಂಧಿಸಲಾಗಿತ್ತು. ಕಂಪ್ಯೂಟರ್ ಆಪರೇಟರ್ ಅಲಕೇಶ್ ದೇಕಾ ಮತ್ತು ಕಿರಿಯ ಸಹಾಯಕ ಪ್ರಾಂಜಲ್ ಕಾಕತಿ ಅವರು ಬಂಧನಕ್ಕೊಳಗಾಗಿದ್ದಾರೆ.

## ‘ಬಂಗಾಳ ಬಳಿಕ ದೆಹಲಿಗೆ’

ಚುಂಚುರಾ (ಪಶ್ಚಿಮ ಬಂಗಾಳ) (ಪಿಟಿಐ): ‘ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ಬಳಿಕ ದೆಹಲಿಯಲ್ಲಿ ಅಧಿಕಾರ ಹಿಡಿಯುವತ್ತ ಹೆಜ್ಜೆ ಹಾಕುತ್ತೇನೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಪಶ್ಚಿಮ ಬಂಗಾಳವನ್ನು ಸ್ಥಳೀಯರೇ ಆಳುತ್ತಾರೆ ಎಂದು ಪ್ರತಿಪಾದಿಸಿದ್ದಾರೆ. ತಮ್ಮನ್ನು ‘ರಾಯಲ್ ಬೆಂಗಾಳ್ ಟೈಗರ್’ ಎಂದು ಕರೆದುಕೊಂಡಿರುವ ಅವರು, ಪಶ್ಚಿಮ ಬಂಗಾಳವು ಗುಜರಾತಿನವರಿಂದ ಆಳಲ್ಪಡುವುದಿಲ್ಲ ಎಂದು ಹೇಳಿದ್ದಾರೆ.

ಛತ್ತೀಸಗಡದಲ್ಲಿ ನಕ್ಸಲ್ ದಾಳಿಯ ಕುರಿತು ಕೇಂದ್ರವನ್ನು ಟೀಕಿಸಿದ ಅವರು, ಬಿಜೆಪಿ ಸರ್ಕಾರವು ಕೇಂದ್ರದಲ್ಲಿ ಆಡಳಿತ ನಡೆಸುವುದನ್ನು ಬಿಟ್ಟು ಪಶ್ಚಿಮ ಬಂಗಾಳದ ಕಡೆಗೆ ಹೆಚ್ಚು ಗಮನ ನೀಡುತ್ತಿದೆ ಎಂದು ಹೇಳಿದ್ದಾರೆ.

ಸೂಕ್ತ ಅಭ್ಯರ್ಥಿಗಳು ಸಿಗದ ಕಾರಣ, ಬಿಜೆಪಿ ತನ್ನ ಸಂಸದರನ್ನು ವಿಧಾನಸಭಾ ಚುನಾವಣೆಗೆ ಇಳಿಸುತ್ತಿದೆ ಎಂದು ಮಮತಾ ಅವರು ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಆರೋಪಿಸಿದರು. ಹೂಗ್ಲಿಯ ಲೋಕಸಭಾ ಸದಸ್ಯ ಲಾಕೆಟ್ ಚಟರ್ಜಿ ಅವರನ್ನು ಚುಂಚುರಾ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಕಣಕ್ಕಿಳಿಸಿದೆ.

ಪಶ್ಚಿಮ ಬಂಗಾಳ ಚುನಾವಣೆಯನ್ನು 8 ಹಂತಗಳಲ್ಲಿ ನಡೆಸುವ ಔಚಿತ್ಯವನ್ನು ಪ್ರಶ್ನಿಸಿದ ಅವರು, ಕೋವಿಡ್ ಕಾರಣದಿಂದ ಚುನಾವಣೆಯನ್ನು ಆದಷ್ಟು ಬೇಗ ಅಂದರೆ, 3–4 ಹಂತಗಳಲ್ಲಿ ನಡೆಸಿದ್ದರೆ ಸಾಕಿತ್ತಲ್ಲವೇ ಎಂದು ಪ್ರಶ್ನಿಸಿದ್ದಾರೆ.


ಬಿಜೆಪಿ ಸಂಸದ ಮನೋಜ್ ತಿವಾರಿ ಅವರು ಪ್ರಚಾರ ವೇಳೆಯಲ್ಲಿ ಗಾಡಿ ಎಳೆದು ಗಮನ ಸೆಳೆದರು – ಪಿಟಿಐ ಚಿತ್ರ

### ಸ್ಟಾಲಿನ್ ಅನರ್ಹಕ್ಕೆ ಎಐಎಡಿಎಂಕೆ ಆಗ್ರಹ

ಚೆನ್ನೈ (ಪಿಟಿಐ): ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಮತ್ತು ಅವರ ಪಕ್ಷದ ನಾಲ್ವರು ಅಭ್ಯರ್ಥಿಗಳನ್ನು ಸ್ಪರ್ಧೆಯಿಂದ ಅನರ್ಹಗೊಳಿಸಬೇಕು ಎಂದು ಚುನಾವಣಾ ಆಯೋಗವನ್ನು ಆಡಳಿತಾರೂಢ ಎಐಎಡಿಎಂಕೆ ಆಗ್ರಹಿಸಿದೆ.

ಕೊಳತ್ತೂರ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಸ್ಟಾಲಿನ್ ಅವರ ನಿಕಟವರ್ತಿಗಳು ಪ್ರತಿ ಮತದಾರರಿಗೆ ₹5 ಸಾವಿರ ನೀಡಿದ್ದಾರೆ ಎಂದು ಎಐಎಡಿಎಂಕೆ ವಕೀಲರ ವಿಭಾಗದ ಜಂಟಿ ಕಾರ್ಯದರ್ಶಿ ಆರ್.ಎಂ. ಬಾಬು ಮುರುಗವೇಲ್ ಅವರು ತಮಿಳುನಾಡು ಮುಖ್ಯ ಚುನಾವಣಾಧಿಕಾರಿ ಸತ್ಯವ್ರತ ಸಾಹೂ ಅವರಿಗೆ ದೂರು ನೀಡಿದ್ದಾರೆ. ಸ್ಟಾಲಿನ್ ಪರವಾಗಿ ಪ್ರಚಾರ ಮಾಡುವುದಕ್ಕೆ ಮತ್ತು ಅವರಿಗೆ ಮತ ಹಾಕುವುದಕ್ಕೆ ಮಹಿಳಾ ಸ್ವ ಸಹಾಯ ಗುಂಪುಗಳಿಗೆ ತಲಾ ₹10 ಸಾವಿರ ನೀಡಲಾಗಿದೆ. ಪ್ರತಿ ಮತದಾರರಿಗೆ ಡಿಜಿಟಲ್ ಪಾವತಿ ಮೂಲಕ ₹5,000 ಪಾವತಿಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

## ನುಡಿ-ಕಿಡಿ


ಪಕ್ಷಕ್ಕೆ ಮತ ಹಾಕುವುದಕ್ಕಾಗಿ ಬಿಜೆಪಿ ಜನರಿಗೆ ಹಣ ಹಂಚುತ್ತಿದೆ. ಆ ಹಣವನ್ನು ತೆಗೆದುಕೊಳ್ಳಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆ (ಮತದಾರರಿಗೆ), ವಾಪಸ್ ಕೊಡಬೇಡಿ. ಮತ ಮಾತ್ರ ಸಣ್ಣ ಹೂವಿಗೆ ಹಾಕಿ (ಟಿಎಂಸಿಯ ಚುನಾವಣಾ ಚಿಹ್ನೆ)

**ಅಭಿಷೇಕ್ ಬ್ಯಾನರ್ಜಿ,** ಟಿಎಂಸಿ ಮುಖಂಡ


ದೇಶವಿಡೀ ಸುತ್ತಾಡಿ ಪಕ್ಷ (ಬಿಜೆಪಿ) ಕಟ್ಟಿದ ಎಲ್.ಕೆ. ಅಡ್ವಾಣಿ ಮತ್ತು ಮುರಳಿ ಮನೋಹರ ಜೋಶಿ ಅವರಂತಹ ನಾಯಕರಿಗೆ 75 ವರ್ಷ ವಯಸ್ಸಾಗಿದೆ ಎಂದು ಮಾರ್ಗದರ್ಶಕ ಮಂಡಳಿಯಲ್ಲಿ ಕೂರಿಸಿ ಮೂಲೆಗುಂಪು ಮಾಡಲಾಗಿದೆ. ಆದರೆ, ಕೇರಳದಲ್ಲಿ 88 ವರ್ಷ ವಯಸ್ಸಿನ ಇ. ಶ್ರೀಧರನ್‌ಗೆ ಟಿಕೆಟ್ ನೀಡಲಾಗಿದೆ

**ಮಲ್ಲಿಕಾರ್ಜುನ ಖರ್ಗೆ,** ರಾಜ್ಯಸಭೆ ವಿರೋಧ ಪಕ್ಷದ ನಾಯಕ


ಕಾಂಗ್ರೆಸ್ ಗಂಭೀರವಾಗಿಲ್ಲ ಎಂಬುದು ಸಾಮಾನ್ಯ ಜನರಿಗೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಬಿಜೆಪಿಯು ಅತ್ಯಂತ ಗಂಭೀರ ಮಾತ್ರವಲ್ಲದೆ, ಜನರಿಗೆ ಮತ್ತು ಪಕ್ಷಕ್ಕೆ ಉತ್ತರದಾಯಿತ್ವವನ್ನೂ ಹೊಂದಿದೆ ಎಂಬುದು ಜನರಿಗೆ ತಿಳಿದಿದೆ

**ಜಿತೇಂದ್ರ ಸಿಂಗ್,** ಬಿಜೆಪಿ ಮುಖಂಡ


ಇಂಡಿಯನ್ ಸೆಕ್ಯುಲರ್ ಫ್ರಂಟ್‌ನಂತಹ (ಐಎಸ್‌ಎಫ್) ಪಕ್ಷಗಳು ವಿಷಸರ್ಪಕ್ಕಿಂತ ಅಪಾಯಕಾರಿ. ಫರ್ಫುರಾ ಶರೀಫ್‌ನಿಂದ ವಂಚಕನೊಬ್ಬ ಬಂದಿದ್ದಾನೆ. ಬಿಜೆಪಿಯಿಂದ ಹಣ ಪಡೆದಿದ್ದಾನೆ. ನಂಬಿಕೆದ್ರೋಹದ ಮೂಲಕ ಬಂಗಾಳವನ್ನು ಗೆಲ್ಲಲಾಗದು ಎಂಬುದು ನೆನಪಿರಲಿ

**ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ

## ಚುನಾವಣಾ ಕಣದಲ್ಲಿ

- **2,813 ಪ್ರಕರಣ:** ಅಸ್ಸಾಂನಲ್ಲಿ ಚುನಾವಣೆ ಘೋಷಣೆಯಾದ ಬಳಿಕ ನೀತಿ ಸಂಹಿತೆ ಉಲ್ಲಂಘನೆ ಮಾಡಿದ ಸಂಬಂಧ 2,813 ಪ್ರಕರಣಗಳು ದಾಖಲಾಗಿವೆ.
- **ನಿಷೇಧಾಜ್ಞೆ:** ಪಶ್ಚಿಮ ಬಂಗಾಳದ ವಿಧಾನಸಭಾ ಕ್ಷೇತ್ರಗಳು ಅತಿ ಸೂಕ್ಷ್ಮ ಎಂದು ಬಣ್ಣಿಸಿರುವ ಚುನಾವಣಾ ಆಯೋಗವು 24 ಪರಗಣ ಜಿಲ್ಲೆಯ 16, ಹೌರಾ ಜಿಲ್ಲೆಯ 7 ಮತ್ತು ಹೂಗ್ಲಿ ಜಿಲ್ಲೆಯ 8 ಕ್ಷೇತ್ರಗಳಲ್ಲಿ 144ನೇ ಸೆಕ್ಷನ್ ಅನ್ವಯ ನಿಷೇಧಾಜ್ಞೆ ಹೇರಿದೆ.
- **ಜಯಾ ಪ್ರಚಾರ:** ಬಾಲಿವುಡ್‌ನ ಮಾಜಿ ತಾರೆ ಮತ್ತು ಸಮಾಜವಾದಿ ಪಕ್ಷದ ಸಂಸದೆ ಜಯಾ ಬಚ್ಚನ್ ಅವರು ದಕ್ಷಿಣ ಕೋಲ್ಕತ್ತದ ಟಾಲಿಗುಂಗೆ ಕ್ಷೇತ್ರದಲ್ಲಿ ಟಿಎಂಸಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದರು. ಅವರು ರೋಡ್‌ಶೋ ನಡೆಸಿದ ಸ್ಥಳಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಜನರು ಸೇರಿದ್ದರು.
- **ಮತಯಂತ್ರವಿದ್ದ ಲಾರಿಗೆ ದಾಳಿ:** ಅಸ್ಸಾಂನ ಕ್ಯಾಚರ್ ಜಿಲ್ಲೆಯಲ್ಲಿ ಮತಯಂತ್ರಗಳನ್ನು ಸಾಗಿಸುತ್ತಿದ್ದ ಲಾರಿಯ ಮೇಲೆ ದಾಳಿ ನಡೆಸಿದ ಮೂವರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ದಾಳಿ ನಡೆಸಿದ 20ಕ್ಕೂ ಹೆಚ್ಚು ಜನರನ್ನು ಪೊಲೀಸರು ಗುರುತಿಸಿದ್ದಾರೆ. ಸಂಚಾರ ದಟ್ಟಣೆಯಿಂದಾಗಿ ಲಾರಿ ನಿಂತಿದ್ದಾಗ ಈ ದಾಳಿ ನಡೆದಿದೆ. ಗುಂಪು ಲಾರಿಯನ್ನು ಮಗುಚಿ ಹಾಕಿದೆ. ಆದರೆ, ಅವರು ಮತಯಂತ್ರಗಳನ್ನು ಒಯ್ದಿಲ್ಲ. ದಾಳಿಗೆ ಕಾರಣ ಗೊತ್ತಾಗಿಲ್ಲ.

ಸಚಿವತ್ರಯರ ಭೇಟಿ: ಉಪ ಚುನಾವಣೆಯಲ್ಲಿ ಬೆಂಬಲಿಸುವಂತೆ ಕೋರಿಕೆ

## ಲಖನ್ ಜಾರಕಿಹೊಳಿ ಸೆಳೆಯಲು ಬಿಜೆಪಿ ಯತ್ನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಾಂಗ್ರೆಸ್ ಮುಖಂಡ ಮತ್ತು ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಆ ಪಕ್ಷದ ಅಭ್ಯರ್ಥಿಯಾಗಿರುವ ಸತೀಶ ಜಾರಕಿಹೊಳಿ ಸಹೋದರ ಲಖನ್ ಜಾರಕಿಹೊಳಿ ಅವರನ್ನು ಸಚಿವರಾದ ಜಗದೀಶ ಶೆಟ್ಟರ್, ಉಮೇಶ ಕತ್ತಿ ಹಾಗೂ ಭೈರತಿ ಬಸವರಾಜ್ ಸೋಮವಾರ ಭೇಟಿಯಾಗಿ ಚರ್ಚಿಸಿದ್ದಾರೆ. ಇದು ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ.

ಜಿಲ್ಲೆಯ ಗೋಕಾಕದ ನಿವಾಸದಲ್ಲಿ ಅವರನ್ನು ಭೇಟಿಯಾದ ಸಚಿವತ್ರಯರೊಂದಿಗೆ, ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಇದ್ದರು. ಅವರನ್ನು ಲಖನ್ ಹೂಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ಅವರೊಂದಿಗೆ ಗೋಪ್ಯವಾಗಿ ಮಾತುಕತೆ ನಡೆಸಿದರು ಬಿಜೆಪಿ ಸೇರುವಂತೆ ಆಹ್ವಾನ ನೀಡಿದರು ಎಂದು ತಿಳಿದುಬಂದಿದೆ.

‘ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಹಿನ್ನೆಲೆಯಲ್ಲಿ, ನಮ್ಮ ಅಭ್ಯರ್ಥಿ ಪರವಾಗಿ ಎಲ್ಲ ಕಡೆಯೂ ಪ್ರಚಾರ ಮಾಡುತ್ತೇವೆ. ಅಂತೆಯೇ ಲಖನ್ ಮನೆಗೂ ಬಂದು ಬೆಂಬಲ ಕೋರಿದ್ದೇವೆ. ಕಾಂಗ್ರೆಸ್ ಬಗ್ಗೆ ಅವರಿಗೆ ಬೇಸರವಿದೆ. ಈ ಬಗ್ಗೆ ಅವರೇ ಈಚೆಗೆ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಅವರಿಂದಲೂ ಬೆಂಬಲ ಕೇಳಿದ್ದೇವೆ. ನಿರ್ಧಾರವನ್ನು ಅವರೇ ಕೈಗೊಳ್ಳಬೇಕು’ ಎಂದು ಶೆಟ್ಟರ್ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

‘ರಮೇಶ ಹಾಗೂ ಬಾಲಚಂದ್ರ ಜಾರಕಿಹೊಳಿ ಯಾವ ಪಕ್ಷದಲ್ಲಿದ್ದಾರೆಯೋ ಅವರ ಪರ ನಾನು ಕೆಲಸ ಮಾಡಬೇಕಾಗುತ್ತದೆ. ಈಗ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡಿದ್ದೀರಿ. ದೊಡ್ಡ ನಾಯಕರು ನಮ್ಮ ಮನೆಗೆ ಬಂದಿದ್ದಾರೆ. ನಾನು ಬಹಳ ಚಿಕ್ಕವನು. ದೊಡ್ಡವರು ಬಂದಾಗ ಇಲ್ಲ ಎನ್ನಲಾಗುವುದಿಲ್ಲ. ಬಿಜೆಪಿ ಪರವಾಗಿ ಪ್ರಚಾರ ಮಾಡುತ್ತೇವೆ’ ಎಂದು ಲಖನ್ ಹೇಳಿದರು. ‘ಬಿಜೆಪಿ ಸೇರ್ಪಡೆ ಬಗ್ಗೆ ಸಹೋದರರೊಂದಿಗೆ ಚರ್ಚಿಸಿ ನಿರ್ಧರಿಸುವೆ’ ಎಂದರು.

ರಮೇಶ ಜಾರಕಿಹೊಳಿ ಅಳಿಯ ಅಂಬಿರಾವ ಪಾಟೀಲ ಇದ್ದರು. ಬಳಿಕ ಅಭ್ಯರ್ಥಿ ಮಂಗಲಾ ಕೂಡ ಭೇಟಿಯಾಗಿ ಬೆಂಬಲ ಕೋರಿದರು.

‘ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಆ ಯುವತಿಯ ಪಾಲಕರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ನೈತಿಕ ಹೊಣೆ ಹೊತ್ತು ಶಿವಕುಮಾರ್ ರಾಜೀನಾಮೆ ನೀಡಬೇಕು’ ಎಂದು ಲಖನ್ ಆಗ್ರಹಿಸಿದ್ದರು. ಸಹೋದರ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಪರವಾಗಿ ಗೋಕಾಕದಲ್ಲಿ ಪ್ರಚಾರ ಮಾಡಿಲ್ಲ. ಇದು ‘ಆಪರೇಷನ್ ಕಮಲ’ದ ಮುನ್ಸೂಚನೆ ಎನ್ನಲಾಗುತ್ತಿದೆ.

‘ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ತಮ್ಮನನ್ನು (ಲಖನ್) ಗೋಕಾಕ ಕ್ಷೇತ್ರದಲ್ಲಿ ನಿಲ್ಲಿಸುತ್ತೇನೆ. ನಾನು ಕನಕಪುರದಲ್ಲಿ ಡಿ.ಕೆ. ಶಿವಕುಮಾರ್ ವಿರುದ್ಧ ಸ್ಪರ್ಧಿಸಿ, ಸೋಲಿಸುತ್ತೇನೆ’ ಎಂದು ರಮೇಶ ಜಾರಕಿಹೊಳಿ ಈಚೆಗೆ ಬೆಂಗಳೂರಿನಲ್ಲಿ ಹೇಳಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಲಖನ್ ನಡೆ ಕುತೂಹಲ ಮೂಡಿಸಿದೆ. ಅಲ್ಲಿನ ಜೆಡಿಎಸ್ ಮುಖಂಡ ಅಶೋಕ ಪೂಜಾರಿ ಕಾಂಗ್ರೆಸ್ ಸೇರ್ಪಡೆ ಆಗುವುದಾಗಿ ಈಚೆಗೆ ತಿಳಿಸಿದ್ದಾರೆ. ಲಖನ್ ಹಾಗೂ ಅಶೋಕ ಇಬ್ಬರೂ ಗೋಕಾಕ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದಾರೆ.

### ಹೋಗುವವರು ಹೋಗಲಿ: ಸತೀಶ

ಬೆಳಗಾವಿ: ‘ಹೋಗುವವರು ಹೋಗಲಿ. ಒಬ್ಬರು ಹೋದರೆ, ಮತ್ತೊಬ್ಬರು ಬಂದೇ ಬರುತ್ತಾರೆ. ನಮ್ಮ ಪಕ್ಷದ ಮತಗಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ’

– ಸಹೋದರ ಲಖನ್ ಜಾರಕಿಹೊಳಿ ಬಿಜೆಪಿ ಸೇರುತ್ತಿದ್ದಾರೆಯೇ ಎಂಬ ಪ್ರಶ್ನೆಗೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮೇಲಿನಂತೆ ಪ್ರತಿಕ್ರಿಯೆ ನೀಡಿದರು.

‘ನನ್ನನ್ನೂ ಬಿಜೆಪಿಯವರು ಪ್ರತಿದಿನ ಭೇಟಿ ಆಗುತ್ತಾರೆ. ಅದರಲ್ಲೇನೂ ವಿಶೇಷವಿಲ್ಲ. ಯಾರಿಗೆ ಬೆಂಬಲ ನೀಡುತ್ತಾರೆ ಎನ್ನುವುದು ಅವರ ವೈಯಕ್ತಿಕ ವಿಚಾರ’ ಎಂದು ಹೇಳಿದರು.

ಮಸ್ಕಿ ಮತದಾರರಿಗೆ ಸಿದ್ದರಾಮಯ್ಯ ಸಲಹೆ

## ‘ವಿಜಯೇಂದ್ರನ ದುಡ್ಡು ಪಡೆದು ಕಾಂಗ್ರೆಸ್‌ಗೆ ಮತ ನೀಡಿ’

ಪ್ರಜಾವಾಣಿ ವಾರ್ತೆ

ತುರ್ವಿಹಾಳ (ರಾಯಚೂರು ಜಿಲ್ಲೆ): ‘ಮಸ್ಕಿ ಕ್ಷೇತ್ರದಲ್ಲಿ ಪ್ರಚಾರ ಮಾಡುತ್ತಿರುವ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ದುಡ್ಡು ತೆಗೆದುಕೊಂಡು ಬಂದಿದ್ದಾರೆ. ಅವರಿಂದ ದುಡ್ಡು ಪಡೆದುಕೊಂಡರೂ ಕಾಂಗ್ರೆಸ್ ಅಭ್ಯರ್ಥಿಗೇ ಮತಕೊಡಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತದಾರರಿಗೆ ಮನವಿ ಮಾಡಿದರು.

ಸೋಮವಾರ ಇಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ವಿಜಯೇಂದ್ರ ಶಾಸಕರೂ ಅಲ್ಲ, ಸಚಿವರೂ ಅಲ್ಲ. ಅವರ ಬಳಿ ಇರುವುದು ಜನರು ತೆರಿಗೆ ಕಟ್ಟಿರುವ ಹಣ’ ಎಂದರು.

‘ಸಂತೆಯಲ್ಲಿ ಜಾನುವಾರು ಮಾರಾಟವಾದಂತೆ ಶಾಸಕರಾಗಿದ್ದ ಪ್ರತಾಪಗೌಡ ₹ 30 ಕೋಟಿ ಪಡೆದು ತಮ್ಮನ್ನು ತಾವು ಮಾರಾಟ ಮಾಡಿಕೊಂಡಿದ್ದಾರೆ. ಕ್ಷೇತ್ರದ ಮತದಾರರ ಗೌರವಕ್ಕೆ ಚ್ಯುತಿ ತಂದವರನ್ನು ಸಹಿಸಿಕೊಳ್ಳಬಾರದು’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಅನೈತಿಕ ರಾಜಕಾರಣ ಮಾಡುತ್ತಿರುವ ಬಿಜೆಪಿಯವರಿಗೆ ತಕ್ಕ ಪಾಠ ಕಲಿಸಲು ಬಸನಗೌಡ ತುರ್ವಿಹಾಳ ಅವರನ್ನು ಆಯ್ಕೆ ಮಾಡಬೇಕು’ ಎಂದು ಮನವಿ ಮಾಡಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ, ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ, ಅಮರೇಗೌಡ ಬಯ್ಯಾಪುರ ಮಾತನಾಡಿದರು.

**‘ಹೂಮಳೆ’ಯ ಸ್ವಾಗತ:** ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಿಂಧನೂರು ತಾಲ್ಲೂಕಿನ ಗ್ರಾಮಗಳಿಗೆ ಸೋಮವಾರ ಉಪಚುನಾವಣೆ ಪ್ರಚಾರಕ್ಕೆ ಬಂದಿದ್ದ ಕಾಂಗ್ರೆಸ್ ನಾಯಕರನ್ನು ಬೆಂಬಲಿಗರು ಭಾರಿ ಪ್ರಮಾಣದಲ್ಲಿ ಹೂವುಗಳನ್ನು ಸುರಿಸಿ, ಪಟಾಕಿ ಸಿಡಿಸಿ ಅದ್ಧೂರಿಯಾಗಿ ಸ್ವಾಗತಿಸಿದರು.

ಸಿಂಧನೂರು– ಕುಷ್ಟಗಿ ಮಾರ್ಗದಲ್ಲಿರುವ ಉಮಲೂಟಿ, ಕಲಮಂಗಿ, ತುರ್ವಿಹಾಳ, ಗುಂಜಳ್ಳಿ, ವಿರೂಪಾಪುರ ಹಾಗೂ ಗೌಡನಬಾವಿ ಗ್ರಾಮಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಿಂತುಕೊಂಡಿದ್ದರು. ತುರ್ವಿಹಾಳ ಪಟ್ಟಣದಲ್ಲಿ ಜೆಸಿಬಿ ಯಂತ್ರದ ನೆರವಿನೊಂದಿಗೆ ‘ಹೂಮಳೆ’ ಸುರಿಸಲಾಯಿತು.


ಮಸ್ಕಿ ವಿಧಾನಸಭೆ ಉಪಚುನಾವಣೆ ಪ್ರಚಾರಕ್ಕಾಗಿ ಆಗಮಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಅಭ್ಯರ್ಥಿ ಬಸನಗೌಡ ತುರ್ವಿಹಾಳ ಹಾಗೂ ಪಕ್ಷದ ಮುಖಂಡರನ್ನು ಸಿಂಧನೂರು ತಾಲ್ಲೂಕು ತುರ್ವಿಹಾಳದಲ್ಲಿ ಬೆಂಬಲಿಗರು ಹೂಮಳೆ ಸುರಿಸಿ ಸ್ವಾಗತಿಸಿದರು

### ‘ಇಸ್ರೊ ಬೇಹುಗಾರಿಕೆ ಪ್ರಕರಣ, ಮುಂದಿನ ವಾರ ವಿಚಾರಣೆ’

ನವದೆಹಲಿ (ಪಿಟಿಐ): ಬೇಹುಗಾರಿಕೆ ಆರೋಪದ ಮೇಲೆ ಇಸ್ರೊ ವಿಜ್ಞಾನಿ ಡಾ.ನಂಬಿ ನಾರಾಯಣನ್ ಅವರನ್ನು ಅಕ್ರಮವಾಗಿ ಬಂಧಿಸಿಟ್ಟಿದ್ದ ಪ್ರಕರಣದ ವರದಿಯ ವಿಚಾರಣೆಯನ್ನು ಮುಂದಿನ ವಾರ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ನಾರಾಯಣನ್ ಅವರನ್ನು ಅಕ್ರಮವಾಗಿ ಬಂಧಿಸಿಟ್ಟು, ಅವರಿಗೆ ಭಾರಿ ಮುಜುಗರ ಹಾಗೂ ಯಾತನೆ ಆಗುವಂತೆ ಮಾಡಿದ್ದ ಪೊಲೀಸ್ ಅಧಿಕಾರಿಗಳ ವಿರುದ್ಧ ನಡೆಸಿದ ಉನ್ನತ ಮಟ್ಟದ ತನಿಖೆಯ ವರದಿಯನ್ನು ಇತ್ತೀಚೆಗೆ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿತ್ತು.

ಈ ವರದಿ ಕುರಿತ ವಿಚಾರಣೆಯನ್ನು ಮುಂದಿನವಾರ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

## ‘ಮದನಿ ‘ಅಪಾಯಕಾರಿ’ ವ್ಯಕ್ತಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ 2008ರಲ್ಲಿ ನಡೆದಿದ್ದ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ, ಕೇರಳದ ಪೀಪಲ್ ಡೆಮಾಕ್ರಟಿಕ್ ಪಕ್ಷದ ಮುಖಂಡ ಅಬ್ದುಲ್ ನಾಸಿರ್ ಮದನಿ ಒಬ್ಬ ‘ಅಪಾಯಕಾರಿ’ ವ್ಯಕ್ತಿ ಎಂದು ಸುಪ್ರೀಂ ಕೋರ್ಟ್ ಸೋಮವಾರ ಕರೆದಿದೆ.

ಜಾಮೀನು ಷರತ್ತುಗಳನ್ನು ಸಡಿಲಿಸುವ ಮೂಲಕ ಕೇರಳಕ್ಕೆ ಭೇಟಿ ನೀಡಲು ಮತ್ತು ಅಲ್ಲೇ ವಾಸ್ತವ್ಯ ಹೂಡಲು ಅವಕಾಶ ಕೋರಿ ಮದನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ, ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿತು.

ಅಧೀನ ನ್ಯಾಯಾಲಯದಲ್ಲಿ ಸದ್ಯ ನ್ಯಾಯಾಧೀಶರೇ ಇಲ್ಲದ್ದರಿಂದ ವಿಚಾರಣೆ ನಡೆಯುತ್ತಿಲ್ಲ. ಈಗಾಗಲೇ ಜಾಮೀನಿನ ಏಳು ವರ್ಷಗಳ ಅವಧಿಯನ್ನು ಬೆಂಗಳೂರಿನಲ್ಲಿ ಕಳೆಯಲಾಗಿದೆ. ಕೋವಿಡ್-19 ಸಾಂಕ್ರಾಮಿಕ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಜಾಮೀನು ಷರತ್ತುಗಳನ್ನು ಸಡಿಲಿಸುವಂತೆ ಮದನಿ ಪರ ವಕೀಲರು ಕೋರಿದರು.



ಬೆಂಗಳೂರಿನಲ್ಲಿ ಮನೆಯ ಬಾಡಿಗೆ ಅಧಿಕವಾಗಿದ್ದು, ಆರೋಪಿಗೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿದೆ. ಅಲ್ಲದೆ, ನ್ಯಾಯಪೀಠವು ಈ ಹಿಂದೆ 3 ಬಾರಿ ಕೇರಳಕ್ಕೆ ಭೇಟಿ ನೀಡಲು ಅನುಮತಿ ನೀಡುವ ಮೂಲಕ ಜಾಮೀನು ಷರತ್ತುಗಳನ್ನು ಸಡಿಲಿಸಿತ್ತು ಎಂದು ಹೇಳಿದರು.

‘ಬೆಂಗಳೂರು ಬಿಟ್ಟು ಹೊರ ಹೋಗದಂತೆ ಷರತ್ತು ವಿಧಿಸಿ 2014ರ ಜುಲೈ 11ರಂದು ಮದನಿಗೆ ಜಾಮೀನು ಮಂಜೂರು ಮಾಡಲಾದ ಪೀಠದಲ್ಲಿ ನಾನೂ ಇದ್ದೆ. ಆತ ಒಬ್ಬ ಅಪಾಯಕಾರಿ ವ್ಯಕ್ತಿ’ ಎಂದು ಮುಖ್ಯ ನ್ಯಾಯಮೂರ್ತಿ ಇದೇ ಸಂದರ್ಭದಲ್ಲಿ ಹೇಳಿದರು. ಪ್ರಸ್ತುತ ನ್ಯಾಯಪೀಠದ ಭಾಗವಾಗಿರುವ ನ್ಯಾಯಮೂರ್ತಿ ವಿ. ರಾಮ ಸುಬ್ರಮಣಿಯನ್ ಅವರು ಈ ಹಿಂದೆ ಅರ್ಜಿದಾರರ ಪರ ವಾದ ಮಂಡಿಸಿದ್ದರೇ ಎಂಬುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ವಿಚಾರಣೆಯನ್ನು ಒಂದುವಾರದ ಅವಧಿಗೆ ಮುಂದೂಡಲಾಯಿತು.

### ‘ದಾವಣಗೆರೆ ಸ್ಮಾರ್ಟ್ ಸಿಟಿಗೆ ವಿಶ್ವದಲ್ಲಿ 15ನೇ ಸ್ಥಾನ’

ದಾವಣಗೆರೆ: ರೋಲ್ಯಾಂಡ್ ಬರ್ಗರ್ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ ದಾವಣಗೆರೆಯು ವಿಶ್ವದ ಸ್ಮಾರ್ಟ್ ಸಿಟಿಗಳಲ್ಲಿ 15ನೇ ಸ್ಥಾನ ಪಡೆದಿದೆ. ಈ ವರದಿ ಸ್ಮಾರ್ಟ್ ಸಿಟೀಸ್ ಮಿಷನ್ ಮಾಸಿಕ ಬುಲೆಟಿನ್–ಏಪ್ರಿಲ್ 2021ರಲ್ಲಿ ಪ್ರಕಟವಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ತಿಳಿಸಿದ್ದಾರೆ.

ಸೋಮವಾರ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳನ್ನು ವೀಕ್ಷಿಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಸ್ಮಾರ್ಟ್ ಸಿಟಿ ನಗರಗಳಲ್ಲಿ ಅವರು ಅಧ್ಯಯನ ನಡೆಸಿದ್ದಾರೆ. ಭಾರತದಲ್ಲಿ ದಾವಣಗೆರೆ ಮಾತ್ರ ಸ್ಥಾನ ಪಡೆದಿದೆ ಎಂದು ವಿವರಿಸಿದರು.

## ಚೆನಾಬ್ ರೈಲ್ವೆ ಸೇತುವೆಯ ಕಮಾನು ಕಾಮಗಾರಿ ಪೂರ್ಣ

ಕೌಡಿ (ಪಿಟಿಐ: ಜಮ್ಮು ಮತ್ತು ಕಾಶ್ಮೀರದ ಚೆನಾಬ್ ನದಿ ಮೇಲೆ ನಿರ್ಮಿಸುತ್ತಿರುವ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯ ಕಮಾನು ಕಾಮಗಾರಿ ಸೋಮವಾರ ಪೂರ್ಣಗೊಂಡಿದ್ದು, ಇದು ಸಾಧನೆಯ ಮೈಲಿಗಲ್ಲು ಎಂದು ಉತ್ತರ ರೈಲ್ವೆ ಇಲಾಖೆ ಹೇಳಿದೆ.

‘1.3 ಕಿಲೋಮೀಟರ್ ಉದ್ದದ ಈ ಸೇತುವೆ ಕಾಶ್ಮೀರ ಕಣಿವೆಯ ಸಂಪರ್ಕವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಸೇತುವೆಯು ನೆಲಮಟ್ಟದಿಂದ 359 ಮೀಟರ್ ಎತ್ತರವಿದ್ದು, ಇದು ವಿಶ್ವವಿಖ್ಯಾತ ಐಫೆಲ್ ಟವರ್‌ಗಿಂತ 35 ಮೀಟರ್ ಎತ್ತರ ಇದೆ’ ಎಂದು ಉತ್ತರ ರೈಲ್ವೆ ವಿಭಾಗದ ಜನರಲ್ ಮ್ಯಾನೇಜರ್ ಅಶುತೋಷ್ ಗಂಗಲ್ ಹೇಳಿದ್ದಾರೆ.

‘ಗಂಟೆಗೆ 266 ಕಿ.ಮೀ. ವೇಗದಲ್ಲಿ ಬೀಸುವ ಗಾಳಿ ಮತ್ತು ಹೆಚ್ಚಿನ ತೀವ್ರತೆಯ ಭೂಕಂಪವನ್ನು ತಡೆದುಕೊಳ್ಳುವ ಸಾಮರ್ಥ್ಯ ಈ ಸೇತುವೆಗಿದೆ. ಒಂದು ವರ್ಷದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ’ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ಈ ನಿರ್ಮಾಣ ಕಾಮಗಾರಿಯು ಆಧುನಿಕ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಭಾರತ ಸಾಧಿಸಿರುವ ಪ್ರಗತಿಯನ್ನು ಬಿಂಬಿಸುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

### ರೆಡ್ಡಿ ಪ್ರಕರಣ: ಆದೇಶ ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ನವದೆಹಲಿ: ಬಳ್ಳಾರಿ, ಅನಂತಪುರ ಮತ್ತು ಕಡಪ ನಗರಗಳಿಗೆ ತೆರಳದಂತೆ ವಿಧಿಸಲಾದ ಜಾಮೀನು ಷರತ್ತನ್ನು ಸಡಿಲಗೊಳಿಸುವಂತೆ ಕೋರಿ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್ ಈ ಸಂಬಂಧದ ಆದೇಶವನ್ನು ಕಾಯ್ದಿರಿಸಿದೆ.

ಆರೋಪಿ ಅತ್ಯಂತ ಪ್ರಭಾವಿ ವ್ಯಕ್ತಿ. ಸಾಕ್ಷಿಗಳನ್ನು ಬೆದರಿಸುವಂಥವರು. ಪ್ರಕರಣದ ಅನೇಕ ಸಾಕ್ಷಿಗಳು ಪೊಲೀಸ್ ಭದ್ರತೆಯಲ್ಲಿ ಇದ್ದು, ಜಾಮೀನು ಷರತ್ತನ್ನು ಸಡಿಲಿಸಕೂಡದು ಎಂದು ಸಿಬಿಐ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಧವಿ ದಿವಾನ್ ಅವರು ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠವನ್ನು ಕೋರಿದರು.

# ಐಪಿಎಲ್: ಅಭ್ಯಾಸಕ್ಕೆ ಅವಕಾಶ


## ಮಹಾರಾಷ್ಟ್ರ ಸರ್ಕಾರದಿಂದ ತಂಡಗಳಿಗೆ ಹಸಿರು ನಿಶಾನೆ

ಮುಂಬೈ (ಪಿಟಿಐ): ಮುಂಬೈನಲ್ಲಿ ಐಪಿಎಲ್ ತಂಡಗಳ ತಾಲೀಮಿಗೆ ಸೋಮವಾರದಿಂದ ಅವಕಾಶ ಮಾಡಿಕೊಡಲಾಗಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ರಾತ್ರಿ 8 ಗಂಟೆಯ ನಂತರ ಆಟಗಾರರಿಗೆ ಅಭ್ಯಾಸ ನಡೆಸಲು ಮಹಾರಾಷ್ಟ್ರ ಸರ್ಕಾರ ಹಸಿರು ನಿಶಾನೆ ತೋರಿದೆ. ರಾತ್ರಿ ಕರ್ಫ್ಯೂ ಅವಧಿಯಲ್ಲಿ ತಾವು ತಂಗಿರುವ ಹೋಟೆಲ್‌ಗಳನ್ನು ಸೇರಿಕೊಳ್ಳಬೇಕೆಂದೂ ತಿಳಿಸಿದೆ.

ನಗರದಲ್ಲಿ ಸೋಮವಾರ ಸಂಜೆಯಿಂದ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಯಿತು.

'ಬಯೋ-ಬಬಲ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆನ್ನುವ ಸೂಚನೆಯೊಂದಿಗೆ ರಾಜ್ಯ ಸರ್ಕಾರವು ಐಪಿಎಲ್ ತಂಡಗಳಿಗೆ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಿದೆ.

'ಪಂದ್ಯಗಳು ನಡೆಯುವ ಸಮಯವನ್ನು ಪರಿಗಣಿಸಿ, ಸಿಸಿಐ ಹಾಗೂ ಎಂಸಿಎ ಕ್ರೀಡಾಂಗಣಗಳಲ್ಲಿ ತಂಡಗಳು ಎರಡು ಅವಧಿಯಲ್ಲಿ (ಸಂಜೆ 4ರಿಂದ 6.30 ಹಾಗೂ ರಾತ್ರಿ 7.30ರಿಂದ 10 ಗಂಟೆಯವರೆಗೆ) ತಾಲೀಮು ನಡೆಸಬಹುದು' ಎಂದು ರಾಜ್ಯ ಸರ್ಕಾರದ ವಿಪತ್ತು ನಿರ್ವಹಣೆ, ಪರಿಹಾರ ಹಾಗೂ ಪುನರ್ವಸತಿ ಇಲಾಖೆಯ ಸಹಾಯಕ ಕಾರ್ಯದರ್ಶಿ ಶ್ರೀರಂಗ ಗೋಲಪ್ ಅವರು ಬಿಸಿಸಿಐಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.



ಐಪಿಎಲ್ ಟ್ರೋಫಿ– ಇಂಡಿಯನ್ ಪ್ರೀಮಿಯರ್ ಲೀಗ್ ವೆಬ್‌ಸೈಟ್ ಚಿತ್ರ

ಐಪಿಎಲ್‌ನ 10 ಪಂದ್ಯಗಳನ್ನು ವಾಂಖೆಡೆ ಕ್ರೀಡಾಂಗಣದಲ್ಲಿ ಆಯೋಜಿಸಲಿದ್ದು, ಅವುಗಳಲ್ಲಿ ಒಂಬತ್ತು ಪಂದ್ಯಗಳು ಸಂಜೆ 7.30ಕ್ಕೆ ಪ್ರಾರಂಭವಾಗಲಿವೆ. ಏಪ್ರಿಲ್ 10ರಂದು ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವೆ ವಾಂಖೆಡೆಯಲ್ಲಿ ಮೊದಲ ಪಂದ್ಯ ನಡೆಯಲಿದೆ.

**ಕೋವಿಡ್ 'ನೆಗೆಟಿವ್':** ವಾಂಖೆಡೆ ಕ್ರೀಡಾಂಗಣದ ಹತ್ತು ಮಂದಿ ಸಿಬ್ಬಂದಿಗೆ ಈ ಹಿಂದೆ ಕೋವಿಡ್ ದೃಢಪಟ್ಟಿತ್ತು. ಈಗ ಅವರೆಲ್ಲರ ವರದಿ 'ನೆಗೆಟಿವ್' ಬಂದಿದೆ ಎಂದು ತಿಳಿದುಬಂದಿದೆ.

## ಆರ್‌ಸಿಬಿ- ಬಿಕೆಟಿ ಟೈರ್ಸ್ ಒಪ್ಪಂದ

ಬೆಂಗಳೂರು: ಭಾರತದ ಆಫ್ ಹೈವೇ ಟೈರ್ಸ್ ಮಾರುಕಟ್ಟೆಯಲ್ಲಿ ಪ್ರಮುಖವಾಗಿರುವ ಬಾಲಕೃಷ್ಣ ಇಂಡಸ್ಟ್ರೀಸ್ ಲಿಮಿಟೆಡ್ (ಬಿಕೆಟಿ ಟೈರ್ಸ್) ಐಪಿಎಲ್‌ನಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಧಿಕೃತ ಟೈರ್ಸ್ ಪಾಲುದಾರ ಆಗಲು ಮುಂದೆ ಬಂದಿದೆ.

ಹಿಂದಿನ ಆವೃತ್ತಿಗಳಲ್ಲಿ ಬಿಕೆಟಿ ಕಂಪನಿ ಮುಂಬೈ ಇಂಡಿಯನ್ಸ್, ಕೊಲ್ಕತ್ತಾ ನೈಟ್ ರೈಡರ್ಸ್, ರಾಜಸ್ಥಾನ್ ರಾಯಲ್ಸ್, ಕಿಂಗ್ಸ್ ಇಲೆವನ್ ಪಂಜಾಬ್ (ಈಗ ಪಂಜಾಬ್ ಕಿಂಗ್ಸ್), ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳೊಂದಿಗೆ ಪಾಲುದಾರಿಕೆ ಹೊಂದಿತ್ತು.

'2020ರಲ್ಲಿ ಕಂಪನಿಯು ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್ (ಬಿಬಿಎಲ್) ಜೊತೆ ಒಪ್ಪಂದ ಮಾಡಿಕೊಂಡಿತ್ತು. ಕ್ರಿಕೆಟ್ ಮಾತ್ರವಲ್ಲದೆ ಫುಟ್‌ಬಾಲ್, ಸಾಹಸ ಕ್ರೀಡೆಗಳ ಬಗ್ಗೆಯೂ ಬಿಕೆಟಿ ಆಸಕ್ತಿ ಹೊಂದಿದೆ' ಎಂದು ಬಿಕೆಟಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಪೋದ್ದಾರ್ ಹೇಳಿದ್ದಾರೆ.

# ಬೆಳಕಿನ ಚಿತ್ತಾರದಲ್ಲಿ ರಾಯಲ್ಸ್ ಜೆರ್ಸಿ ಬಿಡುಗಡೆ

ಜೈಪುರ (ಪಿಟಿಐ): ಇಲ್ಲಿನ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಬೆಳಕಿನ ಚಿತ್ತಾರ ಮೂಡಿದಾಗ ಹೋಟೆಲ್ ಕೊಠಡಿಗಳಲ್ಲಿ ಕುಳಿತಿದ್ದ ರಾಜಸ್ಥಾನ ರಾಯಲ್ಸ್ ತಂಡದ ಆಟಗಾರರು ಮತ್ತು ವಿಶ್ವದಾದ್ಯಂತ ಇರುವ ಅಭಿಮಾನಿಗಳು ಪುಳಕಗೊಂಡರು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ತಂಡದ ಪೋಷಾಕು ಬಿಡುಗಡೆ ಸಮಾರಂಭವನ್ನು ರಾಯಲ್ಸ್ ಅದ್ದೂರಿಯಾಗಿ ಆಯೋಜಿಸಿತ್ತು. ಇಡೀ ಕ್ರೀಡಾಂಗಣವನ್ನು ಬಳಸಿ ತ್ರಿ-ಡಿ ಪ್ರೊಜೆಕ್ಟರ್‌ನಲ್ಲಿ ಬಣ್ಣಬಣ್ಣದ ಬೆಳಕಿನ ವಿನ್ಯಾಸ ಮಾಡಲಾಗಿತ್ತು. ಲೇಜರ್ ಬೀಮ್‌ಗಳನ್ನೂ ಬಿಡಲಾಯಿತು. ಅಬ್ಬರದ ಸಂಗೀತದ ಹಿನ್ನೆಲೆಯೂ ಇತ್ತು.

ಈ ಕಾರ್ಯಕ್ರಮದ ನೇರ ಪ್ರಸಾರಕ್ಕೂ ವ್ಯವಸ್ಥೆ ಮಾಡಲಾಗಿತ್ತು. ವಿಶ್ವದ ಮೂಲೆಮೂಲೆಗಳಲ್ಲಿರುವ ಅಭಿಮಾನಿಗಳು ಮತ್ತು ಮುಂಬೈನ ಹೋಟೆಲ್‌ಗಳಲ್ಲಿ ಬಯೊಬಬಲ್‌ನಲ್ಲಿರುವ ಆಟಗಾರರಿಗೆ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು.



ರಾಜಸ್ಥಾನ ರಾಯಲ್ಸ್ ತಂಡದ ಸಂಜು ಸ್ಯಾಮ್ಸನ್ –ಟ್ವಿಟರ್ ಚಿತ್ರ

ರಾಯಲ್ಸ್ ತಂಡವನ್ನು ಹೃದಯಾಂತರಾಳದಿಂದ ಪ್ರೀತಿಸುವ ಅಭಿಮಾನಿಗಳಿಗೆ ಮುದ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿಶಾಲ ಕ್ರೀಡಾಂಗಣ, ಜೈಪುರ ನಗರದ ಸೌಂದರ್ಯ, ರಾಜಸ್ಥಾನದ ಸಂಸ್ಕೃತಿ ಮುಂತಾದವುಗಳನ್ನು ಬಿಂಬಿಸಿದ ಕಾರ್ಯಕ್ರಮದಲ್ಲಿ ಫ್ರಾಂಚೈಸ್ ಜೊತೆ ಕೈಜೋಡಿಸಿರುವ ರೆಡ್ ಬುಲ್ ಕಂಪನಿಗೆ ಹೊಸ ಹುರುಪು ತುಂಬುವ ಚಿಂತನೆಯೂ ಅಡಗಿತ್ತು ಎಂದು ರಾಯಲ್ಸ್ ಪ್ರಕಟಣೆ ತಿಳಿಸಿದೆ.

ಕೋವಿಡ್–19: ಈಜುಕೇಂದ್ರ ಪುನರಾರಂಭಕ್ಕೆ ಅವಕಾಶ ನೀಡಲು ಒತ್ತಾಯ

# ಈಜುಪಟುಗಳು, ಕೋಚ್‌ಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಚ್‌ಗಳು, ಈಜುಪಟುಗಳು ಮತ್ತು ಅವರ ಪಾಲಕರ ಸಹನೆಯ ಕಟ್ಟೆಯೊಡೆಯಿತು. ನಗರದ ಕಂಠೀರವ ಕ್ರೀಡಾಂಗಣ ಆವರಣದಲ್ಲಿರುವ ರಾಜ್ಯ ಈಜುಸಂಸ್ಥೆಯ ಕಚೇರಿ ಬಳಿ ಸೋಮವಾರ ಜಮಾಯಿಸಿದ 600ಕ್ಕೂ ಹೆಚ್ಚು ಮಂದಿ ಈಜುಕೇಂದ್ರ ಪುನರಾರಂಭಿಸಲು ಅವಕಾಶ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಇದೇ ವೇಳೆ ರಾಜ್ಯ ಈಜು ಸಂಸ್ಥೆಯ ಅಧ್ಯಕ್ಷ ಗೋಪಾಲ ಹೊಸೂರು ಅವರ ನೇತೃತ್ವದಲ್ಲಿ ನಿಯೋಗವೊಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಈಜುಕೊಳಗಳನ್ನು ಆದಷ್ಟು ಶೀಘ್ರ ಪುನರಾರಂಭಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವೈದ್ಯಕೀಯ ಶಿಕ್ಷಣ ಸಚಿವ ಕೆ.ಸುಧಾಕರ್ ಮತ್ತು ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರೊಂದಿಗೆ ಬೆಳಿಗ್ಗೆ ಚರ್ಚಿಸಲಾಯಿತು. 20 ದಿನ ಈಜುಕೊಳಗಳನ್ನು ಮುಚ್ಚಲು ಆದೇಶ ನೀಡಿರುವುದರಿಂದ ಸ್ಪರ್ಧಿಗಳ ತರಬೇತಿಗೆ ತೊಂದರೆಯಾಗಿದೆ. ಒಲಿಂಪಿಕ್ಸ್‌ಗೆ ಅಭ್ಯಾಸ ಮಾಡುವವರಿಗೆ ತೀವ್ರ ನಿರಾಸೆಯಾಗಿದೆ. ಹೊಸ ಮಾರ್ಗಸೂಚಿಯಿಂದಾಗಿ ಸಾವಿರಕ್ಕೂ ಹೆಚ್ಚು ಈಜುಪಟುಗಳ ಅಭ್ಯಾಸಕ್ಕೆ ಕುತ್ತುಂಟಾಗಿದೆ' ಎಂದು ಗೋಪಾಲ ಹೊಸೂರು ತಿಳಿಸಿದ್ದಾರೆ.




ಈಜುಕೊಳಗಳನ್ನು ಪುನರಾರಂಭಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿ ಈಜುಪಟುಗಳು, ಪಾಲಕರು, ಕೋಚ್‌ಗಳು ಮತ್ತು ಈಜುಕೊಳಗಳ ಸಿಬ್ಬಂದಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಕೋವಿಡ್–19ರ ಕಾರಣದಿಂದ ಕಳೆದ ವರ್ಷ ಅನೇಕ ತಿಂಗಳು ಈಜುಕೊಳಗಳನ್ನು ಮುಚ್ಚಲಾಗಿತ್ತು. ಇದರಿಂದ ಕ್ರೀಡಾಪಟುಗಳ ಅಭ್ಯಾಸಕ್ಕೂ ಕೋಚ್‌ಗಳು ಮತ್ತು ಈಜುಕೊಳ ಸಿಬ್ಬಂದಿಯ ನಿತ್ಯಜೀವನಕ್ಕೂ ತೊಂದರೆಯಾಗಿತ್ತು. ಈ ವರ್ಷದ ಆರಂಭದಲ್ಲಿ ಈ ಕ್ಷೇತ್ರ ಚೇತರಿಕೆಯ ಹಾದಿಗೆ ಮರಳಿತ್ತು. ಅಷ್ಟರಲ್ಲಿ ಮತ್ತೆ ಆಘಾತವಾಗಿದೆ.

ರಾಜ್ಯದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಈಜುಕೊಳವನ್ನು ಆಶ್ರಯಿಸಿದ್ದಾರೆ. ರಾಜ್ಯದಲ್ಲಿ ಅಭ್ಯಾಸ ಮಾಡಿದ ಅನೇಕ ಮಂದಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಪದಕಗಳನ್ನು ಗಳಿಸಿಕೊಟ್ಟಿದ್ದಾರೆ. ಮೂರು ದಶಕಗಳಲ್ಲಿ ದೇಶದಲ್ಲಿ ರಾಜ್ಯದ ಈಜುಪಟುಗಳು ಪ್ರಾಬಲ್ಯ ಸಾಧಿಸಿದ್ದಾರೆ. ದುರದೃಷ್ಟವಶಾತ್ ಈಗ ಅಭ್ಯಾಸಕ್ಕೆ ತೊಂದರೆಯಾಗಿದೆ' ಎಂದು ರಾಜ್ಯ ಈಜುಸಂಸ್ಥೆಯ ಕಾರ್ಯದರ್ಶಿ ಸತೀಶ್ ಎಂ. ಕುಮಾರ್ ತಿಳಿಸಿದ್ದಾರೆ.

## ನಿರ್ಬಂಧ ತೆರವಿಗೆ ಆಗ್ರಹ

ಮೈಸೂರು: 'ಕೋವಿಡ್–19 ಹೊಸ ಮಾರ್ಗಸೂಚಿಯಂತೆ ಈಜುಕೊಳ ಮುಚ್ಚಿರುವುದರಿಂದ ತರಬೇತಿಗೆ ತೊಂದರೆಯಾಗಿದೆ. ಚಿತ್ರಮಂದಿರ ಮತ್ತು ಜಿಮ್ ಮಾದರಿಯಲ್ಲೇ ಈಜುಕೊಳ ತೆರೆಯಲು ಅವಕಾಶ ನೀಡಬೇಕು' ಎಂದು ರಾಜ್ಯ ಈಜು ಸಂಸ್ಥೆ ಕಾರ್ಯಕಾರಿ ಸಮಿತಿ ಸದಸ್ಯ ಎಸ್. ಸುಂದರೇಶ್ ಒತ್ತಾಯಿಸಿದರು.

'ಈಜುಕೊಳಗಳ ಮೇಲೆ ಹೇರಿರುವ ನಿರ್ಬಂಧದಿಂದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳ ತರಬೇತಿಗೆ ಅಡ್ಡಿಯಾಗಿದೆ. ರಾಜ್ಯದಲ್ಲಿರುವ 50ಕ್ಕೂ ಹೆಚ್ಚು ಈಜುಕೊಳಗಳಲ್ಲಿ ನಿತ್ಯ ಸಾವಿರಾರು ಸ್ಪರ್ಧಿಗಳು ಅಭ್ಯಾಸ ಮಾಡುತ್ತಾರೆ. ಈಗ ಅವರೆಲ್ಲ ತೊಂದರೆಗೆ ಸಿಲುಕಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸಾರ್ವಜನಿಕ ಹಾಗೂ ಖಾಸಗಿ ಈಜುಕೊಳಗಳಲ್ಲಿ ಸುರಕ್ಷಾ ನಿಯಮಾವಳಿ ಪಾಲಿಸಲಾಗುತ್ತಿದೆ. ಕ್ಲೋರಿನೇಟೆಡ್ ಈಜುಕೊಳದ ನೀರಿನಲ್ಲಿ ಕೋವಿಡ್ ಹರಡಲು ಸಾಧ್ಯವಿಲ್ಲ. ಈಜುವುದರಿಂದ ಶ್ವಾಸಕೋಶಗಳು ಬಲವಾಗುತ್ತವೆ' ಎಂದರು. ಈ ವೇಳೆ ಸಂಸ್ಥೆ ಜಂಟಿ ಕಾರ್ಯದರ್ಶಿ ನಾಭಿರಾಜ್ ಇದ್ದರು.



## ಸಂಕ್ಷಿಪ್ತ ಸುದ್ದಿ

### 'ಬೆಟ್ಟಿಂಗ್ ನಿಯಮಬದ್ಧ ಮಾಡುವುದು ಬೇಡ'

ನವದೆಹಲಿ (ಪಿಟಿಐ): ಬೆಟ್ಟಿಂಗ್‌ಗೆ ಕಾನೂನಿನಲ್ಲಿ ಅವಕಾಶ ನೀಡಬಾರದು ಎಂದು ಹೇಳಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಭ್ರಷ್ಟಾಚಾರ ತಡೆ ಘಟಕದ (ಎಸಿಯು) ಮುಖ್ಯಸ್ಥ ಶಬೀರ್ ಹುಸೇನ್ ಖಂಡ್ವಾವಾಲ ಬೆಟ್ಟಿಂಗ್ ನಿಯಮಬದ್ಧವಾದರೆ ಮ್ಯಾಚ್ ಫಿಕ್ಸಿಂಗ್‌ಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ಗುಜರಾತ್‌ನ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಹುಸೇನ್ ಅವರನ್ನು ಬಿಸಿಸಿಐ ಸೋಮವಾರ ಎಸಿಯು ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ. ಈವರೆಗೆ ರಾಜಸ್ಥಾನದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಅಜಿತ್ ಸಿಂಗ್ ಅವರು ಎಸಿಯು ಮುಖ್ಯಸ್ಥರಾಗಿದ್ದರು. ಅಧಿಕಾರ ವಹಿಸಿಕೊಂಡ ನಂತರ ಮಾತನಾಡಿದ ಶಬೀರ್ 'ದೇಶದ ಸಣ್ಣ ಲೀಗ್‌ಗಳಲ್ಲಿ ನಡೆಯುವ ಅಕ್ರಮಗಳನ್ನು ಪತ್ತೆಹಚ್ಚುವುದಕ್ಕೆ ಆದ್ಯತೆ ನೀಡಲಾಗುವುದು' ಎಂದು ತಿಳಿಸಿದರು.

'ಬೆಟ್ಟಿಂಗ್ ನಿಯಮಬದ್ಧಗೊಳಿಸಿದರೆ ಸರ್ಕಾರದ ಖಜಾನೆಗೆ ಸಾಕಷ್ಟು ಹಣ ಹರಿದುಬರುತ್ತದೆ ಎಂಬುದು ಸಾಮಾನ್ಯ ನಂಬಿಕೆ. ಆದರೆ ಅದಕ್ಕೆ ನಕಾರಾತ್ಮಕವಾದ ಅನೇಕ ಮುಖಗಳು ಇವೆ. ಎಸಿಯು ಈಗ ಇರುವ ನಿಯಮಗಳನ್ನು ಇನ್ನಷ್ಟು ಬಿಗಿಯಾಗಿಸಲು ಪ್ರಯತ್ನಿಸಲಿದೆ. ಅಂಥ ಸಮಯದಲ್ಲಿ ಬೆಟ್ಟಿಂಗ್‌ಗೆ ಕಾನೂನಿನ ರಕ್ಷಣೆ ಇರಬಾರದು' ಎಂದು ಅವರು ಹೇಳಿದರು.

### ಬ್ಯಾಡ್ಮಿಂಟನ್ ಟೂರ್ನಿ ಮುಂದೂಡಿಕೆ

ಬೆಂಗಳೂರು: ಕೋವಿಡ್–19 ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ ಬೆಂಗಳೂರಿನಲ್ಲಿ ಏಪ್ರಿಲ್ 18ರಿಂದ ನಿಗದಿಯಾಗಿದ್ದ ಅಖಿಲ ಭಾರತ ರ‍್ಯಾಂಕಿಂಗ್ ಟೂರ್ನಿಯನ್ನು ಮುಂದೂಡಲು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಸೂಚಿಸಿದೆ.

ಈ ಕುರಿತು ಸೋಮವಾರ ಸುತ್ತೋಲೆ ಹೊರಡಿಸಿರುವ ಬಿಎಐ, 'ಸದ್ಯದ ಬಿಕ್ಕಟ್ಟು ಗಮನದಲ್ಲಿಟ್ಟು, ಅಖಿಲ ಭಾರತ ರ‍್ಯಾಂಕಿಂಗ್ ಟೂರ್ನಿಗಳನ್ನು ಮುಂದೂಡಲು ಅಧ್ಯಕ್ಷರು ಸೂಚಿಸಿದ್ದಾರೆ' ಎಂದು ಹೇಳಿದೆ.


### ಫುಟ್‌ಬಾಲ್: ಭಾರತ ಮಹಿಳೆಯರಿಗೆ ಸೋಲು

ನವದೆಹಲಿ: ಭಾರತ ಮಹಿಳಾ ಫುಟ್‌ಬಾಲ್ ತಂಡ ಉಜ್ಬೆಕಿಸ್ತಾನ ಮಹಿಳೆಯರ ಎದುರಿನ ಸೌಹಾರ್ದ ಪಂದ್ಯದಲ್ಲಿ 0–1 ಅಂತರದಲ್ಲಿ ಸೋಲನುಭವಿಸಿತು.

ತಾಷ್ಕೆಂಟ್‌ನಲ್ಲಿ ಸೋಮವಾರ ನಡೆದ ಪಂದ್ಯದ 87ನೇ ನಿಮಿಷದಲ್ಲಿ, ಫ್ರೀ ಕಿಕ್‌ನಲ್ಲಿ ಗೋಲು ಗಳಿಸಿದ ಮಫ್ತೂನಾ ಶೊಯಿ ಮೊವಾ ಆತಿಥೇಯರಿಗೆ ಜಯದ ಸವಿಯುಣ್ಣಿಸಿದರು.

### ಫಕ್ರ್ ಜಮಾನ್ 'ಮೋಸ'ದ ರನೌಟ್: ಡಿ ಕಾಕ್ ಬಚಾವ್

ಜೊಹಾನ್ಸ್‌ಬರ್ಗ್ (ಎಎಫ್‌ಪಿ): ಪಾಕಿಸ್ತಾನದ ಬ್ಯಾಟ್ಸ್‌ಮನ್ ಫಕ್ರ್ ಜಮಾನ್ ಅವರನ್ನು ಮೋಸದ ಮೂಲಕ ರನ್ ಔಟ್ ಮಾಡಿದ್ದರು ಎಂಬ ಆರೋಪದಿಂದ ದಕ್ಷಿಣ ಆಫ್ರಿಕಾ ವಿಕೆಟ್ ಕೀಪರ್ ಕ್ವಿಂಟನ್ ಡಿ ಕಾಕ್ ಮುಕ್ತರಾಗಿದ್ದಾರೆ. ಡಿ ಕಾಕ್ ನಿಯಮ ಉಲ್ಲಂಘಿಸಲಿಲ್ಲ ಎಂಬ ಅಭಿಪ್ರಾಯ ಪಂದ್ಯದ ಅಧಿಕಾರಿಗಳಿಂದ ವ್ಯಕ್ತವಾಗಿದೆ.



ಕ್ವಿಂಟನ್ ಡಿ ಕಾಕ್

ಭಾನುವಾರ ರಾತ್ರಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ 342 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ್ದ ಪಾಕಿಸ್ತಾನ ಜಯದ ಹಾದಿಯಲ್ಲಿದ್ದಾಗ ಫಕ್ರ್ ಜಮಾನ್ ಔಟಾಗಿದ್ದರು. ಜಮಾನ್ ಅವರ ರನ್ ಔಟ್ ಪಂದ್ಯದ ನಂತರ ವಿವಾದ ಸೃಷ್ಟಿಸಿತ್ತು. ಚೆಂಡನ್ನು ನಾನ್ ಸ್ಟ್ರೈಕರ್ ತುದಿಯತ್ತ ಎಸೆಯುವಂತೆ ಮರ್ಕರಮ್ ಅವರಿಗೆ ಡಿ ಕಾಕ್ ಸೂಚಿಸಿದ್ದರು. ಹೀಗಾಗಿ ಜಮಾನ್ ಕ್ರೀಸ್‌ನತ್ತ ನಿಧಾನವಾಗಿ ಓಡಿದ್ದರು. ಇದುವೇ ರನ್‌ಔಟ್‌ಗೆ ಕಾರಣ ಎಂಬ ಮಾತುಗಳು ಕೇಳಿಬಂದಿದ್ದವು.

ನಾನ್ ಸ್ಟ್ರೈಕರ್ ತುದಿಯತ್ತ ಚೆಂಡು ಎಸೆಯುತ್ತಾರೆ ಎಂದುಕೊಂಡಿದ್ದ ಜಮಾನ್ ಅತ್ತ ಓಡುತ್ತಿದ್ದ ಹ್ಯಾರಿಸ್ ರವೂಫ್ ತಲುಪಿದ್ದಾರೆಯೋ ಇಲ್ಲವೋ ಎಂದು ನೋಡುತ್ತ ಓಡಿದ್ದರು. ಹೀಗಾಗಿ ಬ್ಯಾಟ್ ಊರಲು ತಡ ಮಾಡಿದ್ದರು. ಆದರೆ ಅಷ್ಟರಲ್ಲಿ ಮರ್ಕರಮ್ ಎಸೆದ ಚೆಂಡನ್ನು ಹಿಡಿದು ಡಿಕಾಕ್ ಅವರು ಬೇಲ್ಸ್ ಎಗರಿಸಿದ್ದರು. ಒಂದು ಕ್ಷಣ ಅಚ್ಚರಿ ವ್ಯಕ್ತಪಡಿಸಿದ ಜಮಾನ್ ನಂತರ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದ್ದರು.

ಕೆಲವೇ ಕ್ಷಣಗಳಲ್ಲಿ ಸಾಮಾಜಿಕ ತಾಣಗಳಲ್ಲಿ ಡಿಕಾಕ್ ಮೇಲೆ ಆರೋಪಗಳ ಮಳೆ ಸುರಿಸಲಾಗಿತ್ತು. ನಕಲಿ ಫೀಲ್ಡಿಂಗ್ ಮೂಲಕ ಜಮಾನ್ ಅವರನ್ನು ಔಟ್ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಆದರೆ ರನ್ ಔಟ್‌ಗೆ ಸಂಬಂಧಿಸಿ ಜಮಾನ್ ಯಾರ ಮೇಲೆಯೂ ಆರೋಪ ಹೊರಿಸಿರಲಿಲ್ಲ.